# ಪ್ರಸಾದ

ದ್ವೈಮಾಸಿಕ

ಸಂಪುಟ ೩೬ ಸಂಚಿಕೆ ೫ ಸೆಪ್ಟೆಂಬರ್–ಅಕ್ಟೋಬರ್ ೨೦೨೧




ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದು, ಪೂಜ್ಯರೊಂದಿಗೆ ಸಮಾಲೋಚನೆ ಮಾಡಿದರು. ಸಂಸದರಾದ ಶ್ರೀ ಪ್ರತಾಪ ಸಿಂಹ, ಮೇಯರ್ ಶ್ರೀಮತಿ ಸುನಂದ ಪಾಲನೇತ್ರ, ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಎಸ್.ಎ. ರಾಮದಾಸ್, ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ ಮೊದಲಾದವರಿದ್ದಾರೆ (17.9.2021)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ವಿಜಯದಶಮಿಯಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಕುಟುಂಬ ಸಮೇತ ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಮುಖ್ಯಮಂತ್ರಿಗಳವರ ಧರ್ಮಪತ್ನಿ ಶ್ರೀಮತಿ ಚೆನ್ನಮ್ಮ ಬೊಮ್ಮಾಯಿ, ಶಾಸಕರಾದ ಶ್ರೀ ಎಲ್. ನಾಗೇಂದ್ರ, ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ ಮೊದಲಾದವರಿದ್ದಾರೆ (15.10.2021)

# ಪ್ರಸಾದ

**ಸಂಪುಟ 36 : ಸಂಚಿಕೆ 5** **ಸೆಪ್ಟೆಂಬರ್–ಅಕ್ಟೋಬರ್ 2021**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

---

ಮುಖಪುಟ ಚಿತ್ರ

ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೇ ಜಯಂತಿ ಮತ್ತು ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂ ಸುಮುದಾಯ ಬಾನುಲಿ ಕೇಂದ್ರದ ಉದ್ಘಾಟನಾ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಕೇಂದ್ರದ ಮೀನುಗಾರಿಕೆ, ಪಶುಸಂಗೋಪನೆ, ಡೈರಿ, ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವರಾದ ಡಾ. ಎಲ್. ಮುರುಗನ್‌ರವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಶ್ರೀ ಎಲ್. ನಾಗೇಂದ್ರ, ಶ್ರೀ ತನ್ವೀರ್ ಸೇಠ್, ಶ್ರೀಮತಿ ಸುನಂದಾ ಪಾಲನೇತ್ರ, ಶ್ರೀ ಎಸ್.ಎ. ರಾಮದಾಸ್, ಪ್ರೊ. ಜಿ. ಹೇಮಂತಕುಮಾರ್, ಶ್ರೀ ಎಂ. ಶಿವಣ್ಣನವರುಗಳಿದ್ದಾರೆ (29.8.2021)

**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ: 10/-**

## ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಹೊರತಳ್ಳುವ ವರ್ಣವ್ಯವಸ್ಥೆಗೆ ಪ್ರತಿಯಾಗಿ, ಒಳಗೊಳ್ಳುವ ಮನುಷ್ಯ ಸಂಸ್ಕೃತಿ ನಿರ್ಮಿಸಿದ ಬಸವಣ್ಣ 11
**ಡಾ. ಬಸವರಾಜ ಸಾದರ**

ಬಹುತ್ವದ ನೆಲೆಯಲ್ಲಿ ನಂಬಿಕೆ ಮತ್ತು ವೈಚಾರಿಕತೆ 17
**ರಂಜಾನ್ ದರ್ಗಾ**

ಶರಣರ ಚಿಂತನೆಯಲ್ಲಿ ಮನೆಯ ಪರಿಕಲ್ಪನೆ 27
**ಡಾ. ಸಿ. ನಾಗಣ್ಣ**

ಛಂದೋವಿಹಾರಿ ಸಂತಕವಿ ಶ್ರೀ ಕುಮಾರ ನಿಜಗುಣ ಸ್ವಾಮಿಗಳು (1933–2021) 36
**ನಗರ್ಲೆ ಶಿವಕುಮಾರ**

ಗಾಂಧಿ ಅರ್ಥಶಾಸ್ತ್ರದ ಪ್ರಸ್ತುತತೆ 42
**ಪ್ರೊ. ಆರ್.ಎಂ. ಚಿಂತಾಮಣಿ**

ವಾರ್ತಾವಿಹಾರ 49
**ಕುಮಾರಸ್ವಾಮಿ ವಿರಕ್ತಮಠ**

ಕೃತಿ–ಸ್ವೀಕೃತಿ 67

## ಮನವಿ

ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರಕಟಗೊಳ್ಳುತ್ತಿರುವ "ಪ್ರಸಾದ" ಸಂಚಿಕೆಯ ಕೆಳಕಂಡ ಪ್ರತಿಗಳು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ತಮ್ಮ ಬಳಿ ಅಥವಾ ಯಾವುದಾದರೂ ಗ್ರಂಥಾಲಯದಲ್ಲಿ ಲಭ್ಯವಿರುವ ಬಗ್ಗೆ ತಿಳಿಸಿದರೆ, ಜೆರಾಕ್ಸ್ ಮಾಡಿಸಿಕೊಂಡು ತಮಗೆ ಹಿಂತಿರುಗಿಸಲಾಗುವುದು. ದಯಮಾಡಿ ಸಹಕರಿಸಿ.

| ಕ್ರ.ಸಂ. | ಪ್ರಕಟವಾದ ವರ್ಷ | ದೊರಕದೆ ಇರುವ ಪ್ರತಿಗಳು |
|---|---|---|
| 1. | 1966 | ಈ ವರ್ಷದ ಎಲ್ಲ ಸಂಚಿಕೆಗಳು |
| 2. | 1967 | ಮೂರನೇ ಸಂಚಿಕೆ |
| 3. | 1970 | ಒಂದನೇ ಸಂಚಿಕೆ |
| 4. | 1971 | 2, 3, 4ನೇ ಸಂಚಿಕೆಗಳು |
| 5. | 1972 | 1, 3, 4ನೇ ಸಂಚಿಕೆಗಳು |
| 6. | 1975 | ಮೂರನೇ ಸಂಚಿಕೆ |
| 7. | 1976 | ಮೂರನೇ ಸಂಚಿಕೆ |
| 8. | 1984 | ಒಂದನೇ ಸಂಚಿಕೆ |

ಸಂಪರ್ಕದ ಮೊಬೈಲ್ ನಂ. 9986137389, 9964161363

ಸಂಪಾದಕರು

# ಗುರುವಾಣಿ

**ಅ**ಕ್ಟೋಬರ್ 2, ತಮ್ಮ ಇಡೀ ಬದುಕನ್ನು ಸತ್ಯಾನ್ವೇಷಣೆಗಾಗಿ ಮೀಸಲಿಟ್ಟ ಗಾಂಧೀಜಿಯವರ ಜನ್ಮದಿನ. ಅವರು ಇಪ್ಪತ್ತನೆಯ ಶತಮಾನದ ಒಂದು ಅದ್ಭುತ. ಎಲ್ಲ ಕಾಲಕ್ಕೂ, ಎಲ್ಲ ಜನಾಂಗಕ್ಕೂ ಅವರು ಒಂದು ಆದರ್ಶ. ಗಾಂಧೀಜಿಯವರ ದೇವರ ಕಲ್ಪನೆ ಬಹಳ ಎತ್ತರದ ಸ್ತರದ್ದು. ಅವರಿಗೆ ಸತ್ಯವೇ ದೇವರಾಗಿತ್ತು; ಅಹಿಂಸೆಯೇ ಆಯುಧವಾಗಿತ್ತು. ಆ ಕಾರಣಕ್ಕಾಗಿಯೇ ಅವರು ಆಡಿದ ಪ್ರತಿ ಮಾತನ್ನು ರಾಷ್ಟ್ರದ ಜನತೆ ದೈವವಾಣಿ ಎಂದೇ ಪರಿಗಣಿಸುತ್ತಿದ್ದರು. ಅವರ ಪ್ರಭಾವಕ್ಕೆ ಒಳಗಾದವರು ಕೇವಲ ಭಾರತೀಯರು ಮಾತ್ರವಲ್ಲ; ವಿಶ್ವದೆಲ್ಲೆಡೆಯಲ್ಲಿ ಎಲ್ಲ ಧರ್ಮೀಯರೂ ಇದ್ದರು.

ತಮ್ಮ ಸಂದೇಶವೇನು ಎಂದು ಕೇಳಿದವರಿಗೆಲ್ಲಾ ಯಾವ ಸುದೀರ್ಘ ಪ್ರವಚನವನ್ನೂ ಮಾಡದೆ ಅವರು ಹೇಳುತ್ತಿದ್ದುದು ಒಂದೇ ಮಾತು, 'ನನ್ನ ಜೀವನವೇ ನನ್ನ ಸಂದೇಶ'. ಈ ಮಾತನ್ನು ಒಬ್ಬ ಸಾಧಾರಣ ವ್ಯಕ್ತಿ ಹೇಳಲು ಖಂಡಿತಾ ಸಾಧ್ಯವಿಲ್ಲ. ಅದು ಜಾಗೃತ್ ಸ್ವಪ್ನ ಸುಷುಪ್ತಿ ಸ್ಥಿತಿಗಳಲ್ಲಿಯೂ, ಎಚ್ಚರತಪ್ಪದ ಆತ್ಮಶೋಧನೆ ಹಾಗೂ ಪರಹಿತಕ್ಕಾಗಿ ತನ್ನನ್ನು ತಾನು ತೆರೆದುಕೊಳ್ಳುವ ಮಹಾಚೇತನಕ್ಕೆ ಮಾತ್ರ ಸಾಧ್ಯವಾಗುವಂತಹ ಮಾತು. ಪ್ರಾಯಃ ಬಸವಣ್ಣನವರನ್ನು ಬಿಟ್ಟರೆ ಸಾರ್ವಜನಿಕ ಜೀವನಕ್ಕೆ ತನ್ನನ್ನು ತಾನು ಸಮರ್ಪಿಸಿಕೊಂಡು ಬದುಕುವ ಯಾವ ವ್ಯಕ್ತಿಗೂ ಗಾಂಧೀಜಿಯವರ ಈ ಎತ್ತರವನ್ನು ಏರುವುದು ಕಷ್ಟಸಾಧ್ಯವಾದುದು. ಅವರು 'ಮಹಾತ್ಮ' ರೆನಿಸಿಕೊಂಡದ್ದು, ಸ್ವಾತಂತ್ರ್ಯೋತ್ತರ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತಾತ್ಮಕವಾದ ಒಂದು 'ಸಣ್ಣ' ಸ್ಥಾನವನ್ನೂ ಅಲಂಕರಿಸದೆ 'ರಾಷ್ಟ್ರಪಿತ' ಪಟ್ಟವನ್ನು ಶಾಶ್ವತವಾಗಿ ಅಲಂಕರಿಸಿದುದು, ಈ ಕಾರಣಕ್ಕಾಗಿ.

ಮೂಲತಃ ಗಾಂಧೀಜಿ ಉನ್ನತ ಶಿಕ್ಷಣ ಪಡೆದ ಒಬ್ಬ ನ್ಯಾಯವಾದಿಗಳು. ಆಫ್ರಿಕಾಕ್ಕೆ ಅವರು ತೆರಳಿದುದೂ ಆ ವೃತ್ತಿಸಂಬಂಧವಾಗಿಯೇ. ಆದರೆ ಅವರು ರೈಲಿನಲ್ಲಿ ಅನುಭವಿಸಿದ ಅವಮಾನ ಅಲ್ಲಿನ ಕರಿಯರ ಬಿಡುಗಡೆಗಾಗಿ ಹೋರಾಡಲು ಅವರನ್ನು ಪ್ರೇರೇಪಿಸಿತು. ಹಾಗೆಯೇ ಪ್ರಯಾಣ ಕಾಲದಲ್ಲಿ ಅವರು ಓದಿದ ರಸ್ಕಿನ್ನನ "Unto This Last" ಕೃತಿಯು ಅವರ ಮನಸ್ಸನ್ನು ಸಂಪೂರ್ಣ ಪರಿವರ್ತನೆ ಮಾಡಿತು.

ಮುಂದೆ ಭಾರತಕ್ಕೆ ಬಂದ ಗಾಂಧೀಜಿ, ವಕೀಲಿ ವೃತ್ತಿಯನ್ನು ತೊರೆದು, ತಮ್ಮ ಪ್ರವೃತ್ತಿ ಸದಾ ಎಚ್ಚರಿಸುತ್ತಿದ್ದ ದೇಶಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು. ಬಹು

ದೊಡ್ಡ ವಿದ್ವಾಂಸರೂ, ಚಿಂತಕರೂ ಆಗಿದ್ದರೂ ಅವರು ಮೌನಕ್ಕೆ ಹೆಚ್ಚು ಮಹತ್ವ ಕೊಡುತ್ತಿದ್ದರು; ಮಿತಭಾಷೆಗೆ ಹೆಚ್ಚು ಒತ್ತುಕೊಡುತ್ತಿದ್ದರು.

> ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ
> ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಭಿಜಾಯತೇ
> ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ
> ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ

ಮನುಷ್ಯ, ವಿಷಯಗಳ ಚಿಂತನೆ ಮಾಡುತ್ತಿದ್ದರೆ ಅವುಗಳಲ್ಲಿ ಅವನಿಗೆ ಆಸಕ್ತಿ ಹುಟ್ಟುತ್ತದೆ. ಆಸಕ್ತಿಯಿಂದ ಕಾಮ, ಅದರಿಂದ ಕ್ರೋಧ, ಕ್ರೋಧದಿಂದ ಸಂಮೋಹ ಅಥವಾ ವಿವೇಕರಾಹಿತ್ಯವುಂಟಾಗುತ್ತದೆ. ಸಂಮೋಹದಿಂದ ಸ್ಮೃತಿಭ್ರಮಣೆಯೂ ಸ್ಮೃತಿಭ್ರಮಣೆಯಿಂದ ಬುದ್ಧಿನಾಶವೂ ಉಂಟಾಗುತ್ತದೆ. ಬುದ್ಧಿ ನಷ್ಟವಾದ ಮೇಲೆ ಮನುಷ್ಯನು ಪೂರ್ತಿ ನಾಶವಾದಂತೆಯೇ. ಭಗವದ್ಗೀತೆಯ ಈ ಶ್ಲೋಕ ಅವರ ಮೇಲೆ ಗಾಢವಾದ ಪರಿಣಾಮವನ್ನು ಉಂಟುಮಾಡಿತ್ತು. ಅದಕ್ಕಾಗಿಯೇ ಅವರು ಅದನ್ನು ತಮ್ಮ ಬದುಕಿನ ದಾರಿದೀಪ ಎಂದೇ ಭಾವಿಸಿದ್ದರು.

ಅವರಿಗೆ ಬೇರೆ ಬೇರೆ ಧರ್ಮದವರು ಧರ್ಮಾಂತರಕ್ಕೆ ಆಕರ್ಷಣೆಗಳನ್ನು ಒಡ್ಡಿದರೂ, ಭಗವದ್ಗೀತೆಯಲ್ಲಿನ ಜೀವನ ದೃಷ್ಟಿ ಅವರನ್ನು ಸ್ವಧರ್ಮದಲ್ಲಿಯೇ ಭದ್ರವಾಗಿ ಬೇರೂರುವಂತೆ ಮಾಡಿತು.

ಅವರು ಧರ್ಮಕ್ಕೂ ರಾಜಕೀಯಕ್ಕೂ ಅವಿನಾಭಾವ ಸಂಬಂಧವಿದೆ ಎಂದು ನಂಬಿದ್ದರು. ಧರ್ಮರಹಿತ ರಾಜನೀತಿ ಕೊರಳಿಗೆ ಬಿದ್ದ ನೇಣು ಎಂದು ಹೇಳಿದರು. ರಾಜನೀತಿಯೇ ಬೇರೆ, ಧರ್ಮವೇ ಬೇರೆ ಎಂದು ಹೇಳುವ ಧರ್ಮ, ಧರ್ಮವೇ ಅಲ್ಲ; ರಾಜನೀತಿಯನ್ನು ಪರಿಶುದ್ಧಗೊಳಿಸದ ಹೊರತು ಧರ್ಮರಕ್ಷಣೆ ಸಾಧ್ಯವಿಲ್ಲ ಎಂದರು.

"ನಾವು ಆಧುನಿಕ ಭೌತಭೋಗದ ಹುಚ್ಚನ್ನು ಎಷ್ಟರಮಟ್ಟಿಗೆ ನಮ್ಮ ಗುರಿಯಾಗಿ ಮಾಡಿಕೊಳ್ಳುತ್ತೇವೆಯೋ ಅಷ್ಟರಮಟ್ಟಿಗೆ ನಾವು ಅಭಿವೃದ್ಧಿಯಲ್ಲಿ ಅಧೋಗತಿಗೆ ಇಳಿಯುತ್ತಿದ್ದೇವೆ" ಎನ್ನುವುದು ಅವರ ಯಾವತ್ತೂ ನಿಲುವಾಗಿತ್ತು.

ಗಾಂಧಿ ಜಯಂತಿಯ ಈ ಶುಭ ಸಂದರ್ಭದಲ್ಲಿ ಅವರ ಈ ಆಶಯಗಳನ್ನು ಅರ್ಥಮಾಡಿಕೊಂಡು ಭಾರತೀಯರು ಮುನ್ನಡೆಯುವ ಸಂಕಲ್ಪ ಮಾಡಬೇಕಾಗಿದೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

**ಕೆ**ಲವು ದಶಕಗಳ ಹಿಂದೆ ಸಾಮಾಜಿಕರಿಂದ ಮತ್ತು ಸರ್ಕಾರದ ವತಿಯಿಂದ ಇಷ್ಟೊಂದು ಸಂಖ್ಯೆಯಲ್ಲಿ ಜಯಂತಿಗಳು ಆಚರಿಸಲ್ಪಡುತ್ತಿರಲಿಲ್ಲ. ಈಗ ಅವುಗಳ ಸಂಖ್ಯೆ ಬೇರೆ ಬೇರೆ ಕಾರಣಗಳಿಗಾಗಿ ವರ್ಷದಿಂದ ವರ್ಷಕ್ಕೆ ವೃದ್ಧಿಸುತ್ತಲೇ ಇವೆ. ಇವುಗಳ ಆಚರಣೆಯ ಮೂಲ ಉದ್ದೇಶ, ಆ ಮಹಾಪುರುಷರ ಜನ್ಮದಿನದ ಸ್ಮರಣೆಯನ್ನು ನಿಮಿತ್ತವಾಗಿಸಿಕೊಂಡು ಅವರು ನಡೆದ ಹಾದಿ, ನುಡಿದ ಪರಿ, ಅವುಗಳಿಂದ ಪ್ರೇರಣೆ ಪಡೆದು ನಾವು ಮಾಡಿಕೊಳ್ಳಬೇಕಾದ ಆತ್ಮಶೋಧನೆ ಹಾಗೂ ಇಡಬೇಕಾದ ಮುಂದಿನ ಹೆಜ್ಜೆಗಳು – ಇವುಗಳನ್ನು ಮನನ, ಪುನರ್ ಮನನ ಮಾಡಿಕೊಳ್ಳುವುದಾಗಿದೆ.

ಆದರೆ ಇತ್ತೀಚೆಗೆ ಇವುಗಳು ತಮ್ಮ ಮೂಲ ಉದ್ದೇಶವನ್ನು ಕಳೆದುಕೊಂಡು, ಕೇವಲ ಆಯಾ ಸಮುದಾಯಗಳನ್ನು ತೃಪ್ತಿಪಡಿಸುವ ಕೇವಲ ರಾಜಕೀಯ ತಂತ್ರಗಾರಿಕೆ ಮಾತ್ರವಾಗಿರುವಂತೆ ಕಂಡುಬರುತ್ತಿವೆ. ಅದಕ್ಕೆ ನಿಯೋಜಿತರಾದ ಅಧಿಕಾರಿಗಳ ಗೊಣಗಾಟ, ರಾಜಕೀಯ ವ್ಯಕ್ತಿಗಳ ವೇದಿಕೆಯ ಮೇಲಿನ ಆರ್ಭಟ ಆಯಾ ಸಮುದಾಯ ಗಳನ್ನು ಓಲೈಸುವ ಮಾತಿನ ರೀತಿ ರಿವಾಜುಗಳು; ಯಾವುದೇ ಗಾಂಭೀರ್ಯ, ಗೌರವ ಭಾವನೆಗಳಿಲ್ಲದ ಮೆರವಣಿಗೆ ಇವು ಮೇಲ್ನೋಟಕ್ಕೆ ಎದ್ದುಕಾಣುವ ಕೆಲವು ಅಂಶಗಳು. ಅದರಲ್ಲೂ ಇಂತಹ ಜಯಂತಿಗಳು ಭಾನುವಾರ ಬಂದುಬಿಟ್ಟರಂತೂ, ಸಿಕ್ಕುವ ಒಂದು ರಜವೂ ಹೋಯಿತಲ್ಲ ಎಂದು ದೂಷಿಸುವವರಿಗೂ ಕೊರತೆ ಇಲ್ಲ.

ಅಸಂಖ್ಯ ಜಾತಿಗಳು, ಉಪಜಾತಿಗಳು, ಪಂಗಡಗಳು ಇರುವ ಈ ರಾಷ್ಟ್ರದಲ್ಲಿ, ಪ್ರತಿಯೊಂದು ಸಮುದಾಯವೂ ತನ್ನ 'ಪೂರ್ವ'ವನ್ನು ಒಬ್ಬ ಮಹಾವ್ಯಕ್ತಿಯ ಮೂಲಕವೇ ಗುರ್ತಿಸಿಕೊಳ್ಳಲು ಬಯಸುತ್ತದೆ. ತಂದೆಯ ಮೂಲಕ ಜಾತಿಯನ್ನೂ, ಧರ್ಮವನ್ನೂ ಹೇಳುವುದು ನಮ್ಮಲ್ಲಿ ಒಂದು ಸಂಪ್ರದಾಯ. ಹಾಗೆಯೇ ಕಾನೂನಾತ್ಮಕವಾಗಿಯೂ ಇದು ಒಪ್ಪಿತವಾಗಿದೆ. ಹಾಗೊಂದು ಪಕ್ಷ ಅಂತಹ ಮಹಾಪುರುಷನ ಜಾತಿ ತಂದೆ ಮೂಲಕ ಸಾಬೀತಾಗದೇಹೋದರೆ, ತಾಯಿಯ ಜಾತಿಯ ಮೂಲಕವೂ ಸ್ಥಾಪಿಸಿಕೊಳ್ಳುವ ಪ್ರಯತ್ನವೂ ನಡೆದಿರುವುದನ್ನು ನೋಡುತ್ತಿದ್ದೇವೆ. ಆದರೆ ಇದು ನಮ್ಮಲ್ಲಿನ ಸಂಪ್ರದಾಯವೂ ಅಲ್ಲ; ಕಾನೂನಿನ ಒಪ್ಪಿತ ಮುದ್ರೆಯೂ ಇದಕ್ಕಿಲ್ಲ. ಇನ್ನೂ ಕೆಲವೊಮ್ಮೆ ಒಬ್ಬನೇ ವ್ಯಕ್ತಿಯನ್ನು ಇವನು ನಮ್ಮವನು ಎಂದುಕೊಂಡು ಬೇರೆ ಬೇರೆ

ಜಾತಿಯವರು, ಜಯಂತಿಯನ್ನು ಆಚರಿಸುವ ಸಂಪ್ರದಾಯವೂ ಇಲ್ಲಿ ಒಪ್ಪಿತವಾಗಿ, ಅದು ಹಾಗೆಯೇ ನಡೆದುಕೊಂಡು ಬರುತ್ತಿರುವುದನ್ನೂ ನೋಡಬಹುದು. ಇವುಗಳು ಹೋಗಲಿ ಪುರಾಣದ ವ್ಯಕ್ತಿಯನ್ನು ಎಳೆದುತಂದು ಇವನು ನಮ್ಮ ಜಾತಿ ಎಂದು ಹೇಳಿಕೊಂಡು ಜಯಂತಿ ಆಚರಿಸುವುದನ್ನೂ ಕಾಣುತ್ತೇವೆ. ಅವನು ಹೇಗೆ ಆ ಜಾತಿಯವನು ಎನ್ನುವುದಕ್ಕೆ ಒಂದು ಸಣ್ಣ ಸಮರ್ಥನೆಯೂ ಇರುವುದಿಲ್ಲ. ಏಕೆಂದರೆ ಪುರಾಣಗಳು ಸೃಷ್ಟಿಯಾದ ಕಾಲದಲ್ಲಿ ಇವರ ಈ ಜಾತಿಯ ಪರಿಕಲ್ಪನೆಯೇ ಇರಲಿಲ್ಲ. ಇಷ್ಟಾಗಿಯೂ ಇವುಗಳ ಬಗ್ಗೆ ಮುಕ್ತವಾಗಿ ಮಾತನಾಡುವ ಸ್ಥಿತಿಯಲ್ಲಿಯೂ ನಾವಿಲ್ಲ. ಹಾಗೆ ಮಾತನಾಡಿದರೆ ಅದು ರಾಜಕೀಕರಣಗೊಂಡು, 'ಚಿಂತಕರ' ತಲೆದಂಡಕ್ಕೂ ಕಾರಣವಾಗಿಬಿಡುತ್ತದೆ. 'ಮತಬಲ' ಎನ್ನುವುದು 'ನಿಶಿತಮತಿ'ಯನ್ನೂ ಮಂಕುಗೊಳಿಸಿ ಬಿಟ್ಟಿರುವುದು ನಮ್ಮಲ್ಲಿನ ಬಹು ದೊಡ್ಡ ದುರಂತ. ಇಂತಹ ಅವಿಚಾರಗಳಿಗೆ ಕೊನೆ ಎಂದು?

ಇದು ಗಾಂಧಿ ಜಯಂತಿಯ ಮಾಸವಾಗಿರುವುದರಿಂದ ಗಾಂಧೀಜಿಯವರ ಕೆಲವು ಮಾತುಗಳನ್ನು ನಾವು ಮನನ ಮಾಡಬಹುದು. ಗಾಂಧೀಜಿ ನಮ್ಮ ಹಾಗೆ ದೇವಸ್ಥಾನಗಳಿಗೆ, ತೀರ್ಥಕ್ಷೇತ್ರಗಳಿಗೆ ಹೋಗಿ ಪುಣ್ಯಪ್ರಾಪ್ತಿಗಾಗಿ ಯಾಂತ್ರಿಕವಾಗಿ ಹೋಮ ಹವನಗಳನ್ನು, ಪೂಜೆಪುನಸ್ಕಾರಗಳನ್ನು ಮಾಡುವ 'ಆಸ್ತಿಕ'ರಾಗಿರಲಿಲ್ಲ. ಅವರು ಮೌಲ್ಯಗಳನ್ನೇ ದೇವರೆಂದು ನಂಬಿದವರು. ಆ ಕಾರಣಕ್ಕಾಗಿ ಮೌಲ್ಯದ ಸಂಕೇತವಾಗಿದ್ದ ರಾಮನಾಮವನ್ನು ಸದಾ ಜಪಿಸುತ್ತಿದ್ದರು. ಅಷ್ಟೇ ಅಲ್ಲ ರಾಮನ ಆದರ್ಶ ಎಷ್ಟರಮಟ್ಟಿಗೆ ಅವರ ಪ್ರಜ್ಞೆಯ ಸ್ತರದಲ್ಲಿ ಬೇರೂರಿತ್ತು ಎಂದರೆ, ಅವರು ತಮ್ಮ ಕೊನೆಯ ಉಸಿರು ಎಳೆಯುವಾಗಲೂ 'ಹೇ ರಾಮ್' ಎನ್ನುವುದೇ ಅವರ ಮಂತ್ರವಾಗಿತ್ತು. ಅವರ ಪಾಪ ಪುಣ್ಯಗಳ ಪರಿಕಲ್ಪನೆಯೇ ಬೇರೆಯಾಗಿತ್ತು. ಸಮಾಜದ ಮೇಲೆ ದುಷ್ಪರಿಣಾಮ ವನ್ನು ಉಂಟುಮಾಡುವ ವ್ಯಕ್ತಿಯ ಆತ್ಮವನ್ನು ನಾಶಮಾಡುವ ಕ್ರಿಯೆಗಳನ್ನು ಪಾಪ ಎಂದು ಪರಿಗಣಿಸಿದ ಅವರು ಈ ಏಳು ರೀತಿಯ ಪಾಪಗಳನ್ನು (ಸಪ್ತ ಸಾಮಾಜಿಕ ಪಾಪಗಳು) ಹೇಳುತ್ತಾರೆ : 1) ತತ್ವರಹಿತ ರಾಜಕೀಯ 2) ಶ್ರಮವಿಲ್ಲದ ಸಂಪತ್ತು 3) ನೈತಿಕತೆಯಿಲ್ಲದ ವಾಣಿಜ್ಯ 4) ಶೀಲವಿಲ್ಲದ ಶಿಕ್ಷಣ 5) ತ್ಯಾಗವಿಲ್ಲದ ಪೂಜೆ 6) ಮಾನವೀಯತೆ ಇಲ್ಲದ ವಿಜ್ಞಾನ 7) ಆತ್ಮಸಾಕ್ಷಿಯಿಲ್ಲದ ಭೋಗ.

ಮಹಾತ್ಮರು ಯಾವುದನ್ನು ಸಪ್ತ ಸಾಮಾಜಿಕ ಪಾಪಗಳು ಎಂದು ಕರೆದರೋ, ಅವೆಲ್ಲವೂ ಈಗ ಎಲ್ಲ ಕ್ಷೇತ್ರಗಳಲ್ಲಿಯೂ ಒಪ್ಪಿತ ಮೌಲ್ಯಗಳಾಗಿ ವಿಜೃಂಭಿಸುತ್ತಿರುವುದನ್ನು ಕಾಣಬಹುದಾಗಿದೆ. 'ಕುರುಡು ಕಾಂಚಾಣ' ಎನ್ನುವುದು ಮಹಾ ಮಾಯೆಯಾಗಿ ಇಂದು ಇಡೀ ಮನುಕುಲವನ್ನು ಕಿರುಬೆರಳಿನಲ್ಲಿ ಕುಣಿಸುತ್ತಿದೆ. ನಮ್ಮ ಮನೆಯೊಳಗೆ ಮನೆಯೊಡೆಯನಿಲ್ಲದ ಕಾರಣಕ್ಕೆ ಒಳಗೆ ಸೇರಿಕೊಂಡ ವಿಕೃತಿಯ ನಾಯಿ ನರಿಗಳು

ಭಯಂಕರವಾಗಿ ಊಳಿಡುತ್ತಿವೆ. ಒಳಗೆ ತುಂಬಿರುವ 'ರಜ'ವನ್ನೇ ರಜತವೆಂದು ಭಾವಿಸಿ ಅದರ ಮೇಲೆ ಎಲ್ಲರೂ ಹೊರಳಾಡುತ್ತಿದ್ದೇವೆ. ಬದುಕಿನ ಹೆಂಡದ ಮಡಕೆ ಅಲಂಕಾರಗೊಂಡು ಹೊರಗೆ ಲಕಲಕ ಹೊಳೆಯುತ್ತಿದೆ. ಎಲ್ಲ ಅಕ್ರಮಗಳೂ ಕಾನೂನು ಪ್ರಕಾರ ಸಕ್ರಮವಾಗಿಯೇ ನಡೆಯುತ್ತಿವೆ.

ಈ ಎಲ್ಲದರ ನಡುವೆಯೂ ವರ್ಷದಲ್ಲಿ ಒಂದು ದಿನ ಯಾಂತ್ರಿಕವಾಗಿ 'ಗಾಂಧಿ ಜಯಂತಿ' ಆಚರಿಸಲ್ಪಡುತ್ತಿದೆ. ಗೋಡ್ಸೆ ಗಾಂಧಿಯನ್ನು ಒಮ್ಮೆ ಕೊಂದರೆ, ನಾವು ನಿತ್ಯವೂ ಕೊಲ್ಲುತ್ತಿದ್ದೇವೆ. ಇದಕ್ಕೆಲ್ಲ ಮುಖ್ಯ ಕಾರಣ ಆತ್ಮಸಾಕ್ಷಿಯಿಲ್ಲದ ನಮ್ಮ ಭೋಗದ ಬಯಕೆ ಹಾಗೂ ಅಧಿಕಾರ ದಾಹ. ಈ ಎಲ್ಲವನ್ನೂ ಕಂಡ ಡಾ. ಜಿ.ಎಸ್. ಶಿವರುದ್ರಪ್ಪನವರ ಕವಿಹೃದಯ ಮಿಡಿದದ್ದು ಹೀಗೆ–

### ಗಾಂಧೀ ಶತಮಾನೋತ್ಸವ

ಹಬ್ಬಿರುವ ಮಬ್ಬಿನೊಳಗೊಬ್ಬನೇ ಮುದುಕ
ಕೋಲೂರಿ ನಡೆದಿದ್ದಾನೆ :
ಹಾದಿಯುದ್ದಕ್ಕೂ ಹಾಳುಬಿದ್ದಿರುವ ಹೂವಿನ ತೋಟ
ಇನ್ನೂ ಹೊಗೆಯಾಡುತ್ತಿರುವ ಬೆಂಕಿ,
ಕಾಲಿನ ಕೆಳಗೆ ರಕ್ತದ ಕೆಸರು,
ಕೋಟೆ ಬಿರುಕುಗಳಲ್ಲಿ ಯಾರದೋ ನಿಟ್ಟುಸಿರು,
ಗೆದ್ದಲಡರುತ್ತಿರುವ ಕಂಬಗಳ ಮುರುಕು ಮಹಲು,
ಹೊಸದಾಗಿ ರಿಪೇರಿ ಮಾಡಿರುವ ರಸ್ತೆಗಳ ಮೇಲೆ
ನಾಯಿಗಳ ಕಚ್ಚಾಟ,
ಈ ಎಲ್ಲದರ ನಡುವೆ, ಕೇಳುತ್ತಲಿದೆ
ಹಬ್ಬಿರುವ ಮಬ್ಬಿನೊಳಗೊಬ್ಬನೇ ಮುದುಕ
ಕೋಲೂರಿ ನಡೆವ ಸದ್ದು.

* * *

ನಾವೂ ಇದ್ದೇವೆ–
ಮೂಲೆಯಲ್ಲಿ ಮಿಣ ಮಿಣ ಮೊಂಬತ್ತಿ ಮಬ್ಬಿನ ಸುತ್ತ
ಎಲೆ ತಿರುವಿ ಹಾಕುತ್ತ,
ಅವರಿವರ ಪಾಚಿಗಟ್ಟಿದ ಮಾತಿನ ಮೇಲೆ ಕಾಲೂರಿ ನಡೆಯುತ್ತ,
ಗದ್ದುಗೆಯ ಮೇಲೆ ವಿರಾಜಿಸುವ ಹದ್ದುಗಣ್ಣಿನ
ಮೃಗರಾಜನೆದುರು ಪಂಚತಂತ್ರ ಪ್ರತಿಭೆಯಲ್ಲಿ ಬಾಲವಲ್ಲಾಡಿಸುತ್ತಾ,
ಗುಂಪಿನಲ್ಲಿ ಗೋವಿಂದವಾಗುತ್ತ,
ಬೇಯುವಲ್ಲೆಲ್ಲಾ ನುಗ್ಗಿ, ಕೈಗೆ ಸಿಕ್ಕಷ್ಟು ಲಪಟಾಯಿಸುತ್ತಾ
ಬೀದಿ ಧೂಳುಗಳ, ಗಲ್ಲಿಗಳ, ಕೊಳಕುಗಳ,

ಕಿರುಚುಗಳ, ಬಣ್ಣಗಳ, ಕಣ್ಣುಗಳ ನಡೂಮಧ್ಯೆ
ನಾವೂ ಇದ್ದೇವೆ.

* * *

ಇದ್ದಕ್ಕಿದ್ದಂತೆ ಇದರೊಳಗೆ ಯಾರೋ
ಕೋಲು ಕುಟ್ಟುವ ಸದ್ದು ಕೇಳುತ್ತದೆ.
ಯಾರೋ ಸಣ್ಣಗೆ ಕಣ್ತೆರೆದು ನಮ್ಮೊಳಗನ್ನೆಲ್ಲಾ
ಟಾರ್ಚ್‌ಹಾಕಿ ಝುಗ್ಗೆಂದು ಬಯಲಿಗೆಳೆದಂತೆ
ಭಯವಾಗುತ್ತದೆ.
ಎಲ್ಲಿ ಲೆಕ್ಕದ ಬುಕ್ಕು ಎಂದು ತನಿಖೆ ಮಾಡುವ ಹಾಗೆ
ತೋರುತ್ತದೆ.
ನಾವು, ಅಂಗಾತ ಬಿದ್ದ ಜಿರಲೆಗಳು ಚಡಪಡಿಸಿ, ಹೇಗೊ ಎದ್ದು
ಬಿಚ್ಚಿಟ್ಟ ಬಟ್ಟೆಗಳಿಗಾಗಿ ತಡವರಿಸುತ್ತ
ಕೈಗೆ ಸಿಕ್ಕಿದ ಚಿಂದಿಯಲ್ಲೇ ಮೈಮುಚ್ಚಿ
ಮೂಲೆಗೆ ಸರಿದು, ಮುದುರಿ ನಿಲ್ಲುತ್ತೇವೆ,
ಸದ್ಯ, ಈ ಕಾಡುವ ನೆರಳು ತೊಲಗಿದರೆ ಸಾಕಪ್ಪ,
ಎಂದು ಹಾರೈಸುತ್ತೇವೆ,
ಇದರಿಂದ ತಪ್ಪಿಸಿಕೊಂಡು, ಉಸಿರಾಡಲೆಂದು ಆ ಅವನನ್ನು
ಹಾಡಿ ಹೊಗಳುತ್ತೇವೆ.
ಮೆಲ್ಲಗೆ, ಸದ್ದು ಕರಗಿದ ಮೇಲೆ ನಡುಗುತ್ತಾ
ನಾವೂ ಜಪಿಸುತ್ತೇವೆ ರಾಮ ನಾಮ !

* * *

ಬಂದ ಟಕ ಟಕ ಸದ್ದು ಬಂದ ಹಾಗೇ ಕರಗಿ ಹೋಗುತ್ತದೆ.
ಆ ಅವನ ಹೆಸರಿನ ಮೇಲೆ ನಿರ್ಮಿಸಿದ ಪ್ರತಿಮೆಗಳ, ಫಲಕಗಳ,
ಬೀದಿಗಳ, ಭವನಗಳ ನಡುವೆ ನಿಟ್ಟುಸಿರು ಹಾಯುತ್ತದೆ.
ಮುಂದೆಲ್ಲೋ, ಯಾವ್ಯಾವ ಕತ್ತಲು ಕವಿದ ಭೂಗೋಲಗಳ
ಮೇಲೆ ಈ ನೆರಳಿನ ಬೆಳಕು ಬೀಳುತ್ತದೆ.
ನಟ್ಟ ನಡುರಾತ್ರಿ ಬೆಂಕಿಗಣ್ಣನು ಬಿಟ್ಟು ದಢ ದಢ ನುಗ್ಗಿದ ರೈಲು
ಭೋರೆನ್ನುತ ಮೊರೆಮೊರೆದು ಕಡೆಗೆ ಕತ್ತಲಲ್ಲೇ ಕರಗಿ
ಹೋದಂತೆ ಸದ್ದು ನಿಲ್ಲುತ್ತದೆ.
ಇದು ತೊಲಗಿತಲ್ಲಾ ಎಂಬ ಸಮಾಧಾನದಲ್ಲಿ,
ಮತ್ತೆ ಮೊಂಬತ್ತಿ ಹತ್ತಿ, ನಿಲ್ಲಿಸಿದ ಆಟ ಮುಂದುವರಿಯುತ್ತದೆ.

**ಕೃಪೆ : ಗೋಡೆ (ಕವನ ಸಂಕಲನ)**

**ಮಲೆಯೂರು ಗುರುಸ್ವಾಮಿ**
**ಸಂಪಾದಕ**

# ಹೊರತಳ್ಳುವ ವರ್ಣವ್ಯವಸ್ಥೆಗೆ ಪ್ರತಿಯಾಗಿ, ಒಳಗೊಳ್ಳುವ ಮನುಷ್ಯ ಸಂಸ್ಕೃತಿ ನಿರ್ಮಿಸಿದ ಬಸವಣ್ಣ

ಡಾ. ಬಸವರಾಜ ಸಾದರ

ನಮ್ಮ ದೇಶದ ಎಲ್ಲ ಕಾಲದ ಪರಮ ಸಾಮಾಜಿಕ ಶತ್ರು ವರ್ಣವ್ಯವಸ್ಥೆ. ಭಾರತೀಯ ಸಮಾಜಕ್ಕೆ ಪುರಾತನ ಕಾಲದಿಂದಲೂ ಅಂಟಿಕೊಂಡು ಬಂದಿರುವ ಕ್ಯಾನ್ಸರ್ ಇದಾಗಿದ್ದು, ಮನುಷ್ಯ ಮನುಷ್ಯರ ನಡುವಿನ ಮಾನವೀಯ ಸಂಬಂಧಗಳನ್ನೇ ಅದು ಹಾಳು ಮಾಡಿದೆ. ಜಾತಿವ್ಯವಸ್ಥೆಯ ಕೆಟ್ಟ ಪರಿಣಾಮವು, ಸಾಮಾಜಿಕ ತರತಮಗಳನ್ನು ನಿರ್ಮಿಸಿದೆಯಷ್ಟೇ ಅಲ್ಲ; ಅದು ನಮ್ಮ ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಮೇಲೂ ದುಷ್ಪರಿಣಾಮ ಬೀರುತ್ತಲೇ ಬಂದಿದೆ. ಇಂದಿಗೂ ಅದರ ಕರಿಛಾಯೆಗಳು ಸ್ಪಷ್ಟವಾಗಿ ಗೋಚರಿಸುತ್ತಲೇ ಇವೆ. ಅಸಹಿಷ್ಣುತೆಯ ಮೂಲ ಬೇರುಗಳಿರುವುದೇ ಮೂಲಭೂತವಾದದೊಂದಿಗೆ ಬೆಸೆದುಕೊಂಡಿರುವ ಇಂಥ ಜಾತಿವ್ಯವಸ್ಥೆಯಲ್ಲಿ. ಅದು ದೇಶದಾದ್ಯಂತ ನಡೆಸುತ್ತಿರುವ ಕ್ರೌರ್ಯಗಳನ್ನು ಹಾಗೂ ಅವಾಂತರಗಳನ್ನು ನಾವು ನಿತ್ಯವೂ ನೋಡುತ್ತಲೇ ಇದ್ದೇವೆ. ಸೂಕ್ಷ್ಮವಾಗಿ ಅವಲೋಕಿಸಿದರೆ, ಧಾರ್ಮಿಕ ಮತ್ತು ರಾಜಕೀಯ ರಂಗಗಳ ನೆರಳಲ್ಲೇ ಈ ಜಾತಿವ್ಯವಸ್ಥೆ ಪೋಷಣೆ ಪಡೆಯುತ್ತಿದ್ದು, ಆ ಕಾರಣಕ್ಕಾಗಿಯೇ ಅದನ್ನು ನಿರ್ನಾಮ ಮಾಡಲು ಸಾಧ್ಯವಾಗದಾಗಿದೆ. ಜಾತ್ಯತೀತ ರಾಷ್ಟ್ರವೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ನಾವು ವಾಸ್ತವವಾಗಿ ಜಾತ್ಯತೀತರಾಗಿ ಬದುಕುತ್ತಿದ್ದೇವೆಯೇ? ಎಂಬ ಪ್ರಶ್ನೆ ಹಾಕಿಕೊಂಡರೆ, ಖಂಡಿತವಾಗಿಯೂ ಧೈರ್ಯದಿಂದ ಉತ್ತರ ಹೇಳಲು ಆಗುವುದಿಲ್ಲ.

ಈ ಪರಿಸ್ಥಿತಿ ಇಂದಿನದಲ್ಲ. ಭಾರತದ ಭವ್ಯ ಪರಂಪರೆಯೆಂದು ನಾವು ಯಾವುದನ್ನು ಕರೆಯುತ್ತೇವೆಯೋ ಅಂಥ ಭವ್ಯ ಪರಂಪರೆಯ ಹುಟ್ಟು ಆದದ್ದೇ ಈ ಬಗೆಯ ವರ್ಣವ್ಯವಸ್ಥೆಯ ಹೊಟ್ಟೆಯಲ್ಲಿ. 'ಗುಣ' ಮತ್ತು 'ಕರ್ಮ'ಗಳನ್ನಾಧರಿಸಿ ಮಾನವ ಜನಾಂಗವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂದು ವಿಂಗಡಿಸಿದ್ದಕ್ಕಿಂತ ದೊಡ್ಡ ಅನಾಹುತ ಬೇರೊಂದಿದೆಯೆ? ಮನುಷ್ಯರನ್ನು ಹೀಗೆ ವರ್ಗೀಕರಿಸಿದ್ದಷ್ಟೇ ಅಲ್ಲ, ಈ ವರ್ಗೀಕರಣದ ಕೊನೆಯಲ್ಲಿರುವ ಶೂದ್ರರನ್ನು ಅಸ್ಪೃಶ್ಯರನ್ನಾಗಿಯೂ ಮಾಡಿದ ಇದೇ ವ್ಯವಸ್ಥೆ, ಅವರನ್ನು ಪಶುಗಳಿಗಿಂತಲೂ ಕೀಳಾಗಿ ನಡೆಸಿಕೊಳ್ಳುತ್ತ ಬಂತು. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹೀಗೆ ಯಾವ ಕ್ಷೇತ್ರದಲ್ಲೂ ಪ್ರವೇಶ ಕೊಡದೆ,

ಆ ಕ್ಷೇತ್ರಗಳು ಅವರಿಗೆ ನಿಷಿದ್ಧವೆಂದು ಸಾರಿ, ಒಟ್ಟಾರೆ ಎಲ್ಲ ಬಗೆಯಲ್ಲೂ ಅವರನ್ನು ಶೋಷಿಸುತ್ತಲೇ ಬಂತು ಈ ವ್ಯವಸ್ಥೆ. ಈ ಬಗೆಯ 'ಹೊರತಳ್ಳುವ' (Excluding) ವರ್ಣವ್ಯವಸ್ಥೆಯ ವಿರುದ್ಧ ಮೊಟ್ಟಮೊದಲ ಪ್ರತಿಭಟನೆ ವ್ಯಕ್ತವಾದದ್ದು ಹನ್ನೆರಡನೆಯ ಶತಮಾನದ ಕನ್ನಡ ನಾಡಿನ ಶರಣರಿಂದ. ಅಂಥ ಹೋರಾಟದ ಬೀಜಗಳನ್ನು ಬಿತ್ತಿದ್ದೇ ಮಹಾನ್ ಕ್ರಾಂತಿಕಾರಿ ಬಸವಣ್ಣ.

ಬಸವಣ್ಣನವರ ನೇತೃತ್ವದಲ್ಲಿ ಇಡೀ ವಿಶ್ವವೇ ಅಚ್ಚರಿಪಡುವಂತೆ ನಡೆದ ಶರಣರ ಆ ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ಕ್ರಾಂತಿಯು ಜಗತ್ತಿನ ಇತಿಹಾಸದ ಪುಟಗಳಲ್ಲಿ ದಾಖಲಾಗಬೇಕಿತ್ತು. ಆದರೆ ಅದು ದಾಖಲಾಗದ ಹಾಗೆಯೂ ನೋಡಿಕೊಂಡಿದ್ದಾರೆ ನಮ್ಮ ಭವ್ಯಪರಂಪರೆಯ ವಕ್ತಾರರು. ಅದನ್ನು ಕೇವಲ ವಚನ ಸಾಹಿತ್ಯ ಚಳುವಳಿಯ ಘಟ್ಟವೆಂದೋ ಅಥವಾ ಕೇವಲ ಲಿಂಗಾಯತ/ವೀರಶೈವ ಧರ್ಮದ್ದೆಂದೋ ಹೇಳುತ್ತ ಬಂದು, ಅದರ ಸಾಮಾಜಿಕ ಸಮಾನತೆಯ ಕ್ರಿಯಾತ್ಮಕ ಕಾಳಜಿಯನ್ನೇ ಮರೆಮಾಚುತ್ತ ಬಂದಿದ್ದಾರೆ ಸಂಕುಚಿತ ಮನೋಭಾವದ ಇತಿಹಾಸ ಕಾರರು. ಇದು ಶರಣಕ್ರಾಂತಿಯ ಉದ್ದೇಶ ಮತ್ತು ಅದರ ದಾರಿಯನ್ನು ಗೌಣಗೊಳಿಸುವ ಹುನ್ನಾರವಲ್ಲದೇ ಬೇರಲ್ಲ. ಸರ್ವಸ್ಥಾವರಗಳ ವಿರುದ್ಧ ಶರಣರು ನಡೆಸಿದ ಆ ಪ್ರತಿಭಟನಾತ್ಮಕ ಹೋರಾಟವು, ಬಸವಣ್ಣನೇ ಹೇಳುವ ಹಾಗೆ 'ಸಕಲ ಜೀವಾತ್ಮರ ಲೇಸನ್ನೇ ಬಯಸುವ' ಸಮಗ್ರ ಕ್ರಾಂತಿಯಾಗಿತ್ತು. ಇದು ಮ್ಯಾಗ್ನಾಕಾರ್ಟಾ, ಪ್ರಜಾಪ್ರಭುತ್ವ, ಸಂವಿಧಾನ, ಸರ್ವೋದಯ, ಮಾನವ ಹಕ್ಕುಗಳು, ಸಮಾಜವಾದ, ಸಾಮ್ಯವಾದ– ಮೊದಲಾದ ಸಿದ್ಧಾಂತಗಳಿಗಿಂತ ಎಂಟುನೂರು ವರ್ಷಗಳಷ್ಟು ಮೊದಲೇ ಕನ್ನಡ ನಾಡಿನ ಶರಣರು ಜಾರಿಯಲ್ಲಿ ತಂದಿದ್ದ ಅದ್ಭುತ ಕ್ರಿಯಾತತ್ವ. ಆದರೆ ಅದನ್ನು ಹಾಗೆ ಬಿಂಬಿಸುವ ನೈಜ ಪ್ರಯತ್ನಗಳು ನಡೆಯಲೇ ಇಲ್ಲ. ಹಾಗಾಗುವಲ್ಲಿಯೂ ಜಾತಿವ್ಯವಸ್ಥೆಯ ಕೈವಾಡವಿರುವುದನ್ನು ಯಾರಾದರೂ ಸಹಜವಾಗಿಯೇ ಗುರುತಿಸಬಹುದಾಗಿದೆ.

ಇಂಥ ಐತಿಹಾಸಿಕ ಹೋರಾಟವೊಂದನ್ನು ಆರಂಭಿಸಿದ ಮಹಾನ್ ಕ್ರಾಂತಿಕಾರಿ ಬಸವಣ್ಣ ಹುಟ್ಟಿದ್ದೇ ಬ್ರಾಹ್ಮಣ ಕುಲದಲ್ಲಿ. ಆದರೆ ಅದು ಆಗ ಅನುಸರಿಸುತ್ತಿದ್ದ ಕರ್ಮಠ ಆಚರಣೆಗಳನ್ನು ಪ್ರತಿಭಟಿಸಿ ಹೊರಬಂದ ಆತ, ಸರ್ವಸಮಾನತೆಯೇ ಗುರಿಯಾಗಿದ್ದ ಮತ್ತು ಚಲನಶೀಲತೆಯೇ ಗಮನವಾಗಿದ್ದ ಸಮಾಜವಾದಿ ವ್ಯವಸ್ಥೆಯನ್ನು, ಮತ್ತು ಹೊಸ ಧರ್ಮವನ್ನು ನಿರ್ಮಿಸಲು ಬಹು ದೊಡ್ಡ ಕ್ರಾಂತಿಯನ್ನೇ ಮಾಡಿದ. ವರ್ಣವ್ಯವಸ್ಥೆಯ ಕರಾಳ ಆಚರಣೆಗಳಿಂದಾಗಿ ಅಸ್ಪೃಶ್ಯರೆಂದು 'ಹೊರತಳ್ಳಿಸಿಕೊಂಡು' ಊರ ಹೊರಗೆ ವಾಸಿಸುತ್ತಿದ್ದ ಶೂದ್ರರನ್ನು ಹಾಗೂ ಉಚ್ಚವರ್ಣದವರ ಬಗೆಬಗೆಯ ಶೋಷಣೆಗಳಿಂದ ಜರ್ಜರಿತರಾಗಿದ್ದ ಇನ್ನಿತರ ಶ್ರಮಿಕ ಜನವರ್ಗಗಳನ್ನು ತನ್ನ ಹೊಸ ಹಾಗೂ ಪ್ರಜಾಧರ್ಮದ ಒಳಗೆ ಕರೆದುಕೊಂಡ ಬಸವಣ್ಣ ಅವರನ್ನೆಲ್ಲ 'ಇವ ನಮ್ಮವ, ಇವ ನಮ್ಮವ' ಎಂದು ಅಪ್ಪಿಕೊಂಡು ಎಲ್ಲರನ್ನೂ ಸಮಾನವಾಗಿ 'ಒಳಗೊಳ್ಳುವ' (Inclusive) ವಿನೂತನ ಸಂಸ್ಕೃತಿಯನ್ನು ನಿರ್ಮಿಸಿದ. ಸಮಾಜವಾದದ ಮೂಲ ಬೇರುಗಳಿರುವುದೇ ಬಸವಣ್ಣನ ಆ ಪ್ರಯತ್ನದಲ್ಲಿ.

ವರ್ಣವ್ಯವಸ್ಥೆಯ ಮೇಲಿನ ಸ್ತರದಲ್ಲಿದ್ದ ಮಹಾಜನರು ಶೂದ್ರರನ್ನು ಅಸ್ಪೃಶ್ಯರೆಂದು ಕರೆದದ್ದು ಮಾತ್ರವಲ್ಲ; ಅವರನ್ನು ಊರ ಹೊರಗೇ ಇಟ್ಟಿದ್ದರು. ಇಂಥ ಜನವರ್ಗದ ಪರವಾಗಿ ನಿಂತ ಬಸವಣ್ಣ –

ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೆ,
ಜಲವೊಂದೆ ಶೌಚಾಚಮನಕ್ಕೆ.
ಕುಲವೊಂದೆ ತನ್ನ ತಾನರಿದವಂಗೆ,
ಫಲವೊಂದೆ ಷಡುದರ್ಶನ ಮುಕ್ತಿಗೆ.
ನಿಲವೊಂದೆ ಕೂಡಲಸಂಗಮದೇವಾ ನಿಮ್ಮನರಿದವಂಗೆ

ಎಂದು ನಿಸರ್ಗದ ನೆಲಜಲಗಳು ಉಚ್ಚವರ್ಣದವರ ಹಾಗೆ ಜಾತಿಭೇದ ಮಾಡುವುದಿಲ್ಲ ವೆಂಬ ಸತ್ಯವನ್ನು ಕರ್ಮಠರಿಗೆ ವೈಚಾರಿಕವಾಗಿ ತಿಳಿಸಿಕೊಡುತ್ತಾನೆ. ಬಸವಣ್ಣನ ಇಂಥ ಕ್ರಾಂತಿಕಾರಿ ವಿಚಾರಗಳ ಸತ್ಯವನ್ನು ಅರಿತ ಅಸ್ಪೃಶ್ಯರು, ಶ್ರಮಜೀವಿಗಳು ಮತ್ತು ಬದಲಾವಣೆ ಬಯಸಿದ ಮನುಷ್ಯರು ಆ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡರಷ್ಟೇ ಅಲ್ಲ, ಆತನ ಹಾಗೆಯೇ ಪ್ರತಿಭಟನೆಗಿಳಿದರು, ಪ್ರತಿಭಟನೆಯ ಧ್ವನಿಯನ್ನು ಧೈರ್ಯದಿಂದ ಹೊರಹಾಕಿದರು ಕೂಡ. ಬೊಂತಾದೇವಿ ಎಂಬ ಸಾಮಾನ್ಯ ಮಹಿಳೆ–

ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ?
ಊರೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆಬಯಲೆಂದುಂಟೆ?

ಎಂದು ಉನ್ನತ ವರ್ಣದವರಿಗೆ ನೇರವಾಗಿ ಪ್ರಶ್ನೆ ಕೇಳಿ,

ಎಲ್ಲಿ ನೋಡಿದಡಲ್ಲಿ ಬಯಲೊಂದೆ.
ಭಿತ್ತಿಯಿಂದ ಒಳಹೊರಗೆಂಬ ನಾಮವೈಸೆ.
ಎಲ್ಲಿ ನೋಡಿದಡೆ, ಕರೆದಡೆ ಓ ಎಂಬಾತನೆ ಬಿಡಾಡಿ

ಎಂದು ತಾನೇ ಸಮಾನತೆಯ ಸತ್ಯವನ್ನು ತಿಳಿಸಿಕೊಟ್ಟದ್ದನ್ನು ಗಮನಿಸಿದರೆ, ಆ ಹೋರಾಟದಲ್ಲಿ ಸಾಮಾನ್ಯರೂ ಪ್ರಶ್ನೆ ಕೇಳುವ ಹಾಗೂ ಅಸಾಮಾನ್ಯರೆಂದುಕೊಂಡ ವರಿಗೂ ತಿಳುವಳಿಕೆ ಹೇಳುವ ಸಾಮರ್ಥ್ಯ ಹೊಂದಿದ್ದರೆಂಬುದಕ್ಕೆ ಸಾಕ್ಷಿಯಾಗುತ್ತದೆ. ಬೊಂತಾದೇವಿಯ ಈ ವಚನದಲ್ಲಿರುವುದು ವೈಜ್ಞಾನಿಕ ಸತ್ಯವೆಂಬುದನ್ನು ಊರ ಒಳಗಿರುವವರು ಮೊದಲು ಅರಿಯಬೇಕಾಗಿದೆ.

ಹೀಗೆ ಅಸ್ಪೃಶ್ಯರನ್ನು, ದಲಿತರನ್ನು, ಕಾಯಕಜೀವಿಗಳನ್ನು, ಅದುವರೆಗೂ ಶೂದ್ರಳೇ ಆಗಿದ್ದ ಮಹಿಳೆಯನ್ನು ಹಾಗೂ ಅನೇಕ ಬಗೆಯ ಶೋಷಣೆಗಳಿಂದ ಜರ್ಜರಿತರಾದ ಜನವರ್ಗಗಳನ್ನು ಅಪ್ಪಿಕೊಂಡ ಬಸವಣ್ಣ, ಅವರಿಗೆ ತನ್ನ ಚಳವಳಿಯಲ್ಲಿ ಮುಕ್ತವಾದ ಪ್ರವೇಶ ಕಲ್ಪಿಸಿದ. ಸ್ಥಗಿತ ವ್ಯವಸ್ಥೆಯನ್ನು ಪ್ರಶ್ನಿಸಿ, ಪ್ರತಿಭಟಿಸಿ, ನಿರಾಕರಿಸಿದ್ದಷ್ಟೇ ಅಲ್ಲ; ಅವುಗಳ ಸ್ಥಾನದಲ್ಲಿ ಪರ್ಯಾಯಗಳನ್ನು ತರುವಲ್ಲಿ ಶ್ರಮಿಸಿದ. ಹೀಗೆ ತಾನು ಕಾಣಬಯಸಿದ ಹೊಸ ಹಾಗೂ ಚಲನಶೀಲ ಸಮಾಜ ರಚನೆಯಲ್ಲಿ ಶೋಷಿತ

ವರ್ಗದ ಜನರನ್ನೆಲ್ಲ ತೊಡಗಿಸಿದ ಬಸವಣ್ಣ ಬರೀ ಮಾತಾಡಲಿಲ್ಲ, ಅಸ್ಪೃಶ್ಯರ ಮನೆಗೆ ಹೋದ. ಅವರಲ್ಲಿ ಧೈರ್ಯ ತುಂಬಿದ. ಅವರ ಜೊತೆ ಅಂಬಲಿ ಉಂಡ. ತನ್ನ ಸಮಾನ ನೆಲೆಯಲ್ಲಿ ಅವರನ್ನು ಕೂಡಿಸಿಕೊಂಡ. ಅವರು ಮಾತಾಡುವಂತೆ ಮಾಡಿದ. ಅನ್ಯಾಯಗಳನ್ನು ಪ್ರತಿಭಟಿಸುವಂತೆ ಪ್ರೇರೇಪಿಸಿದ.

ಚೆನ್ನಯ್ಯನ ಮನೆಯ ದಾಸಿಯ ಮಗನು,
ಕಕ್ಕಯ್ಯನ ಮನೆಯ ದಾಸಿಯ ಮಗಳು,
ಇವರಿಬ್ಬರು ಬೆರಣಿಗೆ ಹೋಗಿ ಸಂಗವ ಮಾಡಿದರು,
ಇವರಿಬ್ಬರಿಗೆ ಹುಟ್ಟಿದ ಮಗ ನಾನು, ಕೂಡಲಸಂಗಮದೇವರ ಸಾಕ್ಷಿಯಾಗಿ

ಎಂದು ಘಂಟಾಘೋಷವಾಗಿ ಸಾರಿಹೇಳಿ, ತನ್ನ ಹುಟ್ಟನ್ನು ಅಪವರ್ಣೀಕರಿಸಿಕೊಂಡು ಹಾಗೂ ಅಸ್ಪೃಶ್ಯರೊಂದಿಗೆ ಸಮೀಕರಿಸಿಕೊಂಡು ಅವರಲ್ಲಿ ತುಂಬಿದ್ದ ಕೀಳರಿಮೆಯನ್ನು ದೂರ ಮಾಡಿದ; ಹಾಗೆಯೇ ಮೇಲರಿಮೆಯಿಂದ ಬೀಗುತ್ತಿದ್ದವರ ಅನ್ಯಾಯದ ದಾರಿಗಳನ್ನು ಎತ್ತಿ ತೋರಿಸಿ, ಅವರಿಗೂ ಸರಿಯಾದ ಪಾಠ ಕಲಿಸಿದ. ಕಾಲಾಂತರದಿಂದಲೂ ಕೀಳರಿಮೆಯಿಂದ ಸೋತುಹೋಗಿದ್ದ ಜನರ ಜೊತೆಗೆ ಒಡನಾಡುವಾಗ 'ಮೇಲಾಗಲೊಲ್ಲೆನು ಕೀಳಾಗಲಲ್ಲದೆ' ಎಂದು ತನ್ನ ನಡೆಯನ್ನು ಸ್ಪಷ್ಟಪಡಿಸಿ–

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ.
ಡೋಹಾರನೆಂಬೆನೆ ಕಕ್ಕಯ್ಯನ?
ಮಾದಾರನೆಂಬೆನೆ ಚೆನ್ನಯ್ಯನ?
ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯಾ

ಎಂದು ತನ್ನ ಉನ್ನತ ಕುಲದ ಪಾರಂಪರಿಕ ಮೇಲರಿಮೆಯನ್ನು ಪ್ರಜ್ಞಾಪೂರ್ವಕವಾಗಿ ಕೆಳಗಿಳಿಸಿಕೊಂಡು ಇಡೀ ಜಗತ್ತಿನಲ್ಲಿಯೇ ಮೊಟ್ಟಮೊದಲ ಬಾರಿಗೆ ಜಾತಿಸಮಾನತೆಯ ಸಂದೇಶ ಸಾರಿದ. ಅದನ್ನು ತಾನು ಮೊದಲು ಕ್ರಿಯಾತ್ಮಕವಾಗಿ ಆಚರಿಸಿ ತೋರಿಸಿದ. ಅದೇ ಬಸವಣ್ಣ ಮಾಡಿದ ಮಹಾನ್ ಕ್ರಾಂತಿಯ ರೀತಿ.

ಹೊರತಳ್ಳುವ ಸಂಸ್ಕೃತಿಯ ಮತ್ತೊಂದು ದುರ್ಗುಣವೆಂದರೆ 'ಆಪೋಶನ'. ತನಗೆ ಬೇಕಾದವರ ಕುಲ ಜಾತಿ ಯಾವುದೇ ಇದ್ದರೂ ಅದನ್ನು ಅತ್ಯಂತ ವ್ಯವಸ್ಥಿತವಾಗಿ ಮರೆಮಾಚಿ, ಅವರನ್ನೆಲ್ಲ ತನ್ನ ಆವರಣದೊಳಕ್ಕೆ ಸೇರಿಸಿಕೊಂಡು ತನ್ನವರನ್ನಾಗಿಸಿಕೊಳ್ಳುವುದೇ ಆಪೋಶನ, ಸಂಸ್ಕೃತಿಯ ಆ ದುರ್ಗುಣ. ಪರಂಪರೆಯುದ್ದಕ್ಕೂ ನಡೆಯುತ್ತಲೇ ಬಂದ ಇಂಥ ಮೋಸದ ವ್ಯಾಪಾರದ ಹಿಂದಿನ ತಂತ್ರಗಾರಿಕೆಯನ್ನು ಗುರುತಿಸಿದ ಶರಣರು ಅದರ ವಿರುದ್ಧ ನೇರವಾಗಿ ಸಮರ ಸಾರುತ್ತಾರೆ. ಮಾದಾರ ಚೆನ್ನಯ್ಯನ–

ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ.
ದೂರ್ವಾಸ ಮಚ್ಚಿಗ, ದಧೀಚಿ ಕೀಲಿಗ.

ಕಶ್ಯಪ ಕಂಚುಗಾರ, ರೋಮಜ ಕಂಚುಗಾರ.
ಕೌಂಡಿಲ್ಯ ನಾವಿದನೆಂಬುದನರಿದು
ಮತ್ತೆ ಕುಲವುಂಟೆಂದು ಹೋರಲೇತಕ್ಕೆ?
ಇಂತೀ ಸಪ್ತಋಷಿಗಳೆಲ್ಲರೂ ಸತ್ಯದಿಂದ ಮುಕ್ತರಾದದನರಿಯದೆ
ಅಸತ್ಯದಲ್ಲಿ ನಡೆದು, ವಿಪ್ರರು ನಾವು
ಘನವೆಂದು ಹೋರುವ ಹೊತ್ತುಹೋಕರ ಮಾತೇಕೆ?

ಹೀಗೆ ನೇರವಾಗಿ ಪ್ರಶ್ನಿಸಿ, ಅಂಥ ಸೋಗಲಾಡಿ ಪರಂಪರೆಯ ಆತ್ಮಸಾಕ್ಷಿಯನ್ನೇ ಕೆಣಕುತ್ತಾನೆ. ಭವ್ಯವೆಂದು ಬೀಗುತ್ತ ಬಂದ ಪರಂಪರೆಯನ್ನು ಶರಣರು ತಾರ್ಕಿಕವಾಗಿ ಪ್ರಶ್ನಿಸಿದ ಹಾಗೂ ಪ್ರತಿಭಟಿಸಿದ ಪರಿ ಇದು. ಈ ವಚನದಲ್ಲಿ ಬರುವ 'ಅಸತ್ಯದಲ್ಲಿ ನಡೆದು, ವಿಪ್ರರು ನಾವು ಘನವೆಂದು ಹೋರುವ ಹೊತ್ತುಹೋಕರ ಮಾತೇಕೆ?' ಎಂಬ ಮಾತು ಆ ಇಡೀ ಪರಂಪರೆಯ ಅಂತರಂಗವನ್ನೇ ಬಯಲಿಗೆಳೆಯುವಂತಿದೆ.

ಬಸವಣ್ಣನವರ ನೇತೃತ್ವದಲ್ಲಿ ನಡೆದ ಶರಣಕ್ರಾಂತಿಗೆ ಮೂಲ ಕಾರಣವಾದದ್ದೇ ವರ್ಣವ್ಯವಸ್ಥೆ. ಹೀಗಾಗಿ ಆ ಇಡೀ ಚಳವಳಿಯುದ್ದಕ್ಕೂ ಜಾತಿವ್ಯವಸ್ಥೆಯ ವಿರುದ್ಧ ನಡೆದ ಸಂಘರ್ಷವೇ ಪ್ರಧಾನವಾಗಿ ಎದ್ದು ಕಾಣುತ್ತದೆ. ಅದರ ಉದ್ದೇಶವು, ಜಾತಿ ಮತ್ತು ವರ್ಣವ್ಯವಸ್ಥೆಯನ್ನು ಸಂಪೂರ್ಣವಾಗಿ ತೊಡೆದುಹಾಕಿ ಎಲ್ಲರೂ ಸಮಾನರೆಂಬ ಆಶಯವನ್ನು ಕ್ರಿಯಾತ್ಮಕವಾಗಿ ಜಾರಿಗೆ ತರುವುದೇ ಆಗಿತ್ತು. ಇದು ಕೇವಲ ಶರಣರ ವಿಚಾರ ಮಾತ್ರವಲ್ಲ; ಆಚಾರವೂ ಆಗಿತ್ತು. ಇಂಥ ಆಚಾರದ ಮಾರ್ಗವನ್ನು ತೆರೆದು ತೋರಿಸಿದ ಬಸವಣ್ಣ, ತಾನು ಮೊದಲು ಹಾಗೆ ನಡೆದು ತೋರಿಸಿದ್ದು ಬಹಳ ಮುಖ್ಯವಾಗುತ್ತದೆ. ಆತ, ಮಾದಾರ, ಡೋಹರ, ಕಿನ್ನರ–ಹೀಗೆ ಎಲ್ಲರನ್ನು ತನ್ನ ಅಪ್ಪ, ಬೊಪ್ಪ, ಅಯ್ಯ, ಅಕ್ಕ, ಅಣ್ಣ ಎಂದು ಅಪ್ಪಿಕೊಂಡು ಮುನ್ನಡೆದನಷ್ಟೇ ಅಲ್ಲ; ಜಾತಿಸಮತೆಯ ತನ್ನ ಗಾಢ ಅಪೇಕ್ಷೆಯನ್ನು ನಡೆಯಲ್ಲಿ ತಂದು ತೋರಿಸುವ ಪ್ರತಿಜ್ಞೆಯನ್ನೂ ಮಾಡಿದ.

ದೇವ ದೇವಾ ಬಿನ್ನಹ ಅವಧಾರು.
ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರಾದವರೆಲ್ಲರನೂ ಒಂದೆ ಎಂಬೆ.
ಹಾರುವ ಮೊದಲು ಶ್ವಪಚ ಕಡೆಯಾಗಿ
ಭವಿಯಾದವರೆಲ್ಲರನೊಂದೆ ಎಂಬೆ.
ಹೀಗೆಂದು ನಂಬುವುದೆನ್ನ ಮನ.
ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳಡೆ
ಹಲುದೋರೆ ಮೂಗ ಕೊಯಿ ಕೂಡಲಸಂಗಮದೇವಾ

ಹೀಗೆ ವೀರಪ್ರತಿಜ್ಞೆ ಮಾಡುವುದಷ್ಟೇ ಅಲ್ಲ, ಅದಕ್ಕೆ ತಪ್ಪಿದರೆ ತನ್ನ 'ತಲೆದಂಡ'ಕ್ಕೂ ಸಿದ್ಧನಾಗುತ್ತಾನೆ ಬಸವಣ್ಣ. ಇದರ ಪರಿಣಾಮವೆಂದರೆ ಶೂದ್ರರೆಂದು ಮತ್ತು ಅಸ್ಪೃಶ್ಯರೆಂದು

ಸಮಾಜದಿಂದ ದೂರವಿಡಲ್ಪಟ್ಟಿದ್ದ ಸಾವಿರಾರು ಶ್ರಮಜೀವಿಗಳು ಶರಣಕ್ರಾಂತಿಯಲ್ಲಿ ಬಾಗಿಯಾದದ್ದು. ಅವರು ಬರೀ ಭಾಗಿಗಳಾಗಲಿಲ್ಲ. ವೈಚಾರಿಕವಾಗಿ ಬೆಳೆದರು, ವಿಮರ್ಶಕರಾಗಿ ಪ್ರಶ್ನಿಸಿದರು, ಕ್ರಾಂತಿಕಾರಿಗಳಾಗಿ ಹೋರಾಡಿದರು, ಅಕ್ಷರ ಕಲಿತರು, ತಮ್ಮ ಪ್ರತಿಭಟನೆಯ ಧ್ವನಿಯನ್ನು ಅದ್ಭುತ ವಚನಗಳ ಮೂಲಕ ದಾಖಲಿಸಿದರು. ಅಂಥ ವಚನಗಳೇ ಶರಣಕ್ರಾಂತಿಯ ಸ್ವರೂಪವನ್ನು ನೈಜ ನೆಲೆಯಲ್ಲಿ ಕಟ್ಟಿಕೊಡುವ ಐತಿಹಾಸಿಕ ದಾಖಲೆಗಳಾಗಿರುವುದು. ಈ ಕಾರಣಕ್ಕಾಗಿಯೇ ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಶರಣಕ್ರಾಂತಿಯು ವಿಶ್ವದ ಇತಿಹಾಸದಲ್ಲಿ ದಾಖಲಾಗಬೇಕಾದ ನಿಜವಾದ ಕ್ರಿಯಾತ್ಮಕ ಕ್ರಾಂತಿಯಾಗುತ್ತದೆ. ಇಂಥ ಕ್ರಾಂತಿಯನ್ನು ಬರೀ ಸಾಹಿತ್ಯ ಚಳವಳಿ ಎನ್ನಬೇಕೆ? ಅದು ಒಂದು ಧರ್ಮಕ್ಕೆ ಮಾತ್ರ ಸೇರಿದ ತತ್ವವೆನ್ನಬೇಕೆ? ಆ ಕ್ರಾಂತಿ ಬಯಸಿದ ಸರ್ವಸಮಾನತೆ ಇಂದಿನ ಸಮಾಜಕ್ಕೆ ಬೇಡವೆ? ಅದನ್ನು ತರಲು ಬಸವಣ್ಣ ನಡೆಸಿದ ಹೋರಾಟ ಈಗಲೂ ಮಾದರಿಯೇ ಅಲ್ಲವೆ? – ಈ ಎಲ್ಲ ಪ್ರಶ್ನೆಗಳನ್ನು ನಮ್ಮ ಇಡೀ ವ್ಯವಸ್ಥೆಯೇ ಹಾಕಿಕೊಳ್ಳಬೇಕಾಗಿದೆ; ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳನ್ನೂ ಒಳಗೊಂಡಂತೆ. ಈ ಪ್ರಶ್ನೆಗಳನ್ನು ಮುಖ್ಯವಾಗಿ 'ಶರಣೋದ್ಯಮ'ದಲ್ಲಿ ತೊಡಗಿರುವವರು ಹಾಕಿಕೊಳ್ಳಬೇಕಿದೆ.

ಬಸವಣ್ಣನವರು ಆರಂಭಿಸಿದ ಶರಣಕ್ರಾಂತಿಯು ತನ್ನ ಅಂತಿಮ ಗುರಿಯನ್ನು ತಲುಪಿದ್ದು ಅಸ್ಪೃಶ್ಯ ಮತ್ತು ಬ್ರಾಹ್ಮಣ ಜಾತಿಯ ನಿಜವಾದ 'ಮನುಷ್ಯರ' ನಡುವಿನ ಅಂರ್ಜಾತಿಯ ವಿವಾಹದ ಘಟ್ಟದಲ್ಲಿ. ಆದರೆ, ಮೂಲಭೂತವಾದಿಗಳ ಕೈವಾಡವೇ ಮೇಲಾಗಿ ಆ ಇಡೀ ಕ್ರಾಂತಿಯು ಒಂದು ರಕ್ತಕ್ರಾಂತಿಯಾಗಿ ಕೊನೆಗೊಂಡದ್ದು ನಿಜಕ್ಕೂ ದೊಡ್ಡ ದುರಂತ. ಪಟ್ಟಭದ್ರರ ಕುತಂತ್ರಕ್ಕೆ ಬಲಿಯಾದ ಆ ಕ್ರಾಂತಿಯ ಪರಿಣಾಮವನ್ನು ಮಾತ್ರ ನಮ್ಮ ಇತಿಹಾಸಕಾರರು ಅತ್ಯಂತ ರೋಚಕವಾಗಿ ಚಿತ್ರಿಸಿದ್ದಾರೆ. ನಮ್ಮ ಇತಿಹಾಸದ ಪಠ್ಯಗಳ ಅಪೇಕ್ಷೆ ಏನೆಂಬುದು ಇದರಿಂದ ವಿಧಿತವಾಗುತ್ತದೆ. ಆದರೆ, ಆ ವಿಫಲ ಕ್ರಾಂತಿಯ ಒಡಲಲ್ಲೇ ಮಾನವ ಜನಾಂಗಕ್ಕೆ ಬೇಕಿರುವ ಸಮಾನತೆಯ ಅಪೇಕ್ಷೆ ಮತ್ತು ಅದನ್ನು ಪೂರೈಸಿಕೊಳ್ಳಲು ಕ್ರಮಿಸಬೇಕಾದ ಮಾರ್ಗದ ದರ್ಶನವಿರುವುದನ್ನು ಅಲ್ಲಗಳೆಯಲಾದೀತೆ? ಬಸವಣ್ಣನ ನೇತೃತ್ವದಲ್ಲಿ ನಡೆದ ಅರ್ಥಪೂರ್ಣವಾದ ಶರಣ ಕ್ರಾಂತಿ ಆ ಸಂದರ್ಭದಲ್ಲಿ ತನ್ನ ಗುರಿ ಮುಟ್ಟಿರಲಿಕ್ಕಿಲ್ಲ. ಆದರೆ, ಮುಂದೆ ಎಂದಾದರೂ ಒಂದು ದಿನ ಅದು ತನ್ನ ಗುರಿಯನ್ನು ಸಾಧಿಸಿಯೇ ಸಾಧಿಸುತ್ತದೆಯೆಂಬುದೇನೂ ಸುಳ್ಳಲ್ಲ. ಅಂಥ ಉದ್ದೇಶ, ಶಕ್ತಿ, ಗುರಿ ಮತ್ತು ಗಮನ ಆ ಕ್ರಾಂತಿಗಿದೆ. ಆ ಬಗೆಯ ಕನಸನ್ನು ಬಿತ್ತಿಹೋದ ಬಸವಣ್ಣ ಸರ್ವಕಾಲಕ್ಕೂ ಪ್ರಸ್ತುತನಾಗುವುದು ಇಂಥ ಆಶಾವಾದದ ಕಾರಣಕ್ಕಾಗಿಯೆ.

□

# ಬಹುತ್ವದ ನೆಲೆಯಲ್ಲಿ ನಂಬಿಕೆ ಮತ್ತು ವೈಚಾರಿಕತೆ

ರಂಜಾನ್ ದರ್ಗಾ

**ಈ** ಸಲದ 'ನುಡಿಸಿರಿ' ಬಹುತ್ವವನ್ನು ಕೇಂದ್ರಬಿಂದುವಾಗಿಸಿಕೊಂಡು ನಮ್ಮ ಮುಂದೆ ಬಹಳ ಹೊಸತನವನ್ನು ಸೂಚಿಸುತ್ತಿದೆ. ಬಹುತ್ವ ಈ ದೇಶದ ಆತ್ಮ. ಈ ಆತ್ಮರಕ್ಷಣೆ ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಆಗಿದೆ ಎಂದು ನಾನು ಭಾವಿಸುತ್ತೇನೆ. ನಮ್ಮ ಸಂಸ್ಕೃತಿ ಕೇವಲ ಒಂದು ದೇಶದ ಬಹುತ್ವವನ್ನು ರಕ್ಷಿಸುವ ಸಂಸ್ಕೃತಿ ಅಲ್ಲ, ಇಡೀ ವಿಶ್ವದ ಬಹುತ್ವವನ್ನು ರಕ್ಷಿಸುವ ಸಂಸ್ಕೃತಿ ಆಗಿದೆ. ಎಲ್ಲ ಧರ್ಮಗಳನ್ನು ಮೀರಿ ನಿಲ್ಲುವಂಥದ್ದು ಭಾರತೀಯ ಮನಸ್ಸು ಎಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ.

'ಯತ್ರ ವಿಶ್ವಂ ಭವತಿ ಏಕ ನೀಡಂ' (ಇಡೀ ವಿಶ್ವವೇ ಒಂದು ಗೂಡು) ಎಂದು ಆರು ಸಾವಿರ ವರ್ಷಗಳಷ್ಟು ಹಿಂದಿನ ಋಗ್ವೇದ ಹೇಳುತ್ತದೆ. ಜಗತ್ತು ಒಂದು ಗುಬ್ಬಿಯ ಗೂಡು. ಈ ಗುಬ್ಬಿಯ ಗೂಡಿನಂಥ ಜಗತ್ತಿನಲ್ಲಿ ಮಾನವಕುಲ ಹಕ್ಕಿಗಳ ಹಾಗೆ ಬದುಕಿದಾಗ ಮಾತ್ರ ಈ ಜಗತ್ತು ಉಳಿಯುತ್ತದೆ. ಯುದ್ಧಗಳಿಂದ, ಕೋಮುವಾದದಿಂದ, ದ್ವೇಷದಿಂದ, ಉಗ್ರವಾದದಿಂದ, ಜಾತೀಯತೆಯಿಂದ ಈ ಜಗತ್ತು, ಈ ದೇಶ ಉಳಿಯಲಿಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ನಮ್ಮ ಪೂರ್ವಜರು ನಮಗೆ ಹೇಳಿಕೊಟ್ಟಿದ್ದಾರೆ ಮತ್ತು ಕಲಿಸಿದ್ದಾರೆ. ಅದೇ ಋಗ್ವೇದದಲ್ಲಿ "ಏಕಂ ಸತ್ ವಿಪ್ರಾಃ ಬಹುಧಾ ವದಂತಿ." ಸತ್ಯ ಒಂದೇ ಇದೆ, ಜ್ಞಾನಿಗಳು ಆ ಸತ್ಯವನ್ನು ಬೇರೆ ಬೇರೆ ರೀತಿಯಲ್ಲಿ ಹೇಳುತ್ತಾರೆ ಎಂಬುದು ಈ ಶ್ಲೋಕದ ಅರ್ಥ. ಇನ್ನೂ ಒಂದು ಮಾತಿದೆ, "ಆ ನೋ ಭದ್ರಾಃ ಕೃತವೋ ಯಂತು ವಿಶ್ವತಃ." ಉದಾತ್ತ ವಿಚಾರಗಳು ನಮಗೆ ಎಲ್ಲೆಡೆಯಿಂದ ಬರಲಿ ಎಂಬುದು ಋಗ್ವೇದದ ಆಶಯ. ಇದು ವಿಶ್ವವ್ಯಾಪಿ ಮಾತು. ಇದೇ ಬಹುತ್ವ. ನಮ್ಮ ಬಹುತ್ವವನ್ನು ರಕ್ಷಣೆ ಮಾಡಲಿಕ್ಕೆ ಲೋಕಾಯತರು, ಜೈನರು, ಬೌದ್ಧರು ಮತ್ತು ಲಿಂಗಾಯತರು ಬಹಳ ಹೋರಾಟ ಮಾಡಿದ್ದಾರೆ. ಇವರೆಲ್ಲರ ಸಿದ್ಧಾಂತಗಳು ಬಹುತ್ವವಾದಿ ಸಿದ್ಧಾಂತಗಳಾಗಿವೆ. ಈ ಹಿನ್ನೆಲೆಯಲ್ಲಿ ನಾವು ಈ ನಂಬಿಕೆ ಮತ್ತು ವೈಚಾರಿಕತೆ ಕುರಿತು ಯೋಚನೆ ಮಾಡಬೇಕಿದೆ.

ನಂಬಿಕೆ ಎನ್ನುವುದು ಮತ್ತು ವೈಚಾರಿಕತೆಯೆನ್ನುವುದು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನಮ್ಮ ಬದುಕಿಗೆ ಇವೆರಡು ಬಹಳ ಅವಶ್ಯಕವಾಗಿವೆ. ನಂಬಿಕೆ

ಮತ್ತು ವೈಚಾರಿಕತೆ ಇಲ್ಲದೆ ಈ ಜಗತ್ತು ಮುನ್ನಡೆಯಲು ಸಾಧ್ಯವಿಲ್ಲ. ಆದರೆ ನಂಬಿಕೆ ಅಪನಂಬಿಕೆಯಾದಾಗ, ಮೂಢನಂಬಿಕೆಯಾದಾಗ ವೈಚಾರಿಕತೆ ತನ್ನ ಸತ್ವವನ್ನು ಕಳೆದುಕೊಳ್ಳುತ್ತದೆ. ಅಪನಂಬಿಕೆ ಮತ್ತು ಮೂಢನಂಬಿಕೆಯ ಮೂಲಕ ದ್ವೇಷ ಸಂಸ್ಕೃತಿಯನ್ನು ಬೆಳಸುವ ಸಂದರ್ಭದಲ್ಲಿ ನಮ್ಮ ದೇಶ ಬಹಳ ಇಕ್ಕಟ್ಟಿಗೆ ಸಿಲುಕುತ್ತದೆ. ಅಂತಹ ಒಂದು ಭಯಾನಕ ಸ್ಥಿತಿಯಲ್ಲಿ ನಾವು ಇವತ್ತು ಬದುಕುತ್ತಿದ್ದೇವೆ. ಇವುಗಳನ್ನು ತೊಡೆದುಹಾಕಿ ಮತ್ತೆ ಜನಮಾನಸದಲ್ಲಿ ಏಕತೆಯ ಒಂದು ಶಕ್ತಿಯನ್ನು ತುಂಬುವಂಥ ಬಹುತ್ವ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಈ ಕಾಲದ ಅವಶ್ಯಕತೆಯಾಗಿದೆ.

ನಂಬಿಕೆಯ ಪ್ರಶ್ನೆ ಯಾಕೆ ಬರುತ್ತದೆ ಎಂದರೆ, 'ಅದು ಹೇಗೆ' ಎನ್ನುವುದಕ್ಕೆ ವಿಜ್ಞಾನ ಉತ್ತರ ಕೊಡುತ್ತದೆ. 'ಅದು ಏಕೆ' ಎನ್ನುವುದಕ್ಕೆ ಉತ್ತರ ಕೊಡುವುದಿಲ್ಲ. ಆದ್ದರಿಂದಲೇ ಧರ್ಮಗಳು ಹುಟ್ಟುತ್ತವೆ. 'ನಾವು ಹೇಗೆ ಹುಟ್ಟಿದ್ದೇವೆ' ಎಂಬುದಕ್ಕೆ ವಿಜ್ಞಾನ ಉತ್ತರ ಕೊಡುತ್ತದೆ. 'ನಾವು ಏಕೆ ಹುಟ್ಟಿದೆವು' ಎಂಬುದಕ್ಕೆ ಉತ್ತರ ಕೊಡಲು ವಿಜ್ಞಾನಕ್ಕೆ ಆಗುವುದಿಲ್ಲ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಆಗ ನಂಬಿಕೆಗಳು ಹುಟ್ಟುತ್ತವೆ. ನಂಬಿಕೆ ಅಂದ್ರೇನೇ ಧರ್ಮ. ಇಂಗ್ಲಿಷನಲ್ಲಿ ಫೇಥ್ (Faith) ಎಂದು ಕರೆಯುತ್ತೇವೆ. ಹಿಂದು Faith, ಕ್ರಿಶ್ಚಿಯನ್ Faith, ಇಸ್ಲಾಮಿಕ್ Faith. ಹೀಗೆ ನಂಬಿಕೆಯಿಂದ ನಾವು ಬದುಕುತ್ತಿರುತ್ತೇವೆ. ವೈಚಾರಿಕತೆಯ ಕಡೆಗೆ ಆ ನಂಬಿಕೆ ಹೋಗಬೇಕೆಂಬುದೇ ಎಲ್ಲಾ ಧರ್ಮಸಂಸ್ಥಾಪಕರ ಆಶಯವಾಗಿದೆ. ಹೀಗೆ ಎಲ್ಲಾ ಧರ್ಮಗಳು ವಿವಿಧ ರೀತಿಯ ನಂಬಿಕೆಗಳ ಆಧಾರದ ಮೇಲೆ ಹುಟ್ಟಿವೆ. ನಮ್ಮ ಕೆಲವು ನಂಬಿಕೆಗಳನ್ನು ವಿಜ್ಞಾನ ಪ್ರಶ್ನಿಸುವ ಸಾಮರ್ಥ್ಯ ಹೊಂದಿದೆ. ಅದು ಯಾವಾಗ ನಮ್ಮ ನಂಬಿಕೆಯನ್ನು ನಿಖರವಾಗಿ ಪ್ರಶ್ನಿಸುವ ಶಕ್ತಿ ಪಡೆಯುವುದೋ, ಆಗ ಆ ನಂಬಿಕೆ ಆ ಹೊತ್ತಿನಿಂದ ಮೂಢನಂಬಿಕೆಯಾಗಿ ಕರೆಯಿಸಿಕೊಳ್ಳುತ್ತದೆ. ನಾವು ಮೂಢನಂಬಿಕೆಗಳಿಗೆ ಜೋತುಬಿದ್ದರೆ, ಹಾಗೇ ಮುಂದುವರಿಯುತ್ತೇವೆ.

ನಂಬಿಕೆ ಇಲ್ಲದೆ ಮಾನವ ಬದುಕಲಾರ. ಆದರೆ ಮೂಢನಂಬಿಕೆಯಿಂದ ಆತನ ಬದುಕು ಕುಂಟಿತಗೊಳ್ಳುತ್ತದೆ. ನಂಬಿಕೆ ಮತ್ತು ವೈಚಾರಿಕತೆಗಳ ಸಂಶ್ಲೇಷಣೆ ಅಂದರೆ Synthesis. ಅದರಿಂದ ಮಾತ್ರ ನಾಗರಿಕತೆಯ ತಳಹದಿಯ ಮೇಲೆ ಮಾನವೀಯತೆ ಬೆಳೆಯಲು ಸಾಧ್ಯ.

ವಿವಿಧ ಧರ್ಮಗಳು ಎಂದರೆ ವಿವಿಧ ನಂಬಿಕೆಗಳು ಮತ್ತು ವಿವಿಧ ಜೀವನ ವಿಧಾನಗಳು. ಹುಟ್ಟು ಸಾವು ಮತ್ತು ಬದುಕಿಗೆ ಸಂಬಂಧಿಸಿದ ವಿವಿಧ ಪರಿಕಲ್ಪನೆಗಳು. ಒಟ್ಟಾರೆ ಬಹುತ್ವದ ಭಾಗಗಳು. ಇವುಗಳ ಮಧ್ಯೆ ವೈರುಧ್ಯಗಳು ಬೆಳೆಯದಂತೆ ನೋಡಿಕೊಂಡು, ಮಾನವೀಯ ಸಂಬಂಧಗಳನ್ನು ಗುರುತಿಸುವುದರ ಮೂಲಕ ನಾವು ವೈಚಾರಿಕತೆಯ ಕಡೆಗೆ ಸಾಗಲು ಸಾಧ್ಯವಿದೆ.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆ ಅನುಪಮವಾಗಿದೆ. ಕನ್ನಡ ನಾಡಿಗೆ, ಕನ್ನಡ ಸಂಸ್ಕೃತಿಗೆ, ಕನ್ನಡ ಸಾಹಿತ್ಯಕ್ಕೆ ವಿಶ್ವವ್ಯಾಪಿ ನೆಲೆಯಿದೆ ಎಂಬುದನ್ನು ನಾವು ಮರೆಯಬಾರದು. ಒಂಬತ್ತನೇ ಶತಮಾನದಲ್ಲಿ ನಮಗೆ ಸಿಕ್ಕ 'ಕವಿರಾಜಮಾರ್ಗ' ಕನ್ನಡ ಗ್ರಂಥಗಳಲ್ಲೇ ಅತ್ಯಂತ ಹಳೆಯದು. ಅದು ಲಕ್ಷಣಗ್ರಂಥ. ಮಹಾಕಾವ್ಯವನ್ನು ಹೇಗೆ ಬರೆಯಬೇಕು ಎಂಬುದನ್ನು ಹೇಳುವಂತಹ ಗ್ರಂಥ. ಇದರ ಅರ್ಥ ಅದಕ್ಕಿಂತಲೂ ಮುಂಚೆ ಅನೇಕ ಗ್ರಂಥಗಳು ಇದ್ದವೆಂಬುದನ್ನು ನಾವು ತಿಳಿದುಕೊಳ್ಳಬೇಕು. ನೃಪತುಂಗನ ಆಸ್ಥಾನದಲ್ಲಿ ಇದ್ದವನು ಕವಿರಾಜಮಾರ್ಗಕಾರ ಶ್ರೀವಿಜಯ. "ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂ ಪರಧರ್ಮಮುಮಂ" ಎಂದು ಶ್ರೀವಿಜಯ ಹೇಳಿದ್ದು ನಮ್ಮ ಇವತ್ತಿನ ವಿಷಯದ ಹೃದಯವೇ ಆಗಿದೆ. ಕಸವರ ಎಂದರೆ ಅಪರಂಜಿ, ಶುದ್ಧ ಬಂಗಾರ. ಅನ್ಯರ ವಿಚಾರವನ್ನು ಮತ್ತು ಧರ್ಮವನ್ನು ಸಂಪೂರ್ಣ ಸಹನಶೀಲವಾಗಿ ಕಾಣುವ ಮನಸ್ಸೇ ಶುದ್ಧ ಬಂಗಾರ. ನಾವು ಅನೇಕ ಧರ್ಮಗಳ ಮತ್ತು ಜೀವನವಿಧಾನಗಳ ಒಂದು ಸಮಾಜದಲ್ಲಿ ಬದುಕುವಾಗ ಬೇರೆಯವರ ವಿಚಾರಗಳನ್ನು ಹಾಗೂ ಬೇರೆಯವರ ಧರ್ಮವನ್ನು ಕೊಂಡಾಡುವ (Celebrate) ಹಾಗೆ ಬದುಕಬೇಕು. ನಾವು ಅವುಗಳನ್ನು ಸಹನಶೀಲವಾಗಿ ನೋಡುವ ಮನಸ್ಸನ್ನು ಹೊಂದಿರಬೆಕು. ಇದು ನಮ್ಮ ನೆಲದ ಗುಣ. ನಮ್ಮ ಪೂರ್ವಜರ, ನಮ್ಮ ಹಳ್ಳಿಗಾಡಿನ ಜನರ, ನಮ್ಮ ಮುಗ್ಧ ಜನರ ಬದುಕಿನ ವಿಧಾನವೇ ಬಹುತ್ವದ ವಿಧಾನವಾಗಿತ್ತು ಎನ್ನುವುದು ನಮಗೆಲ್ಲ ಗೊತ್ತಿದೆ. ಇಂತಹ ಒಂದು ಮಾನವೀಯ ನಂಬಿಕೆಯೆ ಬಹುತ್ವದ ನಂಬಿಕೆ. ಈ ನಂಬಿಕೆಯೆ ವೈಚಾರಿಕತೆ. ಇಲ್ಲಿ ಬಹಳ ಮುಖ್ಯವಾದ ಒಂದು ವಿಚಾರವೇನೆಂದರೆ, ಅದೇ ಪರವಿಚಾರ ಮತ್ತು ಪರಧರ್ಮ. ಇದರ ಅರ್ಥವೇನೆಂದರೆ ವಿಚಾರಗಳು ಒಂದೇ ತರಹ ಇರುವುದಿಲ್ಲ. ವೈಚಾರಿಕತೆಯು ಒಂದೇ ತರಹ ಇರುವುದಿಲ್ಲ ಮತ್ತು ಧರ್ಮಗಳು ಒಂದೇ ತರಹ ಇರುವುದಿಲ್ಲ. ಆದರೆ ಅವುಗಳ ಮಧ್ಯೆ ಒಂದು ಸಾಮಾನ್ಯ ಮಾನವೀಯ ಗುಣವಿರುತ್ತದೆ. ಅಂದರೆ ಅವುಗಳಲ್ಲಿನ ಎಲ್ಲಾ ಜನಾಂಗಗಳನ್ನು ಒಟ್ಟುಗೂಡಿಸುವಂತಹ ಮಾತುಗಳನ್ನು ಎತ್ತಿ ಹಿಡಿಯಬೇಕಾಗು ತ್ತದೆ ಎಂಬುದನ್ನು ನಮ್ಮ ಸಂಸ್ಕೃತಿ ಕಲಿಸಿಕೊಟ್ಟಿದೆ.

ಕ್ರಿಸ್ತಪೂರ್ವ ಮೂರನೇ ಶತಮಾನದ ಅಶೋಕ ಚಕ್ರವರ್ತಿಯ ಶಾಸನ ನನಗೆ ಬಹಳ ಆಶ್ಚರ್ಯ ಹುಟ್ಟಿಸಿತು. ಜೀಸಸ್ ಜನ್ಮತಾಳುವುದಕ್ಕೆ ಮುನ್ನೂರು ವರ್ಷಗಳಿಗೂ ಮುಂಚೆ. ಅಶೋಕನ ಶಿಲಾ ಶಾಸನ ಏನು ಹೇಳುತ್ತೆ ಅಂದರೆ, 'ಮತ ಧರ್ಮದ ವಿಷಯದಲ್ಲಿ ಜಗಳವಾಡಬೇಡ. ಸಾಂಗತ್ಯ ಶ್ಲಾಘನೀಯವಾದದ್ದು.' ಈ ಸಾಲು ನಮಗೆ ಬಹಳ ಮುಖ್ಯವಾದದ್ದು. ನಾವು ಸೋಲುತ್ತಿರುವುದು ಇಲ್ಲೇ. ಯಾಕೆಂದರೆ ನಾವು ನಮ್ಮ ಧರ್ಮವೇ ಶ್ರೇಷ್ಠ, ನಮ್ಮ ವಿಚಾರಗಳೇ ಶ್ರೇಷ್ಠ, ನಮ್ಮ ಜೀವನ ವಿಧಾನವೇ

ಶ್ರೇಷ್ಠ ಎನ್ನುವ ಹೇವಕ್ಕೆ ಬಿದ್ದು ಮನಸ್ಸಿನ ಶಾಂತಿಯನ್ನು ಮತ್ತು ಸಮಾಜದ ಶಾಂತಿಯನ್ನು ಕೆಡಿಸುತ್ತಿದ್ದೇವೆ. 'ಸತ್ಯದ ಮೇಲೆ ನಿನ್ನ ಸಂಪೂರ್ಣ ಸ್ವಾಮ್ಯವಿದೆ ಎಂದು ಕಲ್ಪನೆ ಮಾಡಿಕೊಳ್ಳಬೇಡ, ನಿನ್ನ ಸ್ವಾಮ್ಯವಿಲ್ಲದಿರಬಹುದು. ಯಾವ ಮತ ಧರ್ಮವೂ ಸತ್ಯದ ಮೇಲೆ ಪೂರ್ಣ ಸ್ವಾಮ್ಯ ಹೊಂದಿರುವುದಿಲ್ಲ' ಎಂದು ಆ ಶಾಸನದಲ್ಲಿ ಅಶೋಕ ತಿಳಿಸುತ್ತ, ಮುಂದುವರಿದು 'ನೀನು ಬೇರೆ ಬೇರೆ ರೀತಿಗಳಲ್ಲಿ ಹಾಗೂ ಬೇರೆ ಬೇರೆ ವ್ಯಕ್ತಿಗಳಲ್ಲಿ ಅಭಿವ್ಯಕ್ತಿಯಾಗುವ ದೇವರನ್ನು ಅರಿಯಲು ಪ್ರಯತ್ನಿಸು' ಎಂದು ಬರೆಸುತ್ತಾನೆ. ಇಷ್ಟು ದೊಡ್ಡ ಮಾತನ್ನು ನಮ್ಮ ಸಂಸ್ಕೃತಿ ನಮಗೆ ಕಲಿಸಿಕೊಟ್ಟಿದೆ.

ಬಹಳ ವರ್ಷಗಳ ಹಿಂದೆ ಡಿ.ವಿ.ಜಿಯವರು ಜನಸಾಮಾನ್ಯರಿಗೋಸ್ಕರ ಬರೆದ ಸುಂದರವಾದ ಚಿಕ್ಕ ಪುಸ್ತಕ 'ಬಾಳಿಗೊಂದು ನಂಬಿಕೆ'. 'ಜ್ಞಾಪಕ ಚಿತ್ರಶಾಲೆ'ಯ ನಂತರ ನನಗೆ ಬಹಳ ಇಷ್ಟವಾದ ಹೊತ್ತಿಗೆ ಇದು. ಅದರಲ್ಲಿನ ಶ್ಲೋಕವೊಂದು ನಂಬಿಕೆ ಮತ್ತು ವೈಚಾರಿಕತೆಯ ಸಂಗಮದಂತೆ ಕಾಣುತ್ತದೆ. "ಔಷಧಂ ಜಾಹ್ನವಿ ತೋಯಂ ವೈದ್ಯೋ ನಾರಾಯಣೋ ಹರಿಃ" ಈ ಕಷಾಯವೇ ಸಂಜೀವಿನಿಯಾದ ಗಂಗಾತೀರ್ಥ. ಈ ಡಾಕ್ಟರ್ ದೇವರ ಸ್ವರೂಪ ಎಂಬುದು ಇದರ ಅರ್ಥ. ನಂಬಿಕೆಯನ್ನು ವೈಚಾರಿಕವಾಗಿ ಪರಿವರ್ತನೆ ಮಾಡುವಂತಹ ಸಾಲುಗಳಿವು. ನೀವು ರೋಗ ಬಂದಾಗ ಗಂಗಾ ನದಿಯ ನೀರನ್ನೇ ಔಷಧಿ ಎಂದು ಸ್ವೀಕರಿಸಿದರೆ ಏನಾಗುತ್ತದೆ ಎಂದು ನಾನು ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಆದರೆ ಔಷಧಿಯನ್ನೇ ಗಂಗೆಯ ತೀರ್ಥವೆಂದು ಭಾವಿಸಿ ಕುಡಿದರೆ ಬದುಕುತ್ತೀರಿ. ಅಂದರೆ ನಂಬಿಕೆಯನ್ನು ವೈಚಾರಿಕತೆಯ ಕಡೆಗೆ ಒಯ್ಯುವುದು ಇದೆಯಲ್ಲ, ಅದು ಮುಖ್ಯವಾದುದು. ಆಗ ನಮ್ಮ ದೈನಂದಿನ ಬದುಕಿನಲ್ಲಿ ನಮ್ಮ ಔಷಧಿ ಗಂಗಾಜಲವಾಗುತ್ತದೆ. ನಮ್ಮ ಡಾಕ್ಟರ್ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವ ಜನರೇ ದೇವರುಗಳಾಗುತ್ತಾರೆ. ಈ ರೀತಿಯಾಗಿ ನಂಬಿಕೆಯನ್ನು ವೈಚಾರಿಕತೆಯ ಕಡೆಗೆ ಕೊಂಡೊಯ್ಯುವುದರ ಮೂಲಕ ಸಾಮಾಜಿಕ ಪರಿವರ್ತನೆ ಮಾಡುವುದು ಕೂಡ ಒಂದು ರೀತಿಯ ಮೌನಕ್ರಾಂತಿಯೆ ಆಗಿದೆ.

ವಾಸ್ತವದ ಕಡೆಗೆ, ವೈಚಾರಿಕತೆಯ ಕಡೆಗೆ ಮತ್ತು ಸಾಮಾಜಿಕಪ್ರಜ್ಞೆಯ ಕಡೆಗೆ ನಾವು ಮುಂದುವರಿಯಬೇಕಾಗುತ್ತದೆ. ಅಂತಹ ಪ್ರಯೋಗಗಳನ್ನು ನಮ್ಮ ಪೂರ್ವಜರು ಮಾಡಿ ತೋರಿಸಿದ್ದಾರೆ. ಎಲ್ಲ ನಂಬಿಕೆಗಳನ್ನು ಪ್ರಶ್ನಿಸಬೇಕೆಂದು ಬುದ್ಧ ಹೇಳುತ್ತಾನೆ. ನಮ್ಮ ನಂಬಿಕೆಗಳು ವೈಚಾರಿಕ ನೆಲೆಯಲ್ಲಿ ಇರುವಂಥವೆ ಅಥವಾ ಮೂಢನಂಬಿಕೆಗಳೇ ಎಂಬುದನ್ನು ಪರೀಕ್ಷೆಗೆ ಒಡ್ಡುವುದು ಬಹಳ ಮಹತ್ವದ್ದು. ನಂಬಿಕೆಯಿಲ್ಲದೆ ಬದುಕಲಾರೆವು. ಆದರೆ ನಂಬಿಕೆಯನ್ನು ಪ್ರಯೋಗಕ್ಕೆ ಒಡ್ಡದೆ ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲ. ಎಲ್ಲವನ್ನು ನಂಬಿ ಮುಂದೆ ಅದನ್ನು ವೈಚಾರಿಕತೆಯ ಕಡೆಗೆ ಒಯ್ಯದಿದ್ದರೆ ಅದು ಮೂಢನಂಬಿಕೆಯಾಗಿ ಪರಿವರ್ತನೆ ಹೊಂದುವುದೆಂದು ಎರಡು ಸಾವಿರ ಆರುನೂರು ವರ್ಷಗಳ ಹಿಂದೆ ಬುದ್ಧ ಹೇಳಿದ್ದು ಇಂದಿಗೂ ಬದುಕಿನ ದಾರಿದೀಪವಾಗಿದೆ.

ನಮ್ಮ ದೇಶದ ಇತಿಹಾಸದಲ್ಲಿ ನಂಬಿಕೆ ಮತ್ತು ವೈಚಾರಿಕತೆಯ ಮಹಾಸಂಗಮ ಯಾರಾದರೂ ಇದ್ದರೆ ಅವರು ಬಸವಣ್ಣನವರು. ಇಡೀ ಜಗತ್ತಿನ ಇತಿಹಾಸದಲ್ಲಿ ನಂಬಿಕೆ ಮತ್ತು ವೈಚಾರಿಕತೆಯನ್ನು ಸಮಸಮನಾಗಿ ನೋಡಿದಂತಹ ತತ್ತ್ವಜ್ಞಾನಿ ಅವರು. ಬಸವಣ್ಣನವರು ಇಡೀ ಜಗತ್ತಿಗೆ ಹೊಸ ಸಿದ್ಧಾಂತವನ್ನು ಕೊಟ್ಟವರು. ಹೊಸ ದರ್ಶನವನ್ನು ಕೊಟ್ಟವರು. ಅದೇನೆಂದರೆ, ನೀನು ನಂಬು ಮತ್ತು ಅದನ್ನು ಪ್ರಯೋಗಕ್ಕೆ ಒಡ್ಡು ಎಂಬುದು ಅವರ ಸಂದೇಶವಾಗಿದೆ. 'ಇಷ್ಟಲಿಂಗದಲ್ಲಿ ನಂಬಿಕೆ ಮತ್ತು ಜಂಗಮಲಿಂಗದಲ್ಲಿ ಅದರ ವೈಚಾರಿಕ ಪ್ರಯೋಗ'ವೆಂಬುದು ಬಸವಾದಿ ಶರಣರ ಸಿದ್ಧಾಂತ. ಇದಕ್ಕೆ 'ಉಭಯಕುಳ' ಎಂದು ಬಸವಣ್ಣನವರು ಹೇಳುತ್ತಾರೆ.

ಇಷ್ಟಲಿಂಗ ನಮ್ಮನ್ನು ಒಂದು ಶಕ್ತಿಯ ಜೊತೆ ಕೂಡಿಹಾಕುತ್ತದೆ. ಇದನ್ನೇ 'ಲಿಂಗಾಂಗಸಾಮರಸ್ಯ' ಎಂದು ಹೇಳುತ್ತಾರೆ. ಜಂಗಮಲಿಂಗ ಅದನ್ನು ಪ್ರಯೋಗಕ್ಕೆ ಒಡ್ಡುತ್ತದೆ. ಧಾರ್ಮಿಕವಾಗಿ ನಮ್ಮ ಸ್ಥಿತಿ ಹೇಗಿದೆ ಎಂದರೆ, ಧರ್ಮಗ್ರಂಥಗಳನ್ನು ಯಾರಾದರು ಹಿಡಿದು ಕುಳಿತರೆ, ಅವರು ತಮ್ಮ ಕೊನೆಯ ದಿನಗಳನ್ನು ಸಮೀಪಿಸುತ್ತಿದ್ದಾರೆ ಅಥವಾ ಅಂಥವರಿಗಾಗಿ ಆಯಾ ಧರ್ಮಗಳ ಗುರುಗಳು ಓದಿ ತಿಳಿಸುತ್ತಿದ್ದಾರೆ ಎಂಬ ಭಾವ ಮೂಡುತ್ತದೆ. ಆದರೆ ಬಸವಣ್ಣನವರು "ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ, ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ ಪೂಜಿಸು ಕೂಡಲಸಂಗಮದೇವನ."

"ಶರೀರ ಗೂಡುವೋಗದ ಮುನ್ನ" ಅಂದರೆ ಯುವಕರಿದ್ದಾಗಲೇ ಈ ತತ್ತ್ವಜ್ಞಾನ ತಿಳಿದುಕೊಳ್ಳಿ ಎಂದು ಅರ್ಥವಾಗುತ್ತದೆ. ಬಸವ ತತ್ತ್ವಜ್ಞಾನ ಯುವಕರಿಗಾಗಿ ಇರುವ ತತ್ತ್ವಜ್ಞಾನ ಆಗಿದೆ. ಈ ಬದುಕಿನಲ್ಲಿ ಹೋರಾಟ ಮಾಡುತ್ತಾ, ನಂಬುತ್ತಾ, ನಂಬಿದ್ದನ್ನ ಪ್ರಯೋಗಕ್ಕೆ ತರುತ್ತಾ, ನಾವು ಮುಂದೆ ಹೋಗಬೇಕಾಗುತ್ತದೆ. ಜಂಗಮಲಿಂಗ ಎಂದರೆ ನಾವು 'ಕಾಯಕ ಪ್ರಸಾದ ದಾಸೋಹ' ಭಾವದೊಂದಿಗೆ ಈ ಜಗತ್ತಿನ ಸೇವೆಯನ್ನು ಮಾಡುವುದು. ಇದು ಇಡೀ ಮಾನವಕುಲವನ್ನು ಒಳಗೊಳ್ಳುವ ಕ್ರಿಯೆ. ಅಷ್ಟೇ ಅಲ್ಲ ಸಕಲ ಜೀವಾತ್ಮರನ್ನು ಒಳಗೊಳ್ಳುವಂಥದ್ದು. ಕಾಯಕ ಎಂಬುದು ಮಾನವಕುಲಕ್ಕೆ ಯೋಗ್ಯವಾದ ಉತ್ಪಾದನೆ ಮಾಡುವ ಕ್ರಿಯೆ. ಪ್ರಸಾದವೆಂದರೆ ಅಂಥ ಉತ್ಪನ್ನಗಳ ಸದ್ವಿನಿಯೋಗ. ದಾಸೋಹ ಎಂದರೆ ಮಿಗುತಾಯ ಮೌಲ್ಯದ ಸಾಮಾಜಿಕ ವಿತರಣೆ. ಬಸವಣ್ಣನವರು ಈ ಮೂಲಕ ಪರಿಪೂರ್ಣ ಸಮಾನತೆಯ ಸಮಾಜ ನಿರ್ಮಿಸಲು ಪ್ರಯತ್ನಿಸಿದರು.

ಇಪ್ಪತ್ತೊಂದನೆಯ ಶತಮಾನದಲ್ಲಿ ಬಹುತ್ವವನ್ನು ಎತ್ತಿಹಿಡಿಯುವ ಸಿದ್ಧಾಂತಗಳು ಬಂದಿವೆ. ಅವುಗಳ ಆಶಯವೇ ಒಳಗೊಳ್ಳುವುದು. ಎಲ್ಲರನ್ನೂ ಒಳಗೊಳ್ಳುವುದು. ಯಾವುದೇ ಜಾತಿ, ಮತ, ವರ್ಣ, ಕುಲ, ವರ್ಗ, ಲಿಂಗ, ದೇಶ ಮತ್ತು ಭಾಷೆಯ

ಭೇದವಿಲ್ಲದೆ ಎಲ್ಲ ಮನುಷ್ಯರನ್ನು ಒಳಗೊಳ್ಳುವ ಸಿದ್ಧಾಂತವೇ ಸ್ವೀಕಾರ ಸಿದ್ಧಾಂತ (ಥಿಯರಿ ಆಫ್ ಇನ್‌ಕ್ಲುಜನ್). "ಇವ ನಮ್ಮವ, ಇವ ನಮ್ಮವ, ಇವ ನಮ್ಮವ" ಎಂದು ಬಸವಣ್ಣ ಹೇಳಿದ ಸ್ವೀಕಾರದ ಬಯಕೆ ಇಂದು ಥಿಯರಿ ಆಫ್ ಇನ್‌ಕ್ಲುಜನ್ ಆಗಿದೆ.

ಅದೇ ರೀತಿ ಬಹಿಷ್ಕಾರ ಸಿದ್ಧಾಂತ ಕೂಡ (ಥಿಯರಿ ಆಫ್ ಎಕ್ಸ್‌ಕ್ಲುಜನ್) ಬಸವಪೂರ್ವ ಯುಗದಿಂದಲೂ ಇದೆ. ಅದುವೆ "ಇವನಾರವ, ಇವನಾರವ, ಇವನಾರವ" ಎಂದು ಹೇಳುವ ಸಿದ್ಧಾಂತ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಸ್ಪೃಶ್ಯ ಮುಂತಾದ ವರ್ಣ ಮತ್ತು ಜಾತಿಗಳಿಂದ ಬೇರ್ಪಡಿಸುವ ಮನುವಾದಿ ಸಿದ್ಧಾಂತವು ಬೇರ್ಪಡಿಸುವ 'ಬಹಿಷ್ಕಾರ ಸಿದ್ಧಾಂತ'ವಾಗಿದೆ.

ಮೊಟ್ಟಮೊದಲ ಬಾರಿಗೆ ನಾವು ನಮ್ಮ ನೆಲದಲ್ಲಿ ಬಹಳ ಸ್ಪಷ್ಟವಾಗಿ ಮತ್ತು ಪ್ರಾಯೋಗಿಕವಾಗಿ ಒಳಗೊಳ್ಳುವ ಸಿದ್ಧಾಂತವನ್ನು ಕಂಡಿದ್ದು ಇದ್ದರೆ ಅದು ಶರಣರ ಚಳವಳಿಯಲ್ಲಿ. ಎಲ್ಲಿ ಕುಲಗಳಿಲ್ಲವೋ, ಎಲ್ಲಿ ಜಾತಿಗಳಿಲ್ಲವೋ, ಎಲ್ಲಿ ಸ್ತ್ರೀ ಪುರುಷ ಭೇದಭಾವಗಳಿಲ್ಲವೋ, ಎಲ್ಲಿ ವರ್ಗಭೇದವಿಲ್ಲವೋ ಅದಕ್ಕೆ 'ಶರಣಸಂಕುಲ' ಎಂದು ಶರಣರು ಕರೆದಿದ್ದಾರೆ. ಈ ಸಂಕುಲ ಪ್ರಜ್ಞೆ ಇಡೀ ವಿಶ್ವದಲ್ಲಿ ದೊಡ್ಡ ಮಟ್ಟದಲ್ಲಿ ಪ್ರಯೋಗವಾದದ್ದು ಶರಣಸಂಕುಲದಲ್ಲಿ. ಇಷ್ಟಲಿಂಗ ಏಕತ್ವದ ನಂಬಿಕೆಯ ಶಕ್ತಿಯನ್ನು ಕೊಡುತ್ತದೆ. "ನಂಬಿ ಕರೆದರೆ ಓ ಎನ್ನನೇ ಶಿವನು" ಎಂದು ಬಸವಣ್ಣನವರು ಹೇಳುತ್ತಾರೆ. ನಂಬಬೇಕು ನಂಬಿದ್ದನ್ನ ಆಚರಣೆಗೆ ತರಬೇಕು. ಇಷ್ಟಲಿಂಗ ಪೂಜೆ ಕೂಡ ನಮ್ಮನ್ನು ಪರೀಕ್ಷಿಸುವ ಮತ್ತು ಅರಿವನ್ನು ಕೊಡುವ ಪೂಜೆಯಾಗಿದೆ.

"ಲಿಂಗವ ಪೂಜಿಸಿ ಫಲವೇನಯ್ಯಾ, ಸಮರತಿ ಸಮಕಳೆ ಸಮಸುಖವ ಅರಿಯದನ್ನಕ್ಕ? ಲಿಂಗವ ಪೂಜಿಸಿ ಫಲವೇನಯ್ಯಾ, ಕೂಡಲಸಂಗಮದೇವರ ಪೂಜಿಸಿ ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?" ಎಂದು ಬಸವಣ್ಣನವರು ಹೇಳಿದ್ದಾರೆ. ಲಿಂಗಪೂಜೆಯ ಫಲವೇನೆಂದರೆ ಅರಿವು. ಬಹುತ್ವದ ಅರಿವು. ನಂಬಿದ್ದನ್ನು ಕ್ರಿಯೆಗೆ ಇಳಿಸುವ ಅರಿವು. ಜ್ಞಾನವಿಲ್ಲದ ಕ್ರಿಯೆಯನ್ನು ಶರಣರು ನಂಬುವುದಿಲ್ಲ. ಹಾಗೆಯೆ ಕ್ರಿಯೆಯಿಲ್ಲದ ಜ್ಞಾನವನ್ನೂ ನಂಬುವುದಿಲ್ಲ. ಅವರು ಕೊಟ್ಟ ಅರಿವು 'ಸಮರತೀ' ಇದಕ್ಕೆ ಬಹಳ ದೃಷ್ಟಿಕೋನಗಳಿವೆ. ಏಕಕಾಲಕ್ಕೆ ಆಧ್ಯಾತ್ಮಿಕ ಮತ್ತು ಸಾಮಾಜಿಕ ಅರ್ಥಗಳನ್ನು ಈ ಪದ ಸ್ಫುರಿಸುತ್ತದೆ. 'ಶರಣ ಸತಿ, ಲಿಂಗ ಪತಿ' ಇದು ಆಧ್ಯಾತ್ಮಿಕ ಭಾವ. ಇದುವೇ ಲಿಂಗಾಂಗಸಾಮರಸ್ಯದ ಅರಿವು. ಸಾಮಾಜಿಕವಾಗಿ ಸಮರತಿ ಎಂದರೆ ಲಿಂಗಭೇದವಿಲ್ಲದ ಮನಸ್ಥಿತಿ. ಇಷ್ಟಲಿಂಗ ಪೂಜೆ ಮಾಡಿ ತಮ್ಮ ಹೆಂಡಂದಿರನ್ನು ಕೀಳಾಗಿ ಕಂಡರೆ ಇಷ್ಟಲಿಂಗ ಪೂಜೆಯ ಫಲವಿಲ್ಲ. ಲಿಂಗಭೇದವಿಲ್ಲದಂಥ ಮನಸ್ಥಿತಿಯನ್ನು ಉಂಟುಮಾಡುವಂತ ಹದ್ದೇ ಲಿಂಗಪೂಜಾಫಲ ಎಂದು ಬಸವಣ್ಣನವರು ಹೇಳುತ್ತಾರೆ. 'ಸಮಕಳೆ' ಅಂದರೆ ಪ್ರಭಾವಳಿ. ವಿಭಿನ್ನ ಕಳೆ, ತೇಜಸ್ಸು ಇವೆಲ್ಲ ಸುಳ್ಳು. ಮಾನವ ತೇಜಸ್ಸು ಒಂದೇ ಸತ್ಯ

ಎಂದು ಬಸವಣ್ಣನವರು ಹೇಳಿದ್ದಾರೆ. ಯಾವ ಬ್ರಹ್ಮಕಳೆಯೂ ಇಲ್ಲ, ಯಾವ ಬ್ರಹ್ಮತೇಜಸ್ಸೂ ಇಲ್ಲ, ಯಾವ ಕ್ಷಾತ್ರಕಳೆಯೂ ಇಲ್ಲ. ಇರುವುದೊಂದೇ ಮಾನವ ಕಳೆ, ಮಾನವ ತೇಜಸ್ಸು. ಇವತ್ತು ವಿಜ್ಞಾನವು ಇದನ್ನು ಸಮರ್ಥಿಸಿದೆ. ನಾವು ಯಾವುದನ್ನು ಪ್ರಭಾವಳಿ ಎಂದು ಕರೆಯುತ್ತೇವೆಯೋ ಅದು ದಲಿತನಿಗೂ ಇದೆ, ಬಡವನಿಗೂ ಇದೆ, ನಿರಕ್ಷರಿಗೂ ಇದೆ. ಕೇವಲ ಜ್ಞಾನಿಗಳ, ಶ್ರೀಮಂತರ, ಸಂತರ ಮತ್ತು ಮೇಲ್ಜಾತಿಯವರ ಸೊತ್ತು ಅಲ್ಲ ಅದು. ಪ್ರತಿಯೊಬ್ಬ ಮನುಷ್ಯನಿಗೂ ಆ ಕಳೆ ಇದೆ ಎಂದು ಬಸವಣ್ಣನವರು ಹೇಳಿದ್ದಾರೆ. ವಿಜ್ಞಾನವೂ ಅದನ್ನೇ ಹೇಳುತ್ತದೆ.

'ಸಮಸುಖ' ಅಂದರೆ ಈ ನಿಸರ್ಗ ಶ್ರೀಮಂತನಿಗೊಂದು ಬೆಳದಿಂಗಳು ಬಡವನಿಗೊಂದು ಬೆಳದಿಂಗಳನ್ನು ಕೊಟ್ಟಿಲ್ಲ. ಶ್ರೀಮಂತನಿಗೊಂದು ಬಿಸಿಲು ಬಡವನಿಗೊಂದು ಸೂರ್ಯೋದಯ ಕೊಟ್ಟಿಲ್ಲ. ಇಡೀ ನಿಸರ್ಗ ಬಹುತ್ವವನ್ನು ರಕ್ಷಣೆ ಮಾಡಿದೆ. ಮಾನವಕುಲವನ್ನಷ್ಟೇ ಅಲ್ಲ, ಸಕಲ ಜೀವಾತ್ಮರನ್ನು ಒಂದಾಗಿ ನೋಡುವ ಪಾಠವನ್ನು ಕಲಿಸಿದೆ. ಈ ನಿಸರ್ಗ ಸಿದ್ಧಾಂತವೇ ಬಸವ ಸಿದ್ಧಾಂತವಾಗಿದೆ. ಈ ಸಿದ್ಧಾಂತವನ್ನು ನಾವು ಇವತ್ತು ಅರ್ಥಮಾಡಿಕೊಳ್ಳಬೇಕಾಗಿದೆ. ಕೂಡಲಸಂಗಮದೇವರ ಪೂಜೆ ನದಿಯೊಳಗೆ ನದಿ ಬೆರಸಿದ ಹಾಗೆ ಮಾನವಕುಲವನ್ನು ಅಭೇದ್ಯವಾಗಿಸುವ ಶಕ್ತಿಯನ್ನು ಪಡೆದಿದೆ. ಹೀಗೆ ಎಲ್ಲ ಭೇದಗಳನ್ನು ಅಳಿಸುತ್ತ ಮಾನವಕುಲ ಒಂದಾಗುವ ಅರಿವೇ ಇಷ್ಟಲಿಂಗ ಪೂಜಾಫಲ!

ಆದ್ದರಿಂದ ಎಲ್ಲರನ್ನೂ ಒಳಗೊಳ್ಳುವ ಸಿದ್ಧಾಂತದ ಬಸವಧರ್ಮವು ವೈಜ್ಞಾನಿಕ ಮನೋಧರ್ಮದ ಪರಿಪೂರ್ಣ ಧರ್ಮವಾಗಿದೆ.

ಬಸವಣ್ಣನವರು ಕಾಯಕದ ಕುರಿತು ಹೇಳಿದ್ದಾರೆ. ಸೂರ್ಯ ಕಾಯಕ ಮಾಡದ ದಿನ ಸತ್ತಿರುತ್ತಾನೆ. ಚಂದ್ರ ಬೆಳದಿಂಗಳು ಕೊಡದ ದಿನ ಸತ್ತಿರುತ್ತಾನೆ. ನಕ್ಷತ್ರಗಳು ಬೆಳಕನ್ನು ಕೊಡದ ದಿನ ಸತ್ತಿರುತ್ತವೆ. "ರೂಪಿಂಗೆ ಕೇಡುಂಟು" ಯಾವುದು ಕಾಣಿಸುತ್ತದೋ ಅದು ಸಾಯುತ್ತದೆ. "ಸಕಲ ಜೀವರೆಲ್ಲರೂ ಪೃಥ್ವಿಯಿಂದ ಉದ್ಭವ." ಎಲ್ಲ ಜೀವರು ಈ ಪೃಥ್ವಿಯಿಂದ ಉದ್ಭವವಾಗಿದ್ದಾರೆ. ಆದ್ದರಿಂದ ಜೀವಗಳ ಮಧ್ಯೆ ಮೈತ್ರಿ ಇರಬೇಕು. ಹೀಗೆ ಎಲ್ಲವನ್ನೂ ಒಳಗೊಳ್ಳುವ ಬಹುತ್ವದ ಪರಿಕಲ್ಪನೆ ಇರಬೇಕು ಎನ್ನುವುದು ಬಸವಾದಿ ಶರಣರ ದರ್ಶನವಾಗಿದೆ. ಆದ್ದರಿಂದ ಅವರು ದೇವರನ್ನು ಹೇಗೆ ನೋಡುತ್ತಾರೆ ಅಂದ್ರೆ: ಸುಲಿಗೆ ಮಾಡುವ ದೇವರುಗಳು, ಅಭಿಷೇಕ ಬಯಸುವ ದೇವರುಗಳು, ಗುಡಿಯನ್ನು ಬೇಡುವ ದೇವರುಗಳು. ಇಂಥ ದೇವರುಗಳು ಲಿಂಗಾಯತದಲ್ಲಿ ಇಲ್ಲ. ಪ್ರತಿಯೊಬ್ಬರ ಒಳಗೆ ಬಸವಣ್ಣನವರ ದೇವರು ಆತ್ಮಸಾಕ್ಷಿಯ ರೂಪದಲ್ಲಿ ಇದ್ದಾನೆ. ಆ ಆತ್ಮಸಾಕ್ಷಿ 'ಸಕಲ ಜೀವಾತ್ಮರಿಗೆ ಲೇಸನೇ ಬಯಸು' ಎಂದು ಹೇಳುತ್ತದೆ. "ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೇ

ಕುಲಜರು" ಎಂದು ಬಸವಣ್ಣ ಹೇಳಿದ್ದಾರೆ. ಆದ್ದರಿಂದ ಬಹುತ್ವದ ಬಹು ದೊಡ್ಡ ಸಾಧನೆಯನ್ನು ನಮ್ಮ ಶರಣರು ಎಂಟುನೂರಾ ಐವತ್ತು ವರ್ಷಗಳ ಹಿಂದೆಯೇ ಮಾಡಿದರು. ಜಗತ್ತಿನಲ್ಲಿ ಎರಡೇ ಪ್ರಕಾರದ ಧರ್ಮಗಳಿವೆ ಎಂಬುದನ್ನು ಅವರು ಸರಳವಾಗಿ ಹೇಳಿದರು. ಆ ಧರ್ಮಗಳಿಗೆ ಯಾವುದೇ ದೇಶವಿರಲಿ, ಯಾವುದೇ ಭಾಷೆಯಿರಲಿ, ಯಾವುದೇ ಸಿದ್ಧಾಂತವಿರಲಿ; ಅವು ಎರಡೇ ಎರಡು ಪ್ರಕಾರದಲ್ಲಿ ವಿಭಜನೆಗೊಳ್ಳುತ್ತವೆ. "ಇವನಾರವ" ಎಂದು ಕೇಳುವುದು ಒಂದು ಪ್ರಕಾರವಾದರೆ, "ಇವ ನಮ್ಮವ" ಎಂದು ಹೇಳುವುದು ಇನ್ನೊಂದು ಪ್ರಕಾರ. ಈ ಪ್ರಕಾರಗಳು ಇಪ್ಪತ್ತೊಂದನೇ ಶತಮಾನದಲ್ಲಿ ಪ್ರಖರವಾಗಿವೆ. "ಇವನಾರವ" ಎನ್ನುವುದು ಬಹುತ್ವಕ್ಕೆ ವಿರುದ್ಧವಾದದ್ದು. ಇವನಾರವ ಇವನಾರವ ಎಂದರೆ ಇವನು ಬಿಳಿಯ, ಕರಿಯ ಎಂದು ಐರೋಪ್ಯದೇಶಗಳಲ್ಲಿ ಹೇಳಿದರೆ, ನಮ್ಮ ದೇಶದಲ್ಲಿ ಇವನು ಹೊಲೆಯ, ದಲಿತ, ಮಾದಿಗ, ಲಿಂಗಾಯತ, ಬ್ರಾಹ್ಮಣ, ಕುರುಬ, ಇವನು ಅಹಿಂದು ಇವನು ಹಿಂದು. ಈ ತೆರನಾದ ಇವನಾರವ ಎಂಬ ಪ್ರಶ್ನೆ ಮಾನವೀಯ ಸಂಸ್ಕೃತಿಗೆ ಮಾನವ ಘನತೆಗೆ ಮತ್ತು ಮನುಷ್ಯತ್ವಕ್ಕೆ ವಿರುದ್ಧವಾದುದು. "ಇವ ನಮ್ಮವ" ಎಂದು ಹೇಳುವ ಮೂಲಕ ಬಸವಣ್ಣನವರು ಬಹುತ್ವವನ್ನು ಎತ್ತಿಹಿಡಿದಿದ್ದಾರೆ. "ಇವನಾರವ" ಎನ್ನುವುದನ್ನು ವಿರೋಧಿಸಿದ್ದಾರೆ.

ಬಸವಣ್ಣನವರು ಯಾವ ರೀತಿಯಾಗಿ ದೇವರನ್ನು ಪಡೆದುಕೊಳ್ಳುತ್ತಾರೆ ಎಂಬುದು ಬಹಳ ಮುಖ್ಯವಾದದ್ದು. 'ನಿನ್ನ ನಾ ಅರಿಯದ ಮುನ್ನ ನೀನೆಲ್ಲಿದ್ದೆ' ಎಂದು ತಮ್ಮೊಳಗಿನ ದೇವರಿಗೆ ಪ್ರಶ್ನಿಸುತ್ತಾರೆ. ಬಸವಣ್ಣನವರು ಯಾವುದೇ ರೀತಿಯ ಹೊರಗಿನ ದೇವರನ್ನು ಸ್ವೀಕರಿಸಿಲ್ಲ ಎಂಬುದಕ್ಕೆ ಈ ಸಾಲು ಸಾಕ್ಷಿಯಂತಿದೆ. "ನಿನ್ನ ನಾ ಅರಿಯದ ಮುನ್ನ ನೀನೆಲ್ಲಿ ಇದ್ದೆ? ಎನ್ನೊಳಗಿದ್ದು ನಿನ್ನ ತೋರಲಿಕೆ ನೀನೇ ರೂಪಾದೆ. ಇನ್ನು ಜಂಗಮವೆ ಲಿಂಗವೆಂದು ನಂಬಿದೆ ಕೂಡಲಸಂಗಮದೇವಾ" ಎಂದು ಬಸವಣ್ಣನವರು ಹೇಳುತ್ತಾರೆ. ಇದು ಬಹುತ್ವ. ಬಸವಣ್ಣನವರ ದೃಷ್ಟಿಯಲ್ಲಿ ಸಮಾಜವೆಂದರೆ ಬರಿ ಲಿಂಗಾಯತರಲ್ಲ, ಬರೀ ಕನ್ನಡಿಗರಲ್ಲ, ಬರೀ ಭಾರತೀಯರಲ್ಲ, ಬರೀ ಮನುಷ್ಯರೂ ಅಲ್ಲ, ಸಕಲ ಜೀವಾತ್ಮರೇ ಜಂಗಮ. ಜಂಗಮವೆಂದರೆ ಸಮಾಜ. ಈ ಸಮಾಜ ಹೇಗಿದೆ ಎಂದರೆ ಇರುವೆ ಎಂಬತ್ತು ಕೋಟಿ ಜೀವರಾಶಿ ಅಂತಾರಲ್ಲಾ ಹಾಗೆ. ಇದೆಲ್ಲವು ಸೇರಿ ಬಸವ ಸಮಾಜ. ಸಕಲ ಜೀವಾತ್ಮರ ಸಮಾಜ. ಅಲ್ಲಮ ಹೇಳಿದಂತೆ ಸಕಲ ಜೀವಾತ್ಮರು ಪೃಥ್ವಿಯಿಂದ ಉದ್ಭವಿಸಿದವರು. ಆದ್ದರಿಂದ ಇಡೀ ಜೀವಸಂಕುಲವೇ ಒಂದು ಕುಟುಂಬ.

ಜೀವಜಾಲ ಸಮತೋಲನದ ಕುರಿತು ಶರಣರು ಅವತ್ತೇ ಹೇಳಿದ್ದಾರೆ. ಆದ್ದರಿಂದ ಜಂಗಮವೇ ಲಿಂಗ, ಸಮಾಜವೇ ದೇವರು. ಇಂಥ ಬಹುತ್ವದ ಪರಿಕಲ್ಪನೆಯಲ್ಲಿಯೆ ಶರಣರು ತಮ್ಮ ವಚನಗಳನ್ನು ಬರೆದರು. ಇನ್ನು ನಂಬಿಕೆಗಳು ಮತ್ತು ವಿಚಾರಗಳು. ಕೆಳಮಟ್ಟದ ವ್ಯಕ್ತಿತ್ವ ಹೊಂದಿದವರ ಚಿಂತನೆಯಲ್ಲಿ ನಂಬಿಕೆ ಮತ್ತು ವಿಚಾರಗಳು

ಒಟ್ಟೊಟ್ಟಿಗೆ ಸಾಗಲಾರವು. ನಂಬಿಕೆ ಎಂಬುದು ವಿಚಾರದ ಫಲವನ್ನು ಕೊಡುವಂತಿರಬೇಕು. ಅದು ಕುವಿಚಾರದ ಮತ್ತು ದ್ವೇಷದ ಫಲವನ್ನು ಕೊಟ್ಟರೆ ನಂಬಿಕೆಯಾಗಿ ಉಳಿಯುವುದಿಲ್ಲ. ನಂಬಿಕೆ ಅಂದ್ರೆ ಧರ್ಮ, Faith.

ಎಲ್ಲ ಧರ್ಮಗಳಲ್ಲಿ ಎರಡು ಬಗೆಯ ಜನರನ್ನು ನೋಡುತ್ತೀರಿ. ಒಂದೇ ನಂಬಿಕೆಯಿಂದ ತದ್ವಿರುದ್ಧವಾದ ವಿಚಾರಗಳನ್ನು ಅವರು ಇಟ್ಟುಕೊಂಡಿರುತ್ತಾರೆ. ನಮಗೆ ಗೊತ್ತಿದೆ ಖಾನ್ ಅಬ್ದುಲ್ ಗಫಾರ್ ಖಾನ್ ಅವರನ್ನು 'ಗಡಿನಾಡ ಗಾಂಧಿ' ಎಂದು ಕರೆಯುತ್ತೇವೆ. ಅವರು ಗಾಂಧೀಜಿಯವರ ನಿಜವಾದ ಶಿಷ್ಯರಾಗಿದ್ದರು. ಅವರು ಬಹುತ್ವದಲ್ಲಿ ನಂಬಿಕೆ ಇಟ್ಟಿದ್ದರು. ಇಸ್ಲಾಂ ಧರ್ಮದ ಹೆಸರಿನಲ್ಲಿ ಮಾನವಕುಲದ ಏಕತೆಯನ್ನು ಬಯಸಿದರು ಮತ್ತು ಬಹುತ್ವವನ್ನು ಗೌರವಿಸಿದರು. ಆದರೆ ಒಸಾಮಾ ಬಿನ್ ಲಾಡೆನ್ ಅದೇ ಇಸ್ಲಾಂ ಧರ್ಮದ ಹೆಸರಿನಲ್ಲಿ ಸಾವಿರಾರು ಅಮಾಯಕ ಜನರನ್ನು ಕೊಲೆಗೈದ ನಂತರ ತಾನೇ ತನ್ನ ಕ್ರೌರ್ಯಕ್ಕೆ ಆಹುತಿಯಾದ. ನಾನು ಒಬ್ಬ ಸನಾತನ ಹಿಂದೂ ಎಂದು ಮಹಾತ್ಮ ಗಾಂಧೀಜಿಯವರು ಹೇಳುತ್ತಲೇ ನಮಗೆ ಬಹುತ್ವದ ಪಾಠವನ್ನು ಕಲಿಸಿದರು. ಆದರೆ ಗೋಡ್ಸೆ ಅಂಥ ಗಾಂಧೀಜಿಯವರನ್ನು ಕೊಲೆಮಾಡಿದ್ದು ಅದೇ ಹಿಂದೂ ಧರ್ಮದ ಒಂದು ತರ್ಕದ ಹಿನ್ನೆಲೆಯಲ್ಲಿ. ಜೀಸಸ್ ಜೀವನವಿಧಾನದ ಮೂಲಕ ಕ್ರೈಸ್ತ ಧರ್ಮದ ಸಂಸ್ಕೃತಿಯನ್ನು ಆಳವಾಗಿ ಅರಿತುಕೊಂಡ ಮದರ್ ತೆರೇಸಾ ಲಕ್ಷಾಂತರ ಜನ ಬೀದಿ ಮಕ್ಕಳನ್ನು ಮತ್ತು ಅನಾಥ ಮಕ್ಕಳನ್ನು ಸಾಕಿದರು. ಯಹೂದಿಗಳ ವಿರುದ್ಧ ಅದೇ ಕ್ರೈಸ್ತ ಧರ್ಮವನ್ನು ಬಳಸಿದ ಹಿಟ್ಲರ್, 1939ರಿಂದ 1945ರ ತನಕ ನಡೆದ ಎರಡನೇ ಮಹಾಯುದ್ಧದಲ್ಲಿ ಐದು ಕೋಟಿ ಜನರನ್ನು ಕೊಲೆಗೈದ. ಅದರಲ್ಲಿ ಶೇಕಡಾ ಇಪ್ಪತ್ತರಷ್ಟು ಮಾತ್ರ ಸೈನಿಕರು ಇದ್ದರು. ಉಳಿದ ಶೇಕಡಾ ಎಂಬತ್ತರಷ್ಟು ಜನ ಅಮಾಯಕರು, ತಾಯಂದಿರು, ವಯಸ್ಸಾದವರು, ಮಕ್ಕಳು, ಮುದುಕರು, ನಾಗರಿಕರು. ನಾಗರಿಕರು ವಾಸಿಸುವ ಸ್ಥಾನಗಳ ಮೇಲೆ ಹಿಟ್ಲರ್ ಬಾಂಬುಗಳನ್ನು ಹಾಕಿಸಿದ. ಅದೇ ಕ್ರೈಸ್ತ ಧರ್ಮದ ಹೆಸರಲ್ಲಿ ಯಹೂದಿ ಧರ್ಮವನ್ನು ದ್ವೇಷಿಸಿದ. ಗುರು ಗೋವಿಂದಸಿಂಗ್ ಸಿಖ್ಖರ ಹತ್ತನೇ ಧರ್ಮಗುರು. 1708ರಲ್ಲಿ ಗುರು ಗ್ರಂಥಸಾಹೇಬ್ ಗ್ರಂಥವನ್ನು ಸಂಪಾದಿಸಿದರು. ಇನ್ನುಮೇಲೆ ಸಿಖ್ಖರಿಗೆ ಈ ಗ್ರಂಥವೇ ಗುರು; ಬೇರೆ ಯಾವ ಗುರುವೂ ಇಲ್ಲವೆಂದು ಹೇಳಿದರು. ಗ್ರಂಥಕ್ಕೆ ದೇವರ ಸ್ಥಾನವನ್ನು ಕಲ್ಪಿಸಿ ಸಿಖ್ಖರಿಗೆ ನೀಡಿದರು. ಅವರ ತಂದೆ ತೇಗ್‌ಬಹಾದ್ದೂರ್ ಅವರನ್ನು ಔರಂಗಜೇಬ್ ಸೈನಿಕರು ರಾಜಾಜ್ಞೆಯ ಪ್ರಕಾರ ಹಿಂಸೆಗೆ ಒಳಪಡಿಸಿದರು. ಕೊಲೆ ಮಾಡಿದರು. ನೋವು ಅನುಭವಿಸಿದ ಗುರು ಗೋವಿಂದಸಿಂಗ್ ಹೇಳಿದ್ದೇನು. "ನನಗೆ ಯಾರ ಬಗ್ಗೆಯೂ ಅಸೂಯೆ ಇಲ್ಲ ನಾನೀಗ ಸಾಧು ಸಂತರ ಸಹವಾಸ ದಲ್ಲಿದ್ದೇನೆ. ಯಾರಿಗೂ ನಾನು ಹೊರತಾದವನಲ್ಲ. ಯಾರೂ ನನಗೆ ಹೊರತಾದವರಲ್ಲ ಎಂದು" ಇದು ಬಹುತ್ವ. ಇತಿಹಾಸವು ಕ್ರೌರ್ಯದ ಪುಟಗಳಿಂದ ತುಂಬಿದೆ. ನಾವು ಇತಿಹಾಸದ ತಪ್ಪುಗಳನ್ನು

ಮನದಲ್ಲಿ ತುಂಬಿಕೊಂಡು ದ್ವೇಷವನ್ನು ಸಾಧಿಸುತ್ತ ಬದುಕಿದರೆ ಹುಲುಮಾನವರಾಗುತ್ತೇವೆ. ಹೊಸ ಇತಿಹಾಸವನ್ನು ರಚಿಸುವ, ಹೊಸ ಮಾನವೀಯ ಪರಿಕಲ್ಪನೆಯನ್ನು ಕೊಡುವ ಒಂದು ಶಕ್ತಿಯನ್ನು ಪಡೆದುಕೊಂಡಾಗ ನಿಜಕ್ಕೂ ಮನುಷ್ಯರಾಗುತ್ತೇವೆ. ಇದೇ ಬಹುತ್ವದ ಮನುಷ್ಯತ್ವ.

ಮುಹಮ್ಮದ್ ಪೈಗಂಬರ್ ತಮ್ಮ ವಚನಗಳಲ್ಲಿ ಭಾರತದ ಬಗ್ಗೆ ಎರಡು ಕಡೆ ಮಾತನಾಡಿದ್ದಾರೆ. ಅವರು ಭಾರತವನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಆ ಕಾಲದಲ್ಲಿ ಅರಬರು ಭಾರತಕ್ಕೆ ಹಿಂದ್ ಎಂದು ಕರೆಯುತ್ತಿದ್ದರು. ಅವರೇಕೆ ಭಾರತವನ್ನು ಪ್ರೀತಿಸುತ್ತಿದ್ದರು ಅನ್ನಲಿಕ್ಕೆ ನಾವು ಬೃಹದಾರಣ್ಯಕ ಉಪನಿಷತ್ ಕಡೆ ತಿರುಗಬೇಕು. 1500 ವರ್ಷಗಳ ಹಿಂದೆ ಮುಹಮ್ಮದ್ ಪೈಗಂಬರರು ಭಾರತವನ್ನು ಕುರಿತು ಹೀಗೆ ಹೇಳುತ್ತಾರೆ: 'ನಾನು ಅರಬಸ್ಥಾನದಲ್ಲಿ ಇದ್ದೇನೆ. ಆದರೆ ನನ್ನೊಳಗೆ ಅರಬಸ್ಥಾನ ಇಲ್ಲ. ನಾನು ಭಾರತದಲ್ಲಿ ಇಲ್ಲ. ಆದರೆ ನನ್ನೊಳಗೆ ಭಾರತ ಇದೆ.' ಅವರೇ ಇನ್ನೊಂದು ಕಡೆ 'ಭಾರತದಿಂದ ನನ್ನೆಡೆಗೆ ತಂಪುಗಾಳಿ ಬೀಸುತ್ತಿದೆ' ಎಂದು ತಿಳಿಸುತ್ತಾರೆ. ಇದು ಬಹಳ ಮಹತ್ವದ ಮಾತು. ಆಧ್ಯಾತ್ಮಿಕವಾಗಿ ತಂಪು ಎಂದರೆ ಶಾಂತಿ ಎಂದರ್ಥ. ಈ ದೇಶ ಸಹಸ್ರಾರು ವರ್ಷಗಳ ಹಿಂದೆ ಜಗತ್ತಿಗೆ ಏನಾದರು ಕೊಟ್ಟಿದ್ದರೆ ಅದು ತಂಪುಗಾಳಿ. ಈ ಶಾಂತಿಯ ಸಂದೇಶವನ್ನು ನಾವು ಮರೆಯಬಾರದು. ತಂಪುಗಾಳಿ ಈಗ ಗರಂ ಹವಾ ಆಗಿದೆ. 1500 ವರ್ಷಗಳ ಹಿಂದೆಯೇ ಹಿಂದುಸ್ಥಾನದಿಂದ ತಂಪುಗಾಳಿ ಮುಹಮ್ಮದ್ ಪೈಗಂಬರರಿಗೆ ತಲುಪಿದೆ ಎಂದರೆ ಈ ನೆಲದ ಬಹುತ್ವದ ಶಕ್ತಿ ಎಷ್ಟು ಮಹತ್ವದ್ದು ಮತ್ತು ಜಗತ್ತು ಅದನ್ನು ಹೇಗೆ ಸ್ವೀಕರಿಸುತ್ತಿತ್ತು ಎನ್ನುವುದರ ಕುರಿತು ನಾವು ಆಲೋಚಿಸಬೇಕಾಗಿದೆ.

ನಮ್ಮ ಉಪನಿಷತ್ತುಗಳು ವಿಶ್ವಧರ್ಮಕ್ಕೆ ಸೇರಿವೆ. ದಯವಿಟ್ಟು ಉಪನಿಷತ್ತುಗಳನ್ನು ಯಾವುದೇ ಧರ್ಮದ ಬಾಲಂಗೋಚಿಗಳಾಗಿ ಮಾಡಬಾರದು ಎಂಬುದು ನನ್ನ ಮನವಿ. ಇಡೀ ವಿಶ್ವವನ್ನು ಬಹುತ್ವದ ಶಕ್ತಿಯೊಂದಿಗೆ ಏಕತ್ರಗೊಳಿಸುವ ಶಕ್ತಿ ನಮ್ಮ ಉಪನಿಷತ್ತುಗಳಿಗೆ, ವಚನಗಳಿಗೆ, ಮಹಾವೀರನ ಮಾತುಗಳಿಗೆ, ಬುದ್ಧನ ಮಾತುಗಳಿಗೆ ಇದೆ ಎಂಬುದನ್ನು ಮರೆಯಬಾರದು.

'ಸಹನಾವವತು' ನಾವು ಪ್ರಾಥಮಿಕ ಶಾಲೆಯಲ್ಲಿದ್ದಾಗ ಪ್ರಾರ್ಥನೆಯಲ್ಲಿ ಹೇಳುತ್ತಿದ್ದ ಶ್ಲೋಕವಿದು. "ಸಹನಾವವತು ಸಹನೌ ಭುನಕ್ತು, ಸಹವೀರ್ಯಂ ಕರವಾವಹೈಃ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈಃ ಓಂ ಶಾಂತಿಃ ಶಾಂತಿಃ ಶಾಂತಿಃ." ಬೃಹದಾರಣ್ಯಕ ಉಪನಿಷತ್ತಿನ ಈ ಮಾತು: ನಾವೆಲ್ಲರೂ ಕೂಡಿ ಆಳೋಣ, ನಾವೆಲ್ಲರೂ ಕೂಡಿ ಉಣ್ಣೋಣ, ನಾವೆಲ್ಲರೂ ಸಮರ್ಥರಾಗೋಣ, ನಾವೆಲ್ಲರೂ ತೇಜಸ್ವಿಗಳಾಗೋಣ, ನಾವೆಲ್ಲರೂ ದ್ವೇಷವನ್ನು ತೊರೆಯೋಣ. ಓಂ ಶಾಂತಿಃ ಶಾಂತಿಃ ಶಾಂತಿಃ.

□

# ಶರಣರ ಚಿಂತನೆಯಲ್ಲಿ ಮನೆಯ ಪರಿಕಲ್ಪನೆ*

ಡಾ. ಸಿ. ನಾಗಣ್ಣ

ಆರಂಭದಲ್ಲಿ ಬಸವಣ್ಣನವರ ಸುಪ್ರಸಿದ್ಧ ವಚನವೊಂದನ್ನು ಗಮನಿಸೋಣ:

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
ತನುವಿನೊಳಗೆ ಹುಸಿತುಂಬಿ ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡಯನಿಲ್ಲಾ ಕೂಡಲಸಂಗಮದೇವಾ

ಈ ವಚನವನ್ನು ನಾವು ವಿಶ್ಲೇಷಿಸಿ ತಿಳಿದುಕೊಂಡ ಪಕ್ಷದಲ್ಲಿ ಈ ಶರೀರವೇ ಒಂದು ದೇವಾಲಯ; ಅಷ್ಟು ಪಾವಿತ್ರ್ಯತೆಯನ್ನು ಇದರ ವಿಷಯದಲ್ಲಿ ಕಾಪಾಡಿಕೊಳ್ಳ ಬೇಕೆಂಬ ಸತ್ಯ ಮನವರಿಕೆಯಾಗುತ್ತದೆ. **"ದೇಹವೇ ದೇವಾಲಯ"** ಎಂಬ ನಿಜವನ್ನೂ ಬಸವಣ್ಣನವರು ಸ್ಥಾಪಿಸಿದ್ದಾರೆ ಮತ್ತೊಂದು ವಚನದಲ್ಲಿ.

ಎನ್ನ ಕಾಲೇ ಕಂಭ
ದೇಹವೇ ದೇಗುಲ
ಶಿರ ಹೊನ್ನ ಕಳಶವಯ್ಯಾ

ಎನ್ನುವಲ್ಲಿಯೂ ವಾಸ್ತುಶಿಲ್ಪದ ಉಲ್ಲೇಖ ಬರುತ್ತದೆ. ಇಲ್ಲಿ ದೇಹ ಮನೆಯಾಗಿ ಉಳಿಯದೆ ದೇವಾಲಯವಾಗಿ ಪರಿವರ್ತಿತವಾಗಿದೆ. ಶರಣರ ಚಿಂತನೆಯಲ್ಲಿ ಈ ಶರೀರವನ್ನು ಮನೆಗೆ ಹೋಲಿಸಿರುವುದಾದರೂ ಈ ಮನೆ ಪರಮಾತ್ಮನ ವಾಸಕ್ಕೆ ಯೋಗ್ಯವಾಗಿ ಸಿದ್ಧವಾಗಬೇಕು ಎಂಬ ಸ್ಪಷ್ಟ ಸೂಚನೆ ಇರುವುದು.

ಈ ಶರೀರವೆಂಬುದು ಶಿವನ ಆವಾಸಸ್ಥಾನ. ಹೀಗಿರುವಾಗ ಇದನ್ನು ಅತ್ಯಂತ ಜೋಪಾನವಾಗಿ ಕಾಪಾಡಿಕೊಳ್ಳಬೇಕು. ಇದರಲ್ಲಿ ಕೊಳೆ, ಕಷ್ಮಲ, ಇಲ್ಲಣ ಶೇಖರಣೆಯಾಗದಂತೆ ಜಾಗರೂಕತೆ ವಹಿಸಬೇಕು. ಕೊಳೆ, ಕಷ್ಮಲವಿದ್ದಲ್ಲಿ ಶಿವನಿರುವುದಿಲ್ಲ.

---

* ದಿನಾಂಕ 28.08.2021ರ ಶನಿವಾರ ಸಂಜೆ ಮೈಸೂರಿನ ಸುತ್ತೂರು ಮಠದಲ್ಲಿ ಶ್ರಾವಣ ಮಾಸದ "ಶಿವಾನುಭವ ದಾಸೋಹ-280" ಕಾರ್ಯಕ್ರಮದ ಅಂಗವಾಗಿ ಮಾಡಿದ ಉಪನ್ಯಾಸದ ಲಿಖಿತ ರೂಪ.

ತನು ಮತ್ತು ಮನ – ಎರಡೂ ಶುದ್ಧವಾಗಿರಬೇಕು. ಮನೆಯೊಡೆಯನನ್ನು ಮನೆಗೆ ಬರಮಾಡಿಕೊಳ್ಳುವ ಪರಿಯೆಂದರೆ ಮನಸ್ಸನ್ನು ವಿಷಯದಿಂದ ಮುಕ್ತವಾಗಿಸುವುದು. ಇಷ್ಟು ದೊಡ್ಡ ಜವಾಬ್ದಾರಿಯನ್ನು ಬಸವಣ್ಣನವರು ಭಕ್ತರ ಮೇಲೆ ಹೊರಿಸಿದ್ದಾರೆ. ಶರೀರವನ್ನು ಲಘುವಾಗಿ ಪರಿಗಣಿಸುವವರು ಇದರಿಂದ ಬೆಚ್ಚುವುದಿಲ್ಲ, ಬೆದರುವುದಿಲ್ಲ. ಆದರೆ ಶರೀರವೆಂಬುದು ಯಾಂತ್ರಿಕ ಕಾರ್ಯಗಳ ನಿರ್ವಹಣೆಗೆ ಮಾತ್ರ ನಿಯಮಿತ ವಾದದ್ದಲ್ಲ; ಬದಲಾಗಿ ಇದು ಶಿವನಿಲಯವೇ ಆಗಿರುವಂಥದ್ದು. **'ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ'** ಎಂದು ಮತ್ತೊಂದು ಕಡೆ ಬಿನ್ನವಿಸಿಕೊಂಡಿದ್ದಾರೆ. ಈ ಮನಸ್ಸೆಂಬುದು ಹಲವು ಹತ್ತು ಅಶುದ್ಧಗಳಿಗೆ ಆಶ್ರಯತಾಣವಾಗುವುದು ಅಪರೂಪವಲ್ಲ. ಹಾಗಾಗಿ ಮತ್ತೆ ಮತ್ತೆ ಕಾಳಿಕೆಯನ್ನು ಕಳೆಯುತ್ತಿರಬೇಕು.

"The Body is the House of the Soul" ಎಂಬುದು ಪ್ರಾಯಶಃ ಒಂದು ಸಾರ್ವತ್ರಿಕ ಪರಿಕಲ್ಪನೆಯೆಂದು ತೋರುತ್ತದೆ. ಶರಣರ ಚಿಂತನೆಯಲ್ಲಿ ಹೇಗೋ ಹಾಗೆ ಕ್ರೈಸ್ತ ಚಿಂತನೆಯಲ್ಲೂ ಈ ಪರಿಕಲ್ಪನೆ ಬಹಳ ದೀರ್ಘವಾಗಿಯೇ ಚರ್ಚಿತವಾಗಿರುವು ದುಂಟು. ಇದನ್ನೇ "It is a temple of the Holy Spirit" ಎಂದೂ ಕರೆದಿದ್ದಾರೆ. ಅಗೋಚರವಾದ ದಿವ್ಯ ಜೀವನದ ಒಂದು ಆವಾಸಸ್ಥಾನವೇ ಶರೀರ. ಇದೇ ನಿಜ ನಿವಾಸ! ಸಂತಪಾಲರು ಈ ಸಂಗತಿಯನ್ನು ತಿಳಿಸಿರುವರು. ಮನುಷ್ಯರು ಮತ್ತು ದೇವರ ನಡುವಿನ ಸಂಬಂಧವನ್ನು ಚರ್ಚಿಸುತ್ತಾ ಈ ಸಂಗತಿ ವಾಸ್ತವತೆಯ ಅರಿವಿಗೆ ಬುನಾದಿ ಎಂದು ಮನದಟ್ಟು ಮಾಡುತ್ತಾರೆ. ಶರಣೆ ಅಕ್ಕಮಹಾದೇವಿಯವರ ಅನುಭಾವ ಪ್ರಪಂಚದಲ್ಲಿ **"ಕದಳಿ"** ಎಂಬುದು ಎಂಥ ಉದಾತ್ತ ಸ್ಥಾನವನ್ನು ಪಡೆದುಕೊಂಡಿದೆ ಯೆಂಬುದು ನಮಗೆ ತಿಳಿದಿದೆ:

ಕದಳಿಯೆಂಬುದು ತನು
ಕದಳಿಯೆಂಬುದು ಮನ
ಕದಳಿಯೆಂಬುದು ವಿಷಯಂಗಳು
ಕದಳಿಯೆಂಬುದು ಭವ ಘೋರಾರಣ್ಯ
ಕದಳಿ ಎಂಬುದ ಗೆದ್ದು ತವೆ ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು
ಭವಗೆದ್ದು ಬಂದ ಮಗಳೆ ಎಂದು ಕರುಣದಿಂ ತೆಗೆದು
ಬಿಗಿದಪ್ಪಿದಡೆ ಚನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು

**'ಕದಳಿ'** ಎಂಬುದು ಅಕ್ಕ ಶ್ರೀಶೈಲದಲ್ಲಿ ತಲುಪುವ ಒಂದು ಅತ್ಯುನ್ನತ ಸ್ಥಿತಿ; ಉಡುತಡಿಯನ್ನು ದಾಟಿದ ಸ್ಥಿತಿ. ಕಲ್ಯಾಣವಾದರೂ ನಮ್ಮ ತಿಳಿವಿಗೆ ನಿಲುಕುವ ನಗರವಲ್ಲ. ಅದೊಂದು ಸಾಧನಾ ವಲಯ:

ಕಲ್ಯಾಣವೆಂಬುದನ್ನಾರಿಗೂ ಹೊಗಬಾರದು
ಆಸೆ ಆಮಿಷವನಳಿದವಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು
ಒಳಹೊರಗು ಶುದ್ಧವಾದವಂಗಲ್ಲದೆ ಕಲ್ಯಾಣವ ಹೊಗಬಾರದು.

ಆದ್ದರಿಂದ ಅಕ್ಕಮಹಾದೇವಿ ಉಡುತಡಿಯೆಂಬ ಒಂದು ಭೂಪ್ರದೇಶದಿಂದ ಕಲ್ಯಾಣವೆಂಬ ಇನ್ನೊಂದು ಭೂವಲಯಕ್ಕೆ ಹೆಜ್ಜೆಯಿಟ್ಟಳು ಎಂದು ನಾವು ಸರಳ ತೀರ್ಮಾನಕ್ಕೆ ಬರಬಾರದು.

ಆಸೆ ಆಮಿಷವನಳಿದಿರಬೇಕು
ಒಳ ಹೊರಗು ಶುದ್ಧವಾಗಿರಬೇಕು
ಅಂಥವರಿಗೆ ಮಾತ್ರ ಕಲ್ಯಾಣಕ್ಕೆ ಪ್ರವೇಶ

ಶರಣರ ಚಿಂತನೆಯಲ್ಲಿ "ಮನೆ" ಎಂಬುದು ಮನಸ್ಸೇ ಆಗಿರುವಂತೆ ಒಂದು "ಊರೂ" ಸಹ ಮನಸ್ಸೇ ಆಗಿದೆ. ಹಾಗಾಗಿ "ಕಲ್ಯಾಣ"ವೆಂಬುದು ಮನಸ್ಸಿನ ಒಂದು ಅವಸ್ಥೆ; "ಶ್ರೀಶೈಲ" ಅಥವಾ "ಕದಳಿ" ಎಂಬುದು ಮನಸ್ಸಿನ ಇನ್ನೊಂದು ಅವಸ್ಥೆ. ಅಕ್ಕಮಹಾದೇವಿ ಕಲ್ಪಿಸಿಕೊಳ್ಳುವ ಮದುವೆಯ ಮಂಟಪ ನೋಡಿ:

ಪಚ್ಚೆಯದ ನೆಲೆಗಟ್ಟು, ಕನಕದ ತೋರಣ
ವಜ್ರದ ಕಂಭ, ಪವಳದ ಚಪ್ಪರವನಿಕ್ಕಿ
ಮುತ್ತು ಮಾಣಿಕದ, ಮೇಲುಕಟ್ಟು ಕಟ್ಟಿ,
ಮದುವೆಯ ಮಾಡಿದರು, ಎಮ್ಮವರೆನ್ನ
ಮದುವೆಯ ಮಾಡಿದರು; ಕಂಕಣ ಕೈಧಾರೆ
ಸ್ಥಿರ ಸೇಸೆಯನಿಕ್ಕಿ, ಚೆನ್ನಮಲ್ಲಿಕಾರ್ಜುನನೆಂಬ
ಗಂಡಂಗೆನ್ನ ಮದುವೆಯ ಮಾಡಿದರು.

15ನೇ ಶತಮಾನದಲ್ಲಿ ಸ್ಪೇನ್ ದೇಶದ ಅವಿಲಾದಲ್ಲಿ ಇದ್ದಂಥ ಮಹಿಳಾ ಅನುಭಾವಿ ಥೆರೇಸಾ ಅವರ ದೃಷ್ಟಿಯಲ್ಲಿ ಈ ಶರೀರವೆಂಬುದು Interior Castle ಅಥವಾ "ಆಂತರಿಕ ದುರ್ಗ" ಎಂದಾಗಿದೆ. ಈ ಆಂತರಿಕ ದುರ್ಗದಲ್ಲಿ ತಳಭಾಗದಲ್ಲಿ ವಿಶಾಲವಾದ ಆವಾಸಸ್ಥಾನ; ಅದರ ಮೇಲೆ ಅನೇಕ ಮಹಡಿಗಳಿವೆ. ಈ ಮಹಡಿಗಳಲ್ಲಿ ಎಲ್ಲ ಅಂತಸ್ತುಗಳೂ ಉಪಯೋಗಕ್ಕೆ ಬರುವುದಿಲ್ಲ; ಎಲ್ಲವೂ ತೃಪ್ತಿಕರವಾಗಿ ಬಳಸಲು ಯೋಗ್ಯವಾಗಿರುವುದಿಲ್ಲ. ಥೆರೇಸಾ ಒಂದು ಕಡೆ: "ನನ್ನ ಆಧ್ಯಾತ್ಮಿಕ ಜೀವನ ಒಂದು ಮನೆಯಂತೆ ಸುದೃಢವಾಗಿದೆ" ಎಂದು ಹೇಳಿಕೊಂಡಿದ್ದಾಳೆ. ಬಸವಣ್ಣನವರ ವಚನದಲ್ಲಿ ಸುಸ್ಪಷ್ಟವಾಗುವಂತೆ ನಮ್ಮ ಶರೀರವೆಂಬ ಮನೆಯನ್ನು ದೇವರ ವಾಸಕ್ಕೆ ಯೋಗ್ಯವಾಗುವಂತೆ ನಾವು ಜತನಗೊಳಿಸಿಕೊಳ್ಳಬೇಕೆಂಬ ಸಂದೇಶ ಇಲ್ಲಿಯೂ ಇದೆ. ಆದಾಗ್ಯೂ, ನಮ್ಮ ಇಂದ್ರಿಯ ವ್ಯಾಪಾರಗಳಿಂದಾಚೆ ಗೋಚರಿಸುವ ಬದುಕಿನ ತಳಮಳ, ಸಂಪರ್ಕ, ಸಂವಹನ

ಇತ್ಯಾದಿಗಳನ್ನು ಇಂದ್ರಿಯ ಜೀವನದ ಉಪಾಧಿಗಳಿಂದ ಗ್ರಹಿಸುವುದು ದುಸ್ತರ.

ಈ ಆಂತರಿಕ ದುರ್ಗವೆನ್ನುವುದು ಪ್ರಾರ್ಥನೆಗೆ ಸಂಬಂಧಿಸಿದ ಸತ್ಯಗಳನ್ನು ತಿಳಿಸುವ ದೃಷ್ಟಾಂತ. ದೇವರು ಆತ್ಮವನ್ನು ಸೃಷ್ಟಿಸುವುದು ವಿಸ್ಮಯಕರವಾದ ರೀತಿಯಲ್ಲಿ; ಸ್ವಾತಂತ್ರ್ಯ ಮತ್ತು ವೈವಿಧ್ಯತೆಯಿಂದ. ಕಟ್ಟಡದ ವಿನ್ಯಾಸ ಸ್ವರ್ಗದ ಸಾಮ್ರಾಜ್ಯದ (Kingdom of Heaven) ಬಗ್ಗೆ ನಮಗೆ ಏನೂ ತಿಳಿಸಿಕೊಡುವುದಿಲ್ಲ. ನಮ್ಮ ಮನೆಯ ಕೈತೋಟದ ಉಸ್ತುವಾರಿ ಹಾಗೂ ಮನೆಯೊಳಗಿನ ಪೀಠೋಪಕರಣಗಳ ಜೋಡಣೆಯ ವಿಷಯ ನಮ್ಮ ನಮ್ಮ ವೈಯಕ್ತಿಕ ಶ್ರದ್ಧೆಗೆ ಸಂಬಂಧಿಸಿದ ಸಂಗತಿ. ಆದಾಗ್ಯೂ, ನಗರ ಯೋಜನೆ ನಮ್ಮ ಗಮನದಲ್ಲಿರತಕ್ಕದ್ದು. ಏಕೆಂದರೆ: ನಮ್ಮ ಮನೆಯ ಒಳಗೆ ಮಿರುಗುವ ಕಿಟಕಿ ಪರದೆಯನ್ನು ನಾವು ಇಳಿಬಿಟ್ಟ ಪಕ್ಷದಲ್ಲಿ ಹೊರಗಿನಿಂದ ನೋಡುವವರಿಗೆ ಅದು ಹೇಗೆ ಕಾಣುತ್ತದೆ ಎಂಬುದರ ಬಗ್ಗೆ ದಿಗಿಲಿರಬೇಕು. ಅಂದರೆ, ಆತ್ಮದ ವೈಯಕ್ತಿಕ ಬದುಕು ಎಷ್ಟೇ ಉತ್ಕಟವಾಗಿರಲಿ ನಮ್ಮ ಪೌರ ಜವಾಬ್ದಾರಿಯನ್ನು ಮರೆಸುವಷ್ಟು ಅದು ನಮ್ಮನ್ನು ವಿಮುಖಗೊಳಿಸಬಾರದು. ಒಂದು ವಿಶಾಲವಾದ ಸಮಾಜದ ಸದಸ್ಯತ್ವದ ಸ್ಥಾನವನ್ನು ನಾವು ಗಳಿಸಿದಾಗಲೇ ನಮ್ಮ ಬದುಕಿಗೆ ಅರ್ಥ ಪ್ರಾಪ್ತಿಯಾಗುವುದು. ಹಾಗಾಗಿ ನಮ್ಮ ಪುಟ್ಟ ಮನೆಯ ಎಲ್ಲ ವಹಿವಾಟಿಗೂ ವಿಶಾಲವಾದ ನಗರದ ಪರಿಕಲ್ಪನೆ ಅತ್ಯಗತ್ಯವಾಗುತ್ತದೆ. ಆ ಮಿತಿಯನ್ನೂ ದಾಟಿ ಇನ್ನೂ ದೊಡ್ಡದಾದ ವಿಶ್ವದ ಅರಿವು ಬೇಕು.

ದೇವರ ಜೊತೆ ನಮ್ಮ ಸುದೃಢವಾದ ಸಂಬಂಧವನ್ನು ಕಾಪಾಡಿಕೊಳ್ಳುವುದರ ಜೊತೆಗೆ ನಗರದ ಉಳಿದ ಭಾಗದ ಜೊತೆ ನಮ್ಮ ನಂಟನ್ನು ಕಾಯ್ದುಕೊಳ್ಳಬೇಕು – ಅಗೋಚರವಾದ ಬದುಕಿನ ಹೆಣಿಗೆ ಎಲ್ಲ ನಿವಾಸಿಗಳನ್ನೂ ಏಕತ್ರವಾಗಿ ಬಂಧಿಸುವ ಕಾರಣದಿಂದ. ಇಡೀ ನಗರವು ನಿರ್ಮಾಣವಾಗಿರುವುದು ಅಖಂಡವೂ, ಅಚಲವೂ ಆದ ಬಂಡೆಯ ಮೇಲೆ ಪ್ರತಿಯೊಂದು ಪುಟ್ಟ ಮನೆಯ ಕೊಠಡಿಯನ್ನೂ ಚೈತನ್ಯದಿಂದ ತುಂಬುವಂಥ ಏರ್ಪಾಟೂ ಇರುತ್ತದೆ. ಅಕ್ಕಮಹಾದೇವಿಯವರ "ಬೆಟ್ಟದಾ ಮೇಲೊಂದು ಮನೆಯ ಮಾಡಿ" ಎಂಬ ವಚನ ನಿಗೂಢಾರ್ಥಗಳಿಗೂ ಸುಪರಿಚಿತವಾದದ್ದು. ಇದು ಸಾಮಾನ್ಯ ನಿವಾಸವಲ್ಲ.

ಬೆಟ್ಟದ ಮೇಲೆ ನಿರ್ಮಿಸಿದುದು
ಸಮುದ್ರದ ತಡಿಯಲ್ಲಿ ರೂಪುಗೊಂಡದ್ದು
ಸಂತೆಯಲ್ಲಿ ತಲೆಯೆತ್ತಿದುದು

ಒಂದೇ ಮಾತಿನಲ್ಲಿ ಹೇಳುವುದಾದರೆ ಇದು ಬಹಿರಂಗದ ಮನೆ. ಇಂಥ ಬಹಿರಂಗದ ಮನೆ ಹಲವು ಕಂಟಕಗಳಿಗೆ ಈಡಾಗುವುದರಿಂದ ಅಂತರಂಗದಲ್ಲಿ ಸಮಾಧಾನಿಯಾಗಿರಬೇಕು. ಇಲ್ಲಿ ಕೋಪವುಂಟುಮಾಡುವ ಸನ್ನಿವೇಶಗಳೇ ಹೆಚ್ಚು;

ಹಾಗಿರಲಾಗಿ ವ್ಯಕ್ತಿ ಸಮಾಧಾನಿಯಾಗಿರಬೇಕು. ಆಧ್ಯಾತ್ಮ ಶಕ್ತಿ ಸಂಚಯಕ್ಕೆ ಸಮಾಧಾನವೇ ಮೂಲ. ಬಸವಣ್ಣನವರು "ಮನೆಯೊಳಗೆ ಮನೆಯೊಡೆಯನಿಲ್ಲ" ಎಂದರೆ ಸಂತ ಅಗಸ್ಟಿನ್ನರು "If I am not in thee, then I am not at all" ಎಂದು ನಿರ್ಧಾರಪೂರ್ವಕವಾಗಿ ಹೇಳುತ್ತಾರೆ. "ನಾನು ನಿನ್ನಲ್ಲಿ ಇಲ್ಲದಿದ್ದರೆ, ನಾನು ಇಲ್ಲವೇ ಇಲ್ಲ" ಅಂದರೆ ನಾವು ಸದಾ ಭಗವಂತನ ಧ್ಯಾನದಲ್ಲಿ ಮುಳುಗಿರಬೇಕು. ಪ್ರಗತಿ ಹೊಂದುವ ಆತ್ಮ ಸದಾ ದೇವರಲ್ಲಿರಬೇಕು. 'ಪ್ರಗತಿ' ಎಂಬ ಪರಿಕಲ್ಪನೆ ಚಲನೆಯನ್ನು ಸೂಚಿಸುತ್ತದೆ.

ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ಹೋಗುವುದು ಚಲನೆ. ಆಧ್ಯಾತ್ಮಿಕ ಜೀವನ ವ್ಯಕ್ತಿಗತ ಸಾಹಸವಾಗಿ, ಸಡಗರವಾಗಿ ನಮಗೆ ಗೋಚರವಾಗುತ್ತದೆ. "ಪರಿಪೂರ್ಣತೆ" ಎಂದು ಕರೆಯುವ ಕಡೆಯ ಘಟ್ಟದ ಮೇಲೆ ನಮ್ಮ ಗಮನ ಕೇಂದ್ರೀಕೃತವಾಗುವುದು ಸಹಜ. ವಾಸ್ತವವಾಗಿ ಕಡೆಯ ಘಟ್ಟವಾದ ಶ್ರೀಶೈಲದ "ಕದಳಿ" ಎಂಬುದು ಚಲನೆಯಿಂದ ದಕ್ಕುವುದಲ್ಲ; "ನಿರಂತರವಾಗಿ ದೇವರಲ್ಲಿರುವುದೇ ನಿಜವಾದ ಪ್ರಗತಿ; ಅದೇ ಕದಳಿ". ಇನ್ನು ಆತ್ಮ ಯಾವ ಬಗೆಯ ಮನೆಯಲ್ಲಿ ವಾಸಿಸುತ್ತದೆ ಎಂಬ ವಿಚಾರ. ಅದು ವಾಸ ಮಾಡುವುದು ಎರಡು ಅಂತಸ್ತಿನ ಮನೆಯಲ್ಲಿ ಎಂದು ಕೆಲವು ಅನುಭಾವಿಗಳ ಅಭಿಪ್ರಾಯ. ಮನಶ್ಶಾಸ್ತ್ರಜ್ಞರು ಆತ್ಮ ತಂಗುವುದು ಮಣ್ಣಿನ ನೆಲದ ಗುಡಿಸಿಲಿನಲ್ಲಿ ಎನ್ನುತ್ತಾರೆ. ಮೇಲ್ಮಹಡಿಯಿಲ್ಲದ ಕಾರಣ ಆತ್ಮಕ್ಕೆ ಊರ್ಧ್ವಗಾಮಿ ಯಾಗಿ ಏರುವ ಪ್ರಮೇಯ ಒದಗುವುದಿಲ್ಲವಂತೆ. ಇನ್ನು ಕೆಲವು ಅನುಭಾವಿಗಳು ಆತ್ಮ ಸರೋವರದ ಮಧ್ಯದಲ್ಲಿ ನಿಂತ ನಿವಾಸದಲ್ಲಿ ತಂಗುತ್ತದೆಯೆಂದು ತಿಳಿಸುತ್ತಾರೆ:

ಜಲದ ಮಂಟಪದ ಮೇಲೆ
ಉರಿಯ ಚಪ್ಪರವನಿಕ್ಕಿ
ಆಲಿಕಲ್ಲ ಹಸೆಯ ಹಾಸಿ
ಬಾಸಿಗವ ಕಟ್ಟಿ
ಕಾಲಿಲ್ಲದ ಹೆಂಡತಿಗೆ
ತಲೆಯಿಲ್ಲದ ಗಂಡ ಬಂದು ಮದುವೆಯಾದನು
ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ
ಚನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರೆಲೆ ಅವ್ವ.

ಜಲದ ಮಂಟಪ, ಉರಿಯ ಚಪ್ಪರ, ಆಲಿಕಲ್ಲ ಹಸೆ, ಇದೆಲ್ಲ ಸಾಮಾನ್ಯ ವ್ಯಾಪಾರ ವೆಂಬಂತೆ ಅಕ್ಕ ವರ್ಣಿಸುತ್ತಾಳೆ.

ನಾವು ನಮ್ಮ ಸಾಮಾನ್ಯ ಜ್ಞಾನದ ಆಧಾರದ ಮೇಲೆ ನೆಲಮಹಡಿಯೆಂಬುದು ಒಂದು ಉಂಟು ಎಂದು ತಿಳಿಯುತ್ತೇವೆ. ಈ ನೆಲಮಹಡಿ ಅಂದರೆ ನಮ್ಮ ಜೈವಿಕ ಪ್ರಕೃತಿಯನ್ನು ಒಳಗೊಂಡ ನೈಸರ್ಗಿಕ ಜೀವನ; ನಮ್ಮ ಸೆಳೆತಗಳು, ನಮ್ಮ ಆಕಾಂಕ್ಷೆಗಳು

ಇಲ್ಲಿ ಪ್ರತಿನಿಧಿಸಲ್ಪಡುತ್ತವೆ. ಈ ಬದುಕು ಮುಖ್ಯ. ಏಕೆಂದರೆ ಇದು ದಿವ್ಯ ನಿರ್ಮಾಪಕನ ಕ್ರಿಯೆಯ ಒಂದು ಫಲಿತ. ಅಂದರೆ ಮೇಲ್ಮಹಡಿಯೂ ಉಂಟೆಂಬ ತಿಳುವಳಿಕೆ ಇದೆ. ಮೇಲ್ಮಹಡಿಯಲ್ಲಿ ಇನ್ನೂ ಉತ್ತಮವಾದ ಸಾಧ್ಯತೆಗಳ, ಉತ್ತಮವಾದ ಬದುಕಿನ ಭರವಸೆಯಿದೆ. ಇದನ್ನೇ ನಾವು "Capacity for God" ಎಂದು ಕರೆಯುವುದು. ಒಂದೇ ಅಂತಸ್ತಿನಲ್ಲಿ ನಾವು ಬದುಕಲು ತೀರ್ಮಾನಿಸುವುದಾದರೆ ನಮ್ಮ ಬದುಕಿನ ಸಾಧ್ಯತೆಗಳನ್ನು ನಾವೇ ಕುಗ್ಗಿಸಿದ ಹಾಗೆ ಆಗುತ್ತದೆ. ಪ್ರಾಕೃತಿಕ ಜೀವನವೇ ಸಾಕು ಎಂದು ತೀರ್ಮಾನಿಸಿ, ಅಲ್ಲೇ ಬದುಕಲು ನಿರ್ಧರಿಸಿದರೆ ಚೈತನ್ಯದ ಸಹವಾಸದಲ್ಲಿ ದೇವರ ಸಮೀಪದಲ್ಲಿ ಬದುಕುವ ಭಾಗ್ಯದಿಂದ ವಂಚಿತರಾಗುತ್ತೇವೆ. "We are created both in time and eternity" ಅಂದರೆ ನಾವು ಕಾಲಕ್ಕೆ ಬದ್ಧರಾಗಿಯೂ, ಕಾಲಾತೀತವಾಗಿಯೂ ಸೃಷ್ಟಿಯಾಗಿದ್ದೇವೆ. ಹಾಗಾಗಿ, ಒಂದಲ್ಲ, ಎರಡು ಕ್ರಮದಲ್ಲಿ ನಮ್ಮ ಬದುಕು ನಿಗದಿಯಾಗಿದೆ. ಆದ್ದರಿಂದಲೇ ನಮ್ಮ ಆಲೋಚನೆಯಲ್ಲಿ, ಕೃತಿಯಲ್ಲಿ ಮತ್ತು ಮಾತಿನಲ್ಲಿ ಈ ದ್ವಂದ್ವ ಅಥವಾ ಯುಗಳ ಸನ್ನಿವೇಶಕ್ಕೆ ನಮ್ಮನ್ನು ನಾವು ಒಗ್ಗಿಸಿಕೊಳ್ಳಬೇಕು. ಈ ದೃಷ್ಟಿಯಿಂದ ಹೇಳುವುದಾದರೆ ಪೂರ್ಣ ಪ್ರಮಾಣದ ಆಧ್ಯಾತ್ಮಿಕ ಜೀವನವೆನ್ನುವುದು ಬರೇ ಮೇಲು ಮಹಡಿಯಲ್ಲಿ ವಿಹರಿಸುವುದರಿಂದಲೇ ಸಾಧ್ಯವಾಗುವುದಿಲ್ಲ. ನೆಲ ಅಂತಸ್ತನ್ನು ಕಡೆಗಣಿಸಿ ಅದರ ಉಪಯೋಗವನ್ನು ಮತ್ತು ಅಗತ್ಯತೆಗಳನ್ನು ಪರಿಗಣಿಸದೆಯೇ ನಾವು ಮುಂದುವರಿಯಲು ಸಾಧ್ಯವಿಲ್ಲ. ಏಕೆಂದರೆ ಮೇಲು ಮಹಡಿಯೆಂಬುದು ಕೆಳ ಅಂತಸ್ತಿನ ಆಧಾರದ ಮೇಲೆ ನಿಂತಿದೆ ಎಂಬುದನ್ನು ಮರೆಯಬಾರದು. ಅಕ್ಕಮಹಾದೇವಿ ಹೇಳುತ್ತಾಳೆ:

> ಶರಣರು ಮೆಟ್ಟಿದ ಧರೆಯೆ ಪಾವನ
> ಶರಣರು ಇದ್ದ ಪುರವೆ ಕೈಲಾಸ
> ಶರಣರು ನಿಂದುದೇ ನಿಜ ನಿವಾಸ
> ಶರಣ ಬಸವಣ್ಣನಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರ

ಶರಣರು ಮೆಟ್ಟಿದ ಧರೆ; ಶರಣರು ಇದ್ದ ಪುರ; ಶರಣರು ನಿಂತ ನಿಜನಿವಾಸ; ಇವೆಲ್ಲ ಸಾಮಾನ್ಯರ ಅಳತೆಗೆ ನಿಲುಕುವ ಕ್ಷೇತ್ರವಲ್ಲ. ಸಂತ ಥೆರೇಸಾ ತನ್ನ ಸಾಧನೆಯ ಹಾದಿಯಲ್ಲಿ ಒಂದು ಘಟ್ಟದಲ್ಲಿ **"ಈಗ ನನ್ನ ಪ್ರಾರ್ಥನೆ ಸುದೃಢವಾದ ಮನೆಯಂತಾಗಿದೆ"** ಎನ್ನುತ್ತಾಳೆ. **"ಮನೆ ಸುದೃಢವಾಗಬೇಕಾದರೆ, ಪ್ರಾರ್ಥನೆ ಸುದೃಢವಾಗಬೇಕು"**. ದಿವ್ಯವಾದದ್ದು ಮತ್ತು ಮಾನುಷವಾದದ್ದು – ಎರಡರ ಬೆಸುಗೆಯಿಂದ ಮಾತ್ರ ಮನೆ ಬಲಗೊಂಡಿದೆ. ಮನುಷ್ಯ ಜೀವನವನ್ನು ದೇವರು ತನ್ನ ಉಪಸ್ಥಿತಿಯಿಂದ ಆಶೀರ್ವದಿಸಿದಾಗ ಮಾತ್ರ ಸಂತರಿಗೆ ಪಾವಿತ್ರ್ಯತೆಯ ಸಹಜ ಬುನಾದಿಯ ದರ್ಶನವಾಗುವುದು.

ನಾವು ಎರಡು ಮಹಡಿಯ ಜೀವಿಗಳಾಗಿರುವುದರಿಂದ ಪ್ರಾಕೃತಿಕವಾದ ಮತ್ತು ಅತಿಮಾನುಷವಾದ ಸ್ಥಾನಮಾನಗಳನ್ನು ಗಳಿಸಬೇಕಾಗಿದ್ದು ಇಂದ್ರಿಯ ಮತ್ತು ಚೇತನ

ಎರಡನ್ನೂ ನಿಭಾಯಿಸಬೇಕಾಗಿದೆ. ಬಸವಣ್ಣನವರ **"ಉಳ್ಳವರು ಶಿವಾಲಯ ಮಾಡುವರು"** ಎಂಬ ವಚನವನ್ನು ಗಮನಿಸಿದರೆ ತಿಳಿಯುತ್ತದೆ ಈ ಸತ್ಯ. ಮನೆ ನಿರ್ಮಾಣವಾಗಿರುವುದು ದೇವರಿಗೋಸ್ಕರ, ಅವನ ಅಸೀಮ ಪರಿಪೂರ್ಣತೆಯನ್ನು ಪ್ರತಿಫಲಿಸುವ ಸಲುವಾಗಿ. ಕೆಳಅಂತಸ್ತಿನಲ್ಲಿ ಈ ಪ್ರಪಂಚದ ಹೊಣೆಗಾರಿಕೆಯ ಸಮರ್ಪಕ ನಿರ್ವಹಣೆಯಾಗುತ್ತದೆ. ಇದನ್ನೇ ಪುರಾತನರು ನ್ಯಾಯದ ಗುಣಮಟ್ಟ ಅಥವಾ 'Quality of Justice' ಎಂದು ಕರೆದರು. ಇದರ ಜೊತೆಗೆ ವಿವೇಕ, ಸಂಯಮ ಮತ್ತು ದೃಢತೆ ಪ್ರಾಪ್ತವಾಗುವುದೂ ಈ ಅಂತಸ್ತಿನಲ್ಲಿಯೇ. ಮೇಲ್ಮಹಡಿಯಲ್ಲಿ ನಂಬಿಕೆ, ಭರವಸೆ ಮುಂತಾದ ಅಮರತ್ವದ ಗುಣಗಳು ಅಂಕುರಿಸಿ ಬೆಳೆದು ದೇವರ ಕಡೆ ನಮ್ಮ ಗಮನವನ್ನು ಸೆಳೆದು, **"ದೇವರಿಲ್ಲದೆ ಬದುಕಿಲ್ಲ"** ಎಂಬ ನಿಜವನ್ನು ನಮಗೆ ಸದಾ ಮನದಟ್ಟು ಮಾಡುವಂಥದ್ದು.

ಆತ್ಮದ ಮನೆ ದೇವರ ಆವಾಸಸ್ಥಾನವಾಗಿ ಉನ್ನತೀಕರಣಗೊಳ್ಳಬೇಕಾದರೆ ಕೆಳ ಅಂತಸ್ತು ಸರ್ವಾಲಂಕರಣದಿಂದ ಶೋಭಿಸಬೇಕು. ವಿಶಾಲ ಕಕ್ಷೆಯಲ್ಲಿ ನಾವು ವಾಸಿಸ ಬೇಕಾಗಿರುವುದರಿಂದ ಅದರ ಪೂರ್ಣ ನಿರ್ವಹಣೆ ನಮ್ಮ ಹೊಣೆ. ಅದರ ಯಾವ ಒಂದು ಭಾಗವನ್ನೂ ನಾವು ಉಪೇಕ್ಷಿಸುವಂತಿಲ್ಲ. ದಿವಾನಖಾನೆಯನ್ನು ಅಂದಗೊಳಿಸಿ ಕೈತೊಳೆಯುವ ನಳವನ್ನು ಬಿಟ್ಟುಬಿಟ್ಟರೆ ಹೇಗೆ? ಇಡೀ ಬದುಕನ್ನು ಪರಿಪೂರ್ಣತೆಯೆಡೆಗೆ ಕೊಂಡೊಯ್ಯುತ್ತಿರುವ ದಿವ್ಯವಾದ ಉದ್ದೇಶವಿರುವುದರಿಂದ ಇದೇ ಮನೆಯೇ ಸುಂದರವಾಗಿರತಕ್ಕದ್ದು. ಅದು ಸುಂದರವಾಗಿರಲೆಂದೇ ನಿರ್ಮಾಣವಾದದ್ದು – ಏಕೆಂದರೆ ಅದು ಪ್ರಕಟವಾಗಿರುವುದೇ ದೇವರಿಂದ, ದೇವರ ವಿನ್ಯಾಸಕ್ಕನುಗುಣವಾಗಿ. "The soul does not grow strong merely by enjoying its upstairs privileges and ignoring downstairs disadvantages, problems and responsibilities, but only by tackling its real task of total transformation".

ಅಂದರೆ, ಕೇವಲ ಮೇಲ್ಮಹಡಿಯ ಅನುಕೂಲತೆಗಳಿಂದ ಸುಖಪಡುವುದಕ್ಕೆ ತಂಗದೆ ಕೆಳ ಅಂತಸ್ತಿನ ಅನನುಕೂಲತೆಗಳು, ಸಮಸ್ಯೆಗಳು ಹಾಗೂ ಜವಾಬ್ದಾರಿಗಳನ್ನೂ ಹೊರಬೇಕಾಗಿದೆ.

"A habitation of God in the Spirit" ಪ್ರಾಕೃತಿಕ ಜೀವನ ಮತ್ತು ದಿವ್ಯ ಜೀವನ ಎರಡೂ ಪ್ರಕಟವಾಗುವುದು ಚೈತನ್ಯದೊಳಗೆ ದೇವರ ಮನೆ ಸಿದ್ಧವಾದಾಗ. In this unperfected human nature the absolute life itself has designed to dwell. ಈ ಅಪರಿಪೂರ್ಣವಾದ ಮನುಷ್ಯ ಪ್ರಕೃತಿಯಲ್ಲೇ ತಂಗಲು ಪರಿಪೂರ್ಣ ಚೈತನ್ಯ ಕೃಪೆ ತೋರುವುದರಿಂದ ಇದು ಸಾಧ್ಯವಾಗುತ್ತದೆ.

'ಮೂಲ ಜೈವಿಕ ಬದುಕು' ಮತ್ತು 'ಆಧ್ಯಾತ್ಮಿಕ ಬದುಕು' ಎಂಬ ಭೇದವನ್ನು ಪರಿಶೀಲಿಸಲು ನಾವು ಹಿಂಜರಿಯಬಾರದು. ಹಾಗೆ ಹಿಂಜರಿದರೆ ಕೆಳ ಅಂತಸ್ತಿಗೆ ಉನ್ನತ ಆಯಾಮವನ್ನು ಕೊಡುವಲ್ಲಿ ನಾವು ವಿಫಲರಾಗುತ್ತೇವೆ. ಸೇಂಟ್ ಅಗಸ್ಟಿನ್‌ರು ತೋರಿದ ಸಾಹಸಮಯವಾದ ಧೈರ್ಯ ನಮ್ಮದಾಗಬೇಕು. ಅಗಸ್ಟಿನ್ ಹೇಳಿದರು:

The house of my soul is narrow;
do thou enter and enlarge it,
It is ruinous; do thou repair it.

"ನನ್ನ ಆತ್ಮದ ಮನೆ ಕಿರಿದಾಗಿದೆ; ನೀನು ಪ್ರವೇಶಿಸಿ ಅದನ್ನು ಹಿಗ್ಗಿಸು; ಅದು ಹಾಳುಬಿದ್ದಿದೆ, ನೀನದನ್ನು ದುರಸ್ತಿಗೊಳಿಸು" ಎಂಬ ಪ್ರಾರ್ಥನೆ. ಆ ಅರ್ಥದಲ್ಲೇ ನಮ್ಮ ಶರಣ ಬಸವಣ್ಣನವರು ಹೇಳಿದ್ದು:

ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ ಎಂದು.

ಆತ್ಮಕ್ಕೂ ದೇವರಿಗೂ ಇರುವ ಸಂಬಂಧವನ್ನು ನಾವು ಅರಿಯುವಾಗ ಆತ್ಮದ ಅವಳಿ ಲಕ್ಷಣಗಳು ನಮ್ಮ ಗಮನಕ್ಕೆ ಬರುತ್ತವೆ. ಆ ಅವಳಿ ಲಕ್ಷಣಗಳು ಯಾವುವೆಂದರೆ:

(i) ಮಗುವಿನಂಥ ಅವಲಂಬನೆ

(ii) ಸುಖಮಯವಾದ ಆರಾಧನೆ

ಅಖಂಡೇಶ್ವರರ ಒಂದು ವಚನ ನೆನಪಾಗುತ್ತದೆ:

ಘನಮಹಾಲಿಂಗಕ್ಕೆ ಮನವೆ ಪೀಠವಾಗಿ
ತನುವೆ ಶಿವಾಲಯವಾಗಿ, ಧ್ಯಾನವೇ ತೃಪ್ತಿಯಾಗಿ
ಅಂಬುಧಿಯೊಳಗೆ ಮುಳುಗಿದ ಪೂರ್ಣಕುಂಭದಂತೆ
ನಿಮ್ಮ ಅವಿರಳ ದಿವ್ಯ ಮಹಾಬೆಳಗಿನೊಳು ಮುಳುಗಿ
ನಾನು ನೀನೆಂಬುಭಯದ ಕುರುಹ ಮರೆದು
ಏನೇನೂ ಅರಿಯದಿರ್ದೆನಯ್ಯಾ ಅಖಂಡೇಶ್ವರಾ

ತನು, ಮನವನ್ನು ಶಿವಾಲಯವಾಗಿಸಿಕೊಳ್ಳಬೇಕು ಎಂಬುದು ತಾತ್ಪರ್ಯ. ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ ಹೀಗೆ ಗಾಳಿ, ಬೆಳಕು ಮತ್ತು ನೀರು – ಇವೆಲ್ಲ Free gifts from God. ಬಸವಣ್ಣನವರ ಕಲ್ಪನೆಯ ಮನೆಗೂ, ಕ್ರಿಶ್ಚಿಯನ್ ಆಧ್ಯಾತ್ಮಿಕ ಚಿಂತನೆಯಲ್ಲಿ ಮೂಡಿರುವ ಮನೆಗೂ ಬಹಳ ವ್ಯತ್ಯಾಸವಿದ್ದ ಹಾಗೆ ತೋರುವುದಿಲ್ಲ. ಎರಡೂ ಚಿಂತನೆಯಲ್ಲಿ "ಆಂತರಿಕ ಬದುಕಿನ" ಮೇಲೆ ಒತ್ತು ಬಿದ್ದಿರುವುದನ್ನು ನಾವು ಕಾಣಬಹುದು.

ಬಸವಣ್ಣನವರಲ್ಲಿ 'ಎರಡು ಮಹಡಿ ಮನೆ' ಕಾಣಿಸುವುದಿಲ್ಲ. ಅವರ ಚಿಂತನೆಯ ಸರಳತೆಗೆ ಅನುಗುಣವಾಗಿ ಒಂದೇ ಅಂತಸ್ತಿನ ಮನೆಯನ್ನವರು ಕಲ್ಪಿಸಿಕೊಂಡಿದ್ದಾರೆ. ಆದರೆ ಆ ವಾಸಸ್ಥಾನ ಭಗವಂತನ ನಿಜ ನಿವಾಸವಾಗಿ ಪರಿವರ್ತನೆಯಾಗಬೇಕು ಎಂಬ ಶ್ರದ್ಧೆಯನ್ನು ಬಸವಣ್ಣನವರಂತೆ ಪಾಶ್ಚಾತ್ಯ ಸಂತರೂ ಪ್ರಕಟಿಸಿದ್ದಾರೆ. ಕಡೆಯದಾಗಿ ಅಮರಗುಂಡದ ಮಲ್ಲಿಕಾರ್ಜುನ ತಂದೆಯ ವಚನವನ್ನು ಉಲ್ಲೇಖಿಸಬಯಸುತ್ತೇನೆ.

ಕಾಯವೆಂಬ ಪಟ್ಟಣಕ್ಕೆ ಸತ್ಯವೆಂಬ ಕೋಟೆಯನಿಕ್ಕಿ
ಧರ್ಮಾರ್ಥಕಾಮಮೋಕ್ಷಂಗಳೆಂಬ ಉಕ್ಕಡದವರೆಚ್ಚತ್ತಿರಿ
ಭಯ ಘನ, ಭಯ ಘನ
ಅಜ್ಞಾನವೆಂಬ ತೀವ್ರ ಕತ್ತಲೆ ಕರಘನ, ಕರಘನ
ಒಂಬತ್ತು ಬಾಗಿಲವ ಜತನವ ಮಾಡಿ, ಪ್ರಬಲವ ಮಾಡಿ
ಐವರು ಕಳ್ಳರು ಕನ್ನವ ಕೊರೆಯುತ್ತೈದಾರೆ
ಸುಯಿಧಾನವಾಗಿರಿ, ಸುಯಿಧಾನವಾಗಿರಿ.
ಜೀವಧನವ ಜತನವ ಮಾಡಿ, ಜತನವ ಮಾಡಿ
ಬಳಿಕಿಲ್ಲ, ಬಳಿಕಿಲ್ಲ, ಬಳಿಕಿಲ್ಲ
ಆ ಪಟ್ಟಣದ ಮೂಲಸ್ಥಾನದ ಶಿಖರದ ಮೇಲಣ
ಬಾಗಿಲ ತೆರೆದು ನಡೆಯುವುದೇ ಸುಪಥ ಸ್ವಯಂಭುನಾಥನಲ್ಲಿಗೆ!
ಇದನರಿತು ಮಹಾಮಹಿಮ ಅಮರಗುಂಡದ ಮಲ್ಲಿಕಾರ್ಜುನ
ದೇವರಲ್ಲಿ ಎಚ್ಚರಗುಂದದಿರಿ, ಎಚ್ಚರಗುಂದದಿರಿ

ಕಾಯವೆಂಬ ಪಟ್ಟಣಕ್ಕೆ ಸತ್ಯವೆಂಬ ಕೋಟೆಯನಿಕ್ಕಿ ಎಚ್ಚರದಿಂದಿರಬೇಕು, ಎಂದೂ ಎಚ್ಚರಗುಂದಬಾರದು. ಶರಣರು ನಿಂತ ನಿಜ ನಿವಾಸ ಬೆಳಕಿನಾಗರ; ಜ್ಯೋತಿರ್ವಲಯ. ಅದನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಜೀವನದ ಗುರಿ ಹಾಗೂ ಗಂತವ್ಯ; ಅದೇ ಕದಳಿ. ನೀಲಾಂಬಿಕೆಯವರು ಈ ರೀತಿ ಅರ್ಥೈಸುತ್ತಾರೆ:

ಹೃದಯದ ಮಧ್ಯದಲ್ಲೊಂದು ಜ್ಯೋತಿಯ ಮನೆ ಹುಟ್ಟಿತ್ತು
ಆ ಜ್ಯೋತಿಯ ಮಧ್ಯದಲ್ಲಿ ಸ್ಫಟಿಕದ ತನು ಬೆಳಗಿತ್ತು
ಆ ಬೆಳಗಿನ ತನು ಮಧ್ಯದಲ್ಲಿ ಮರು ಜೀವಣಿಯ ಕುಡಿ
ಹೆಸರಿಲ್ಲದ ರೂಪಾಯಿತ್ತು ಬಸವಂಗೆ ಸಂಗಯ್ಯಾ

ಇದು ಅನುಭಾವದ ನಿಲುವು; ಜ್ಯೋತಿಯ ಮನೆಯೇ ನಿಜವಾದ ಮನೆ. ಅದರ ಸಾಕ್ಷಾತ್ಕಾರವೇ ಬದುಕಿನ ಗುರಿ, ಧ್ಯೇಯ ಎಲ್ಲವೂ. ನಮ್ಮ ಪ್ರಯತ್ನಕ್ಕೆ ಗುರುಕರುಣೆ ಒದಗಿ ಬರಲಿ. ಆದ್ದರಿಂದ ಮನೆಯೊಳಗೆ ಮನೆಯೊಡೆಯ ಇದ್ದಾನೆ ಎನ್ನುವಂತೆ ನಾವು ಬದಕಲು ಪ್ರಯತ್ನಿಸೋಣ.

□

# ಛಂದೋವಿಹಾರಿ ಸಂತಕವಿ
# ಶ್ರೀ ಕುಮಾರ ನಿಜಗುಣ ಸ್ವಾಮಿಗಳು (1933–2021)

ನಗರ್ಲೆ ಶಿವಕುಮಾರ

ಎಲ್ಲಿಂದ ಬಂದೆವೆನೆ ಯಾರಿಗೂ ಗೊತ್ತಿಲ್ಲ
ಎಲ್ಲಿಗೀ ಪಯಣವೆಂಬರಿವು ಇಲ್ಲ
ಎಲ್ಲಿಗೇತಕೆ ಹೋಗಿಬಹೆವೆಂದು ತಿಳಿಯದೆಲೆ
ನಿಲ್ಲದೆಲೆ ಸಾಗಿಹೆವು – ಬೋಳುಬಸವ

**ಶ್ರೀ** ಕುಮಾರ ನಿಜಗುಣ ಸ್ವಾಮಿಗಳವರು ಹೇಳಿರುವ ಈ ಮಾತು ಎಲ್ಲ ಕಾಲಕ್ಕೂ ಅನ್ವಯಿಸುತ್ತದೆ. ಪ್ರಕೃತಿಯಲ್ಲಿ ಕಾಣುವ ಮಳೆಗಾಲ, ಬೇಸಿಗೆಕಾಲ, ಚಳಿಗಾಲದಂತೆ ಮನುಷ್ಯರಲ್ಲೂ ಒಳ್ಳೆಯವರು, ಕೆಟ್ಟವರು, ಮಧ್ಯಮದವರು ಎಂಬುದನ್ನು ಜಗತ್ತು ಕಾಣುತ್ತಾ ಬಂದಿದೆ. ಎಲ್ಲರೊಡನೆ ಇದ್ದು ಸಾಧನೆ ಮಾಡಿ ಹೋದ ಎಷ್ಟೋ ಜನರಲ್ಲಿ ಕೆಲವರನ್ನು ಮಾತ್ರ ಗುರುತಿಸಿ ಸಮಾಜ ನೆನೆಯುತ್ತದೆ. ಅದರಲ್ಲಿ ಕೆಲವರು ಎಲೆಮರೆಯ ಕಾಯಿಯಂತೆ ಇದ್ದು ಮರೆಯಾಗಿ ಹೋಗುತ್ತಾರೆ. ಅಂತಹವರಲ್ಲಿ ಕೊಳ್ಳೇಗಾಲ ತಾಲ್ಲೂಕು ಚಿಲಕವಾಡಿ ಶ್ರೀ ಶಂಭುಲಿಂಗೇಶ್ವರ ಕ್ಷೇತ್ರದ ಕರಡಿ ಮಠಾಧ್ಯಕ್ಷರಾದ ಶ್ರೀ ಕುಮಾರ ನಿಜಗುಣ ಸ್ವಾಮಿಗಳು ಒಬ್ಬರು.

ನಿಜಗುಣ ಶಿವಯೋಗಿಗಳ ಪ್ರತಿರೂಪರೆಂದೇ ಹೆಸರುವಾಸಿಯಾದ ಕುಮಾರ ನಿಜಗುಣ ಶ್ರೀಗಳು 20 ಜುಲೈ 2021 ರಂದು ಲಿಂಗೈಕ್ಯರಾದರು. ಅವರ ನಿಧನದಿಂದ ಧಾರ್ಮಿಕ, ಸಾಹಿತ್ಯಕ, ಸಾಂಸ್ಕೃತಿಕ ವಲಯಕ್ಕೆ ಬಹುದೊಡ್ಡ ನಷ್ಟವಾಗಿದೆ. ಎಂಬತ್ತೆಂಟು ವರುಷಗಳ ಬದುಕನ್ನು ನಡೆಸಿದ್ದ ಶ್ರೀಗಳು ಅರ್ಧ ಆಯುಷ್ಯ ಕೌಟುಂಬಿಕ, ಇನ್ನರ್ಧ ಸನ್ಯಾಸದ ಕಡೆ ತೆರೆದುಕೊಂಡಿತು. ಕನ್ನಡ, ಸಂಸ್ಕೃತ, ಇಂಗ್ಲಿಷ್, ತಮಿಳು ಭಾಷೆಗಳನ್ನು ಕರಗತ ಮಾಡಿಕೊಂಡಿದ್ದ ಸ್ವಾಮಿಗಳವರು ಉತ್ತಮ ಜ್ಞಾನಿಗಳೂ, ವಾಗ್ಮಿಗಳೂ ಆಗಿದ್ದರು. ಅಂತಹವರನ್ನು ಕಿರುಲೇಖನದಲ್ಲಿ ಪರಿಚಯಿಸುವುದು ಸಾಹಸವಾದರೂ ಸಾಂದರ್ಭಿಕ ಮಾಹಿತಿ ಇಂತಿದೆ.

---

ಅನುಭಾವಿ ಕವಿಗಳೆಂದೇ ಪ್ರಕೀರ್ತಿತರಾಗಿದ್ದ ಶ್ರೀ ಕುಮಾರ ನಿಜಗುಣ ಸ್ವಾಮಿಗಳು ದಿನಾಂಕ 20.7.2021 ರಂದು ಲಿಂಗೈಕ್ಯರಾದರು. ಅವರಿಗೆ ನುಡಿನಮನ – ಈ ಲೇಖನ

**ಬಾಲ್ಯ ಮತ್ತು ವಿದ್ಯಾಭ್ಯಾಸ** : ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಮುಳ್ಳೂರು ಗ್ರಾಮದ ಶರಣ ದಂಪತಿಗಳಾದ ಶ್ರೀ ಪರುವಪ್ಪ ಮತ್ತು ಶ್ರೀಮತಿ ಪುಟ್ಟಮಲ್ಲಮ್ಮ ದಂಪತಿಗಳ ಹತ್ತನೆಯ ಹಾಗೂ ಕೊನೆಯ ಪುತ್ರರಾಗಿ ಜನಿಸಿದ ಶ್ರೀಗಳವರ ಪೂರ್ವಾಶ್ರಮದ ಹೆಸರು ಪಿ. ಬಸವಣ್ಣ. ಇವರ ತಂದೆ ತಾಯಿಯವರಿಂದ ಬಂದ ಸಂಸ್ಕಾರದಿಂದಾಗಿ ಒಳ್ಳೆಯ ವಿದ್ಯಾವಂತ, ಬುದ್ಧಿವಂತರೆನಿಸಿಕೊಂಡು ಬಿ.ಎಸ್ಸಿ., ಎಲ್‌ಎಲ್‌ಬಿ ಪದವೀಧರರಾದರು. ಇವರ ವಿದ್ಯಾಭ್ಯಾಸವೆಲ್ಲ ಮದ್ರಾಸ್ (ಚೆನ್ನೈ) ವಿಶ್ವವಿದ್ಯಾಲಯದಲ್ಲೇ ನಡೆಯಿತು. ಕಾರಣ ರಾಜ್ಯ ವಿಂಗಡಣೆಗೆ ಮೊದಲು ಈ ಭಾಗವೆಲ್ಲ ತಮಿಳುನಾಡಿನ ಆಡಳಿತಕ್ಕೆ ಒಳಪಟ್ಟಿತ್ತು. ಶ್ರೀಯುತರ ವಿದ್ಯಾಭ್ಯಾಸದ ದಿನಗಳಲ್ಲಿ ಪೆರಿಯಾರ್ ರಾಮಸ್ವಾಮಿಯವರ ಪ್ರಭಾವಕ್ಕೆ ಒಳಗಾಗಿ, ಚಳವಳಿಯಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದರು.

**ವೃತ್ತಿ ಮತ್ತು ವೈವಾಹಿಕ ಜೀವನ :** ಮದ್ರಾಸ್‌ನಿಂದ ಬಂದ ನಂತರ ಕೊಳ್ಳೇಗಾಲದಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದರು. ಇದರ ಜೊತೆಗೆ ಸಕ್ರಿಯ ರಾಜಕಾರಣದಲ್ಲೂ ತಮ್ಮನ್ನು ತೊಡಗಿಸಿಕೊಂಡು ಕೊಳ್ಳೇಗಾಲ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಾರೆ. ಮನೆಯ ಹಿರಿಯರು ನೋಡಿದ ಶ್ರೀಮತಿ ಶಂಕರಮ್ಮನವರನ್ನು ತಮ್ಮ ಬಾಳಸಂಗಾತಿಯಾಗಿ ಸ್ವೀಕರಿಸಿದ ಇವರಿಗೆ ಮೂವರು ಮಕ್ಕಳು. ಪುತ್ರ ಡಾ. ತ್ರಿಶೂಲಿ, ಪುತ್ರಿ ತ್ರಿವೇಣಿ, ಮತ್ತೊಬ್ಬ ಪುತ್ರ ತ್ರಿವೇದಿ. ಇವರ ನೆಮ್ಮದಿ ಕುಟುಂಬದಲ್ಲಿ ತಾನೊಂದು ಬಗೆದರೆ, ದೈವವೊಂದು ಬಗೆಯಿತು ಎಂಬಂತೆ ಶ್ರೀ ಕುಮಾರ ನಿಜಗುಣರ ಪತ್ನಿಯಾದ ಶ್ರೀಮತಿ ಶಂಕರಮ್ಮನವರು ಅಕಾಲಿಕ ಮರಣಕ್ಕೆ ತುತ್ತಾದರು. ಇದರಿಂದ ಆಘಾತಕ್ಕೀಡಾಗಿ ವೈರಾಗ್ಯ ತಾಳುತ್ತಾರೆ. ಇವರ ಅಣ್ಣ ಮತ್ತು ಅತ್ತಿಗೆಯವರಾದ ಶ್ರೀ ಶಾಂತಮೂರ್ತಿ ಮತ್ತು ಶ್ರೀಮತಿ ಮಹದೇವಮ್ಮನವರ ಮಡಿಲಿಗೆ ತಮ್ಮ ಮಕ್ಕಳನ್ನು ಒಪ್ಪಿಸಿ, ಆದಾಯ ತರುತ್ತಿದ್ದ ವಕೀಲಿ ವೃತ್ತಿ, ಸಾಮಾಜಿಕ ಬೆಳವಣಿಗೆಗೆ ಕಾರಣವಾಗಿದ್ದ ರಾಜಕಾರಣ, ಪತ್ನಿಯ ನಿಧನದ ನಂತರ ತ್ಯಾಗದ ಜೀವನಕ್ಕೆ ಅವರು ಮನಸ್ಸು ಮಾಡಿದ್ದು ಮುಳ್ಳಿನ ಹಾದಿಯೆಂದೆ ಭಾವಿಸಬೇಕು. ಇದು ಸಾಮಾನ್ಯರು ತೆಗೆದುಕೊಳ್ಳುವ ತೀರ್ಮಾನವಲ್ಲ, ಅವರ 'ಬೋಳು ಬಸವನ ಬೊಂತೆ' ಕೃತಿಯಲ್ಲಿ ಹೇಳಿಕೊಂಡಂತೆ ಜೀವನ ಮುಂದೆ ಸಾಗುತ್ತದೆ.

ಹಿಂದೆ ಏನಾಗಿದ್ದೆಯೆಂಬರಿವು ನಿನಗಿಲ್ಲ
ಮುಂದೆ ಏನಾಗುವೆಯೊ ಗೊತ್ತಿಲ್ಲವು
ಹಿಂದುಮುಂದನು ನೀನು ತಿಳಿಯದಲೆ ಸುಮ್ಮನೆಯೆ
ಗೊಂದಲದಿ ನುಗ್ಗುತಿಹೆ – ಬೋಳುಬಸವ

**ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯ :** ಮೂಲತಃ ಕವಿಹೃದಯದವರಾಗಿದ್ದ ಶ್ರೀಯುತರನ್ನು ಪತ್ನಿಯ ಮರಣ ಸಂಪೂರ್ಣವಾಗಿ ಅನುಭಾವದ ಹಾದಿಯನ್ನು ಹಿಡಿಯುವಂತೆ ಮಾಡಿತು. ಅದರ ಜೊತೆಗೆ ಅವರೊಳಗಿನ ಕವಿ, ಸಂಶೋಧಕ ಪೂರ್ಣ ಪ್ರಮಾಣದಲ್ಲಿ ತನ್ನ ವಿಶ್ವರೂಪವನ್ನು ದರ್ಶಿಸಲು ಪ್ರಾರಂಭಿಸಿತು. ನಿಜಗುಣ ಶಿವಯೋಗಿಗಳ ಕಾರ್ಯಕ್ಷೇತ್ರವಾದ ಕೊಳ್ಳೇಗಾಲ ತಾಲ್ಲೂಕಿನ ಚಿಲಕವಾಡಿಯ ಶಂಭುಲಿಂಗನ ಬೆಟ್ಟವನ್ನು ತಮ್ಮ ಕಾಯಕ ಭೂಮಿಯಾಗಿಸಿಕೊಂಡರು. ಶಂಭುಲಿಂಗ ಬೆಟ್ಟದ ಹಿಂಬದಿಯಲ್ಲಿರುವ ಕರಡಿ ಮಠದಲ್ಲಿ 1971ರಲ್ಲಿ ಪಿ. ಬಸವಣ್ಣನವರು ವಿರಕ್ತಾಶ್ರಮ ಸ್ವೀಕರಿಸಿ, ಶ್ರೀ ಕುಮಾರ ನಿಜಗುಣ ಸ್ವಾಮಿಗಳೆಂದು ಅಭಿಧಾನ ಪಡೆದರು. ಭಿಕ್ಷದ ಮಠವಾಗಿದ್ದ ಕರಡಿಮಠದಲ್ಲಿ ಸಾಧನೆಗೈದು ಈ ಕ್ಷೇತ್ರವನ್ನು ಕೇಂದ್ರ ಸ್ಥಳವನ್ನಾಗಿ ಮಾಡಿಕೊಂಡರು.

ಶಂಭುಲಿಂಗಕ್ಷೇತ್ರದ ಗವಿಯಲ್ಲಿ ಶ್ರೀ ನಿಜಗುಣ ಶಿವಯೋಗಿಗಳು ಅನುಷ್ಠಾನ ಗೊಂಡು ಈ ಸ್ಥಳವನ್ನು ಸುಕ್ಷೇತ್ರವನ್ನಾಗಿಸಿ ಯೋಗಸಿದ್ಧಿ, ಧರ್ಮಸಿದ್ಧಿ ಹಾಗೂ ಸಾಹಿತ್ಯದ ಸಿದ್ಧಿಯ ಸಾಧಕರಾಗಿ ಕನ್ನಡ ಸಾಹಿತ್ಯಲೋಕಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ. ಶ್ರೀ ನಿಜಗುಣ ಶಿವಯೋಗಿಗಳ ಸಾಹಿತ್ಯದ ಪ್ರಚಾರಕ್ಕೆ ಹಾಗೂ ಅವರ ತತ್ತ್ವಗಳ ಪ್ರಚಾರಕ್ಕೆ ಇಲ್ಲಿ ನಿಜಗುಣಾನುಭವ ಮಂಟಪವನ್ನು ಶ್ರೀ ಕುಮಾರ ನಿಜಗುಣ ಸ್ವಾಮಿಗಳು ಆರಂಭಿಸಿದರು.

ಲಿಂಗಪೂಜೆ ಮಾಡುವೆ ಎನ್ನಿಷ್ಟ,
ಲಿಂಗಪೂಜೆಯ ಮಾಡುವೆ
ಅಂಗೈಯ ತಾವರೆಯ ಮಧ್ಯದೊಳು ಕಂಗೊಳಿಪ
ಮಲೆಯ ಮಾದೇವನಿಗೆ ಉಘೆಯೆನ್ನಿ ಉಘೆಯೆನ್ನಿ
ಪುಲಿದೇರನಡಿಗಳಿಗೆ ಶರಣೆನ್ನಿ.

ಶ್ರೀ ಕುಮಾರ ನಿಜಗುಣ ಸ್ವಾಮಿಗಳು ಒಂದೇ ಜನ್ಮದಲ್ಲಿ ಎರಡು ಹುಟ್ಟುಗಳನ್ನು ಪಡೆದ ಶ್ರೇಷ್ಠರು. 1980ರಲ್ಲಿ ವೈರಾಗ್ಯ ಉತ್ಕಟತೆಯಿಂದ ಸಿದ್ಧಗಂಗೆಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಂದ ದೀಕ್ಷೆ ಪಡೆದು ನಂತರ ಬಿಜಾಪುರದ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರಿಂದ ಅನುಗ್ರಹ ಪಡೆದು, ಪೂರ್ಣಮಟ್ಟದ ವಿರಕ್ತಯೋಗಿಗಳಾಗಿ ನಿಜಗುಣರ ಸಾಹಿತ್ಯ, ಶರಣ ಸಾಹಿತ್ಯವನ್ನು ಪ್ರಚಾರಕ್ಕೆ ತಂದರು. ತಮ್ಮ ಲೌಕಿಕ ಬದುಕನ್ನು ತ್ಯಜಿಸಿ, ಈಗ ಪ್ರಾತಃಸ್ಮರಣೀಯರಾದ ಶ್ರೀ ನಿಜಗುಣ ಶಿವಯೋಗಿಗಳ ಗುಹೆಯಲ್ಲಿ ಏಕಾಂತವಾಸಿಗಳಾಗಿ ಶಿವಯೋಗವನ್ನು ಸಾಧಿಸಿದ ಕೀರ್ತಿ ಶ್ರೀ ಕುಮಾರ ನಿಜಗುಣ ಸ್ವಾಮಿಗಳಿಗೆ ಸಲ್ಲುತ್ತದೆ.

**ಶ್ರೀ ನಿಜಗುಣರ ಮೂರ್ತಿ ಸ್ಥಾಪನೆ :** ವಿಶಾಲವಾದ ಕಲ್ಲುಮಂಟಪವಾಗಿದ್ದ ಕರಡಿ ಮಠದಲ್ಲಿ ಇದ್ದಾಗ ಅನೇಕ ವಿರೋಧ, ತೊಂದರೆಗಳನ್ನು ಎದುರಿಸಿದ ಶ್ರೀ ಕುಮಾರ ನಿಜಗುಣ ಸ್ವಾಮಿಗಳು ತಮ್ಮ ಉದ್ದೇಶದಿಂದ ಹಿಂದೆ ಸರಿಯದೆ, ಕರಡಿ ಮಠವನ್ನು ಅಭಿವೃದ್ಧಿಪಡಿಸಿ ತಾವು ಮಾಡುವ ಕಾಯಕದಲ್ಲಿ ನಿಷ್ಠೆ ತೋರಿಸಿದರು. ಶ್ರೀ ಕುಮಾರ ನಿಜಗುಣ ಸ್ವಾಮಿಗಳು ಇಪ್ಪತ್ತೊಂದು ಲಕ್ಷ ರೂ.ಗಳ ವೆಚ್ಚದಲ್ಲಿ ನಿಜಗುಣಾನುಭವ ಮಂಟಪ ನಿರ್ಮಿಸಲು ಯೋಜನೆ ತಯಾರಿಸಿಕೊಂಡು ನಾಲ್ಕು ಎಕರೆ ಜಮೀನನ್ನು ಖರೀದಿಸಿದರು. 1983ರಲ್ಲಿ ಮಂಟಪ ನಿರ್ಮಿಸಲು ಪ್ರಾರಂಭಿಸಿ, 1991ರಲ್ಲಿ ಮುಗಿಸಿದರು. ತಮ್ಮ ಕಲ್ಪನೆಗೆ ಅನುಗುಣವಾಗಿ ಮಂಟಪವನ್ನು ನಿರ್ಮಿಸಿ, ಶ್ರೀ ನಿಜಗುಣರ ಭವ್ಯವಾದ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಈ ಮೂಲಕ ಶ್ರೀ ನಿಜಗುಣ ಶಿವಯೋಗಿಗಳ ತತ್ತ್ವಗಳನ್ನು ಪ್ರಚಾರಪಡಿಸಿ, ಶರಣಧರ್ಮವನ್ನು ಬಲಿಷ್ಠಗೊಳಿಸಲು ನಾಂದಿ ಹಾಡಿದ್ದಾರೆ.

ದೇವನೊಲಿದೊಡೆ ಜಗದಿ ಶೂಲಮುಂ ಮಾಲೆಯೈ
ಬೇವು ಸಹ ಬೆಲ್ಲಂತಿದಪ್ಪುದು
ಹಾವು ಬರೆ ಮೈಬೆವರಿ ನೀಂ ನಡುಗಬೇಕಿಲ್ಲ
ಹಾವು ಹೂವಾಗುವುದು – ಬೋಳುಬಸವ.

ಸಹಜ ವಿರಾಗಿಗಳಾದ ಶ್ರೀ ಕುಮಾರ ನಿಜಗುಣ ಸ್ವಾಮಿಗಳವರು ದೇವರಲ್ಲಿ ಅಪಾರ ನಂಬಿಕೆ, ಅಚಲ ಶ್ರದ್ಧೆಯಿಂದ ಮುಂದಿನ ಕಾರ್ಯಗಳಲ್ಲಿ ಮಗ್ನರಾಗುತ್ತಾರೆ.

ಚಿಲಕವಾಡಿ ನಿಜಗುಣ ಕ್ಷೇತ್ರಕ್ಕೆ ಆಗಮಿಸುವ ಭಕ್ತರ, ಸಾಹಿತ್ಯಪ್ರೇಮಿಗಳ, ಅಧ್ಯಯನಾಸಕ್ತರ ವಸತಿಗಾಗಿ ಕರಡಿ ಮಠದ ಕಲ್ಲುಕಟ್ಟಡದ ಮೇಲೆ ವಿಶಾಲ ಕೊಠಡಿಗಳನ್ನು ನಿರ್ಮಿಸಿದ್ದಾರೆ. ನಿಜಗುಣಾನುಭವ ಮಂಟಪದಲ್ಲಿ ನಿಜಗುಣರ ಅಮೃತಶಿಲೆಯ ಆಕರ್ಷಕ ಮೂರ್ತಿ, ಪ್ರವಚನಕ್ಕೆ ಮತ್ತು ಸಂಗೀತಕ್ಕಾಗಿಯೇ ಪ್ರತ್ಯೇಕ ವೇದಿಕೆಗಳನ್ನು ನಿರ್ಮಿಸಿರುವುದಲ್ಲದೆ, ಸಂಗೀತ ಪರಿಕರಗಳನ್ನು ಸಂಗೀತ ವೇದಿಕೆಯಲ್ಲಿ ಜೋಡಿಸಿದ್ದಾರೆ. ಈ ಮಂಟಪವನ್ನು ನಿಜಗುಣರ ಸಾಹಿತ್ಯವನ್ನು ಸಂಗೀತದ ಮೂಲಕ ಪ್ರಚಾರಪಡಿಸಿದಲ್ಲದೆ, ಇದನ್ನು ಅಧ್ಯಯನ ಕೇಂದ್ರವನ್ನಾಗಿ ಮಾರ್ಪಡಿಸಿದ್ದಾರೆ. ಶ್ರೀ ನಿಜಗುಣ ಶಿವಯೋಗಿಗಳ ತತ್ತ್ವಕ್ಕೆ ಮಾರುಹೋದ ಶ್ರೀ ಕುಮಾರ ನಿಜಗುಣ ಸ್ವಾಮಿಗಳು ನಿಜಗುಣ ಶಿವಯೋಗಿಗಳ ಬಗ್ಗೆ ಆಳವಾದ ಅಧ್ಯಯನ ಕೈಗೊಂಡು, ಸಾಧಕರಾಗಿ ತಾವು ಆಯ್ದುಕೊಂಡ ಕ್ಷೇತ್ರದಲ್ಲಿ ಪರಮೋಚ್ಚ ಸ್ಥಿತಿಯನ್ನು ತಲುಪಿದರು.

**ಸಾಹಿತ್ಯದಲ್ಲಿ ಅಮೋಘ ಸೇವೆ :** ಸಂತಕವಿ ಎಂದೇ ಖ್ಯಾತರಾಗಿದ್ದ ಶ್ರೀ ನಿಜಗುಣ ಕುಮಾರ ಸ್ವಾಮಿಗಳು ತಮ್ಮ ಕಂಠಸಿರಿಯಿಂದ ಗಾಯಕ ಕವಿ ಎನಿಸಿಕೊಂಡಿದ್ದರು. ಸೃಜನಶೀಲತೆ ಮತ್ತು ಶಾಸ್ತ್ರಾನುಸಂಧಾನದಲ್ಲಿ ಸಮಾನ ಪ್ರಭುತ್ವ ಪಡೆದಿದ್ದ ಈ ಪ್ರಾಂತ್ಯದ

ಸಾಹಿತ್ಯಲೋಕದ ವಿಸ್ಮಯರಾಗಿದ್ದರು. ನಿಜಗುಣರ ಷಟ್‌ಶಾಸ್ತ್ರಗಳನ್ನು ಪರಿಚಯಿಸುತ್ತಾ, ತಮ್ಮ ಸಿರಿಕಂಠದಿಂದ ಅವರ ಕೈವಲ್ಯ ಪದಗಳನ್ನು ಕೇಳುಗರ ಹೃದಯಕ್ಕೆ ತಾಕಿಸುತ್ತಾ ಬದುಕಿದ್ದವರು ಕುಮಾರ ನಿಜಗುಣರು. ಉತ್ತರ ಕರ್ನಾಟಕದ ಮಠಮಾನ್ಯಗಳಲ್ಲಿಯೂ, ಆಸ್ತಿಕ ಸಮೂಹದಲ್ಲಿಯೂ ಮನೆಮಾತಾಗಿದ್ದರು. ಸ್ವಾಧ್ಯಾಯ, ವಿದ್ವಾಂಸರ ಸೇವೆ ಶ್ರೇಯುತರನ್ನು ಬಹು ಎತ್ತರಕ್ಕೆ ಕೊಂಡೊಯ್ಯಿತು. ಕುವೆಂಪು, ದ.ರಾ. ಬೇಂದ್ರೆ, ಆಸ್ಥಾನ ವಿದ್ವಾನ್ ವೆಂಕಟಸುಬ್ಬಾ ಶಾಸ್ತ್ರಿ, ಡಿ.ವಿ.ಜಿ, ತ.ಸು. ಶಾಮರಾಯರು, ಗೋಕಾಕ್, ಪು.ತಿ.ನ, ಡಾ. ಕೆ. ಕೃಷ್ಣಮೂರ್ತಿ ಮುಂತಾದ ವಿದ್ವಾಂಸರೊಂದಿಗೆ ಗಾಢವಾದ ವಿದ್ವತ್‌ಸಂಬಂಧವನ್ನು ಹೊಂದಿದ್ದರು.

ನನ್ನನೇನಾನುಂ ನೀನೆನೆ ನಿನ್ನ ನಾನಿನ್ನೇನನೆನೆ
ನಿನ್ನಿನನಂ ನೀನಾನನ್ನಂ ನಿನ್ನಾನನಂ ನನೆ ನೂನಂ (ಚಿತ್ರ ಕವಿತ್ವ)

ನೀನು, ನನ್ನನ್ನು ಏನಾದರೂ ಅಂದರೆ ನಾನು ನಿನ್ನನ್ನು ಇನ್ನೇನೂ ಅನ್ನುವುದಿಲ್ಲ, ನೀನು ಗಂಡನನ್ನು ಸೇರುವವರೆಗೆ ನಿನ್ನ ಮುಖ ಮೊಗ್ಗಿನ ಹಾಗೆ ಮುದುಡಿಕೊಂಡಿರುತ್ತದೆ. ಈ ತೆರನ ಬೇರೆ ಬೇರೆಯ ರಚನೆಗಳ 'ಚಮತ್ಕಾರ'ಗಳನ್ನು ಅವರ ಕೃತಿಯಾದ 'ನಿರೀಕ್ಷೆ'ಯಲ್ಲಿ ಕಾಣಬಹುದು. ಶ್ರೀ ಕುಮಾರ ನಿಜಗುಣ ಸ್ವಾಮಿಗಳು ನಾಡಿಗೆ ಉತ್ತಮವಾದ ಕೃತಿಗಳನ್ನೇ ಕೊಟ್ಟಿದ್ದಾರೆ. ಅವುಗಳೆಂದರೆ :

ನಿರೀಕ್ಷೆ, ಶಿವನ ಪಂಚವಿಂಶತಿ ಶತಕ, ಪಾರ್ವತೀ ಪ್ರಣಯ ಕಲಹಂ, ಸಂಗಮೇಶ್ವರ ಶತಕ, ಮೇಘ ಸಂದೇಶ, ಭಿಕ್ಷ, ಬೋಳು ಬಸವನ ಬೊಂತೆ, ಶ್ರೀ ಶಿವಕುಮಾರ ಚರಿತಂ, ಕಥಾ ಸಂಗಮ, ವೃತ್ತ ವಿಲಾಸ ವೈಭವ, ಗಣಾಕ್ಷರ ವೃತ್ತ ಶತಕ, ಛಂದೋವಿಲಾಸ ವೈಭವ, ನಿಜಗುಣ ಸ್ತೋತ್ರಮಾಲೆ, ಶ್ರೀ ಶಿವಕುಮಾರ ಪಂಚವಿಂಶತಿ ಸಂಸ್ತುತಿ ಹಾಗೂ ಸಂಪಾದಿತ ಕೃತಿಗಳಾದ ಕೈವಲ್ಯ ಪದ್ಧತಿ, ನಿಜಗುಣ ಶೃತಿ, ಪಾರಮಾರ್ಥ ಪ್ರಕಾಶಿಕೆ ಸೇರಿದಂತೆ ಮುಂತಾದವು.

**ಛಂದೋವಿಹಾರ ವೈಶಿಷ್ಟ್ಯತೆ :** ಶ್ರೀ ಕುಮಾರ ನಿಜಗುಣ ಸ್ವಾಮಿಗಳವರ ಸಾಹಿತ್ಯದಲ್ಲಿ ಛಂದೋಬದ್ಧ ರಚನೆಗಳು ಕಂಡುಬರುತ್ತವೆ. ಪಲ್ಲವಿ, ಅನುಪಲ್ಲವಿಯಿಂದ ಕೂಡಿದ ನಾಲ್ಕು ಚರಣಗಳ ಪದ್ಯಗಳು, ಷಟ್ಪದಿ, ಕಂದ, ವೃತ್ತಗಳ ರಚನೆಗಳು ಇಲ್ಲಿವೆ. ಪಂಡಿತ ಕವಿ ಷಡಕ್ಷರದೇವರು ರಚಿಸಿರುವ 'ರಾಜಶೇಖರ ವಿಳಾಸಂ'ದಲ್ಲಿ ಬರುವ ಶಿವನ ಇಪ್ಪತ್ತೈದು ಲೀಲೆಗಳ ವರ್ಣನೆಯ ಭಾಗವನ್ನು ಕುಮಾರ ನಿಜಗುಣರು ಷಟ್ಪದಿ ರೂಪಕ್ಕೆ ಅಳವಡಿಸಿದ್ದಾರೆ. ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಬಸವಣ್ಣನವರ 108 ವಚನಗಳನ್ನು ಷಟ್ಪದಿ ಪ್ರಕಾರಕ್ಕೆ ಪರಿವರ್ತಿಸಿದ್ದಾರೆ. ಇವರ

ಗೀತಸಂಕಲನದಲ್ಲಿ ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳು, ಎಡೆಯೂರು ಶ್ರೀ ಸಿದ್ಧಲಿಂಗಯತಿಗಳು, ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಮುಂತಾದವರನ್ನು ಕುರಿತ ರಚನೆಗಳಿವೆ. ದ್ವಿಪದಿ, ಚೌಪದಿ, ಷಟ್ಪದಿ ಸೇರಿದಂತೆ ಎಲ್ಲವೂ ಛಂದೋಬದ್ಧ ರಚನೆಗಳೇ ಆಗಿವೆ. ವೃತ್ತಗಳು ಸಂಸ್ಕೃತದ ಛಂದೋಪ್ರಕಾರ, ಪಂಪನಿಂದ ಪ್ರಾರಂಭಗೊಂಡ ಇವುಗಳ ಬಳಕೆ ಮುಂದೆ ಸುಮಾರು 70 ವೃತ್ತಗಳನ್ನು ಕನ್ನಡ ಕವಿಗಳು ಬಳಸಿದ್ದಾರೆ. ಇವುಗಳ ಆಚೆಗೆ ಹೋಗಿ 100 ವೃತ್ತಗಳನ್ನು ರಚಿಸುವುದರ ಮೂಲಕ ಹೊಸ ದಾಖಲೆಯನ್ನೇ ನಿರ್ಮಿಸಿದ್ದಾರೆ. 'ಬೋಳು ಬಸವನ ಬೊಂತೆ' ಕೃತಿಯಲ್ಲಿ ಒಂದು ಸಾವಿರ ಚೌಪದಿಗಳಿವೆ. 'ಬೋಳು ಬಸವ' ಎನ್ನುವ ಇವರ ಅಂಕಿತ, ಹರದನಹಳ್ಳಿಯ ಗೋಸಲಪೀಠದ ಸಿದ್ಧಲಿಂಗಯತಿಗಳ (ಎಡೆಯೂರು ಸಿದ್ಧಲಿಂಗೇಶ್ವರರು) ಶಿಷ್ಯರಾದ ಶ್ರೀ ಬೋಳು ಬಸವಾರ್ಯರದು. 'ಬಸವನ ಬೊಂತೆ' ಪಂಡಿತರಿಗೂ ಪಾಮರರಿಗೂ ನಿಲುಕತಕ್ಕದ್ದು ಎಂದು ವಿದ್ವಾಂಸರ ಅಭಿಪ್ರಾಯ ವಾಗಿದೆ.

**ಲಿಂಗೈಕ್ಯ :** ಶ್ರೀ ನಿಜಗುಣ ಕ್ಷೇತ್ರಕ್ಕೆ ಏಳೆಂಟು ದಶಕಗಳ ಬಳಿಕ ಕಳೆತಂದ ಕೀರ್ತಿ ಶ್ರೀ ಕುಮಾರ ನಿಜಗುಣ ಸ್ವಾಮಿಗಳವರಿಗೆ ಸಲ್ಲುತ್ತದೆ. ಶಿವಯೋಗಿಗಳ ತೇರನ್ನು ನಿರ್ಮಿಸಿ ರಥೋತ್ಸವ ಮಾಡಬೇಕೆಂಬ ಅವರ ಅದಮ್ಯ ಆಸೆ 2018ರಲ್ಲಿ ಫಲಿಸಿತು. ಅದರಂತೆ ಪ್ರತಿ ವರ್ಷ ರಥೋತ್ಸವ ನಡೆಯುತ್ತಿದೆ. ಚಿಲಕವಾಡಿ ನಿಜಗುಣಾನುಭವ ಮಂಟಪದ ಎದುರುಗಡೆ ಜೀವಿತಾವಧಿಯಲ್ಲೇ ತಮ್ಮ ಸಮಾಧಿ ನಿರ್ಮಿಸಿದ್ದರು. 20 ಜುಲೈ 2021ರ ಮಂಗಳವಾರ ಮುಂಜಾನೆ ಲಿಂಗೈಕ್ಯರಾದ ಶ್ರೀ ಕುಮಾರ ನಿಜಗುಣ ಸ್ವಾಮಿಗಳವರನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಿ, ಧಾರ್ಮಿಕ ವಿಧಿವಿಧಾನಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು. ನಾಡಿನ ವಿವಿಧ ಮಠಾಧೀಶ್ವರರಾದ ಸುತ್ತೂರು, ಸಿದ್ಧಗಂಗಾ, ಕನಕಪುರ, ಮಲ್ಲನಮೂಲೆ, ವಾಟಾಳು, ಸಾಲೂರು ಸೇರಿದಂತೆ ಹಲವು ಪೂಜ್ಯ ಶ್ರೀಗಳು, ರಾಜಕೀಯ ಗಣ್ಯರು, ಸಮಾಜದ ಮುಖಂಡರುಗಳು ಹಾಜರಿದ್ದರು. ಅಪರೂಪದ ಛಂದೋವಿಹಾರ ಸಂತಕವಿಯು ಇನ್ನು ನೆನಪು ಮಾತ್ರ.

ಶ್ರೀ ಕುಮಾರ ನಿಜಗುಣ ಸ್ವಾಮಿಗಳವರ ಎಲ್ಲ ಸಾಹಿತ್ಯವನ್ನು ಮರು ಮುದ್ರಣವನ್ನು ಕನ್ನಡ ಸಾಹಿತ್ಯ ಪರಿಷತ್ತು ಅಥವಾ ಕನ್ನಡ ಸಂಸ್ಕೃತಿ ಇಲಾಖೆ ಮಾಡುವುದರ ಮೂಲಕ ಮುಂದಿನ ಓದುಗರಿಗೆ ಕೃತಿಗಳು ಲಭ್ಯವಾಗುವಂತೆ ಮಾಡಬೇಕಾಗಿದೆ.

□

# ಗಾಂಧಿ ಅರ್ಥಶಾಸ್ತ್ರದ ಪ್ರಸ್ತುತತೆ

**ಪ್ರೊ. ಆರ್.ಎಂ. ಚಿಂತಾಮಣಿ**

**ಮೋ**ಹನದಾಸ ಕರಮಚಂದ ಗಾಂಧಿ ಹೆಸರಿನ ವ್ಯಕ್ತಿ ನಮಗೆ ಇಂದಿಗೂ ಮತ್ತು ಎಂದೆಂದಿಗೂ ಪ್ರಸ್ತುತವಾಗುತ್ತಿದ್ದರೆ, ಅದು ಅವರ ನಡೆಯಿಂದ. ಅವರು ಪ್ರತಿಪಾದಿಸಿದ ತತ್ವಗಳಿಂದಲ್ಲ. ಸತ್ಯ, ಅಹಿಂಸೆ, ಸಮಾನತೆ, ಸರಳ ಜೀವನ, ಸಹಬಾಳ್ವೆ, ವ್ಯಕ್ತಿ ಸ್ವಾತಂತ್ರ್ಯ ಮತ್ತು ನೈರ್ಮಲ್ಯಗಳು ಹಿಂದೆಯೂ ಇದ್ದವು. ಇಂದೂ ಇವೆ, ಮುಂದೂ ಇರುತ್ತವೆ. ಅವುಗಳ ಆಚರಣೆ ಮುಖ್ಯ. ಅವರು ನುಡಿದಂತೆ ನಡೆದರು. ಅವರ ನಡೆಯ ಮಾನವಾಭಿವೃದ್ಧಿ ಪರಿಣಾಮಗಳು ನಮ್ಮ ಮುಂದೆ ಪ್ರಖರವಾಗಿ ಕಾಣುತ್ತಿವೆ. ಜಗತ್ತಿನಾದ್ಯಂತ ಅವರನ್ನೇ ಮಾದರಿಯಾಗಿಟ್ಟುಕೊಂಡು ಹೋರಾಡಿ ಮಾನವ ಕಲ್ಯಾಣ ಮಾಡಿರುವ ಉದಾಹರಣೆಗಳು ಅನೇಕ. ಅವರ ಸತ್ಯಾಗ್ರಹದ ಅಸ್ತ್ರ ಪರಿಣಾಮಕಾರಿ.

ಅವರೆಂದೂ ತಾನೊಬ್ಬ ಅರ್ಥಶಾಸ್ತ್ರ ಚಿಂತಕ ಎಂದು ಹೇಳಿಕೊಳ್ಳಲಿಲ್ಲ. ಆದರೆ ಅವರ ನಡವಳಿಕೆ ಆರ್ಥಿಕ ಚಟುವಟಿಕೆಗಳ ಮೇಲೆ ಗಾಢವಾದ ಪರಿಣಾಮ ಬೀರುತ್ತಿತ್ತು. ಅರ್ಥವ್ಯವಸ್ಥೆಯಲ್ಲಿಯ ಲೋಪದೋಷಗಳನ್ನು ಸರಿಪಡಿಸಲು ಅವರ ಚಿಂತನೆಗಳು ಪರಿಹಾರ ಒದಗಿಸುತ್ತಿದ್ದವು. ಅವರೆಂದೂ ಯಂತ್ರಗಳನ್ನು ವಿರೋಧಿಸಲಿಲ್ಲ. ಆದರೆ, ಮಾನವನೇ ನಿರ್ಮಿಸಿದ (ಕಂಡುಹಿಡಿದ) ಯಂತ್ರಗಳು ಮಾನವಕುಲಕ್ಕೆ ಅಪಾಯಕಾರಿಯಾಗಬಾರದು ಎಂಬುದು ಅವರ ಅಭಿಪ್ರಾಯ. ಯಂತ್ರಗಳು ಮಾನವ ಕಲ್ಯಾಣಕ್ಕೆ ಸಾಧನಗಳಾಗಬೇಕು. ಮಾನವ ಸಂಪನ್ಮೂಲ ಹೆಚ್ಚಾಗಿದ್ದಾಗ ಯಂತ್ರಗಳು ಮಾನವ ಶ್ರಮಕ್ಕೆ ಪರ್ಯಾಯವಾಗಿ ಅವನನ್ನೇ ನಿರುದ್ಯೋಗ ಕೂಪಕ್ಕೆ ತಳ್ಳಬಾರದೆಂಬುದು ಗಾಂಧಿ ಖಚಿತ ಅಭಿಪ್ರಾಯವಾಗಿತ್ತು. ವಿದೇಶಗಳಲ್ಲಿ ಅರ್ಥಶಾಸ್ತ್ರದಲ್ಲಿ ಉನ್ನತ ಪದವಿ ಗಳಿಸಿ ಹೆಸರು ಮಾಡಿದ್ದ ಜೆ.ಸಿ. ಕುಮಾರಪ್ಪನವರು ಗಾಂಧೀಜಿ ಪ್ರಭಾವಕ್ಕೆ ಒಳಗಾಗಿ ಸೂಟು ಬೂಟು ತೊರೆದು ಖಾದಿಧಾರಿಗಳಾದರು. ತಾವೇ ನೂಲು ತೆಗೆದು ನೆಯ್ದು ಮತ್ತು ಹೊಲಿದ ವಿಶಿಷ್ಟ ವಿನ್ಯಾಸದ ಧೋತಿ ಮತ್ತು ಪೈಜಾಮಾದಂತೆ ಕಾಣುವ ಉಡುಪು ಧರಿಸಲಾರಂಭಿಸಿದರು. ಅವರು ಗಾಂಧಿಯವರ ಚಿಂತನೆಗಳ ಆರ್ಥಿ ಆಯಾಮಗಳನ್ನು ದಾಖಲಿಸುತ್ತ 'ಗಾಂಧಿಯನ್ ಅರ್ಥಶಾಸ್ತ್ರ'ದ ಮುಖವಾಣಿಯಾದರು. ಅದನ್ನು ಅರ್ಥೈಸಿದರು.

**ಮಾನವ ಶ್ರಮ ಮತ್ತು ನಿಸರ್ಗ ರಕ್ಷಣೆಗೆ ಗಾಂಧಿ ಆದ್ಯತೆ**

ಆಧುನಿಕ ಅರ್ಥಶಾಸ್ತ್ರದಲ್ಲಿಯ ಉತ್ಪಾದನಾ ವ್ಯವಸ್ಥೆಯ ಮೂಲಗಳಾರ ಭೂಮಿ (ನೈಸರ್ಗಿಕ ಸಂಪತ್ತು–Land), ಶ್ರಮ (ದೈಹಿಕ ಮತ್ತು ಬೌದ್ಧಿಕ ಶ್ರಮ–Labour), ಬಂಡವಾಳ (ಹಣವೂ ಸೇರಿ ಉತ್ಪಾದಿತ ಉತ್ಪಾದನಾ ಸಾಧನಗಳು – Capital) ಮತ್ತು ಸಂಘಟನೆ (ಉದ್ಯಮಶೀಲತೆಯೂ ಸೇರಿ ವ್ಯವಸ್ಥಾಪನೆ–Organisation) ಇವುಗಳಲ್ಲಿ ಮೊದಲಿನ ಎರಡು ಮೂಲಭೂತವಾಗಿದ್ದು ನಂತರದ ಎರಡು ಅವುಗಳಿಂದುಂಟಾದವುಗಳು. ಆದ್ದರಿಂದ ಗಾಂಧಿ ಅಭಿಪ್ರಾಯದಂತೆ ಆರ್ಥಿಕ ಚಟುವಟಿಕೆಗಳು ಪರಿಸರಸ್ನೇಹಿಯಾಗಿದ್ದು ಸಂಪತ್ತಿನ ಉತ್ಪಾದನೆಯೊಡನೆ ಪರಿಸರದ ರಕ್ಷಣೆ ಮಾಡಬೇಕು ಮತ್ತು ಸಾರ್ವತ್ರಿಕವಾಗಿ ಮಾನವಾಭಿವೃದ್ಧಿಯನ್ನು ಸಾಧಿಸಬೇಕು. ಇದರಲ್ಲಿ ಉತ್ಪಾದನೆಯಷ್ಟೇ ಸಾಮಾಜಿಕ ನ್ಯಾಯಕ್ಕಾಗಿ ವಿತರಣೆಗೂ ಮಹತ್ವವಿರುತ್ತದೆ. ಆರ್ಥಿಕ ಅಸಮಾನತೆಗೆ ಕಾರಣವಾಗಬಾರದು.

ಇದನ್ನೇ ಆಧುನಿಕ ಅರ್ಥಶಾಸ್ತ್ರದ ಪಿತಾಮಹ ಆಡಂಸ್ಮಿಥ್ 'ವೆಲ್ಥ್ ಆಫ್ ನೇಷನ್ಸ್' ಪ್ರಕಟಿಸುವುದಕ್ಕೂ ಮೊದಲೇ 1759ರಲ್ಲಿ ಬರೆದ 'ಥಿಯರಿ ಆಫ್ ಮಾರಲ್ ಸೆಂಟಿಮೆಂಟ್ಸ್' ಪುಸ್ತಕದಲ್ಲಿ ಹೇಳಿದ್ದಾನೆ. ನಮ್ಮಲ್ಲಿ 2300 ವರ್ಷಗಳಿಗೂ ಹಿಂದೆ ಭಾರತವನ್ನಾಳಿದ ಚಂದ್ರಗುಪ್ತಮೌರ್ಯನ ಮಾರ್ಗದರ್ಶಿ ಚಾಣಕ್ಯನ ಅರ್ಥಶಾಸ್ತ್ರ'ದಲ್ಲಿಯೂ ರಾಜನ ಮತ್ತು ಆಡಳಿತದ ಜವಾಬ್ದಾರಿಗಳಲ್ಲಿ ಸೂಚ್ಯವಾಗಿ ಇದರ ಪ್ರಸ್ತಾಪಗಳಿವೆ. ಕಳೆದ ಶತಮಾನದಲ್ಲಿಯ ನಮ್ಮವರೇ ಆದ ಪ್ರಖರ ಚಿಂತಕರೂ ಇದೇ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮಾನವೇಂದ್ರ ನಾಥ್ (ಎಂ.ಎನ್.) ರಾಯರವರ 'ನವಮಾನವತಾವಾದ' (Radical Humanism) ದಲ್ಲಿಯೂ ಇದರ ಸುಳಿವುಗಳಿವೆ. ದೀನ ದಯಾಳ್ ಉಪಾಧ್ಯಾಯರು ಹೊಸದಾಗಿ ಪ್ರತಿಪಾದಿಸಿದ ತಮ್ಮ 'ಸಮಗ್ರ ಮಾನವತಾವಾದ' (Intigrated Humanism)ದಲ್ಲಿ ಆರ್ಥಿಕ ನೀತಿಗಳಿಗೆ ನೈತಿಕತೆಯ (ಧರ್ಮದ) ತಳಹದಿ ಇರಬೇಕೆಂದು ವಾದಿಸುತ್ತ ಎಲ್ಲರಿಗೂ ಕೌಶಲಗಳಿಗೆ ತಕ್ಕಂತೆ ಸಮಾನ ಅವಕಾಶಗಳು ಇರಬೇಕೆಂದು ಪ್ರತಿಪಾದಿಸಿದ್ದಾರೆ. ವಿವಿಧ ಕೌಶಲಾಭಿವೃದ್ಧಿಗೆ ಸಮಾನ ಅವಕಾಶವಿರಬೇಕೆಂದು ಅವರು ಹೇಳುತ್ತಿದ್ದರು. ಸಂಶೋಧನೆಗಳು ನೈತಿಕ ನೆಲೆಗಟ್ಟಿನ ಮೇಲೆ ಇರಬೇಕು ಮತ್ತು ಆಸಕ್ತಿ ಮತ್ತು ಸಾಮರ್ಥ್ಯ ಇರುವ ಎಲ್ಲರಿಗೂ ಅವಕಾಶವಿರಬೇಕು. ನಾವೀನ್ಯತೆಗೆ ಆದ್ಯತೆ ಇರಬೇಕು.

**ಗಾಂಧೀಜಿಯ ಗ್ರಾಮ ಸ್ವರಾಜ್ಯ ಪರಿಕಲ್ಪನೆ**

ಬಹುಸಂಖ್ಯೆಯ ಜನರು ವಾಸಿಸುವ ಹಳ್ಳಿಗಳಲ್ಲಿ ಹೆಚ್ಚು ಆರ್ಥಿಕ ಚಟುವಟಿಕೆಗಳಿರಬೇಕೆಂಬುದು ಗಾಂಧಿ ಬಲವಾದ ಆಶಯ. ಅದಕ್ಕಾಗಿ ಅವರು ಗೃಹ ಉದ್ಯಮ,

ಗುಡಿ ಕೈಗಾರಿಕೆ, ಉಪ ಕಸುಬು, ಕೆಲಸ ಮಾಡುತ್ತಲೇ ಕೌಶಲ ಉನ್ನತಿಗೆ ತರಬೇತಿ ಮುಂತಾದ ಗ್ರಾಮ ಕೇಂದ್ರಿತ ಪರಿಕಲ್ಪನೆಗಳನ್ನು ಹರಿಬಿಟ್ಟರು. ಇದರಿಂದ ಹಳ್ಳಿಗಳಲ್ಲಿಯ ನಿರುದ್ಯೋಗಿಗಳು ಮತ್ತು ಆ ಉದ್ಯೋಗಿಗಳು ಹೊಟ್ಟೆಪಾಡಿಗಾಗಿ ಬೇರೆ ಕಡೆಗೆ ಹೋಗುವುದನ್ನು (ವಲಸೆಯನ್ನು) ತಪ್ಪಿಸಲು ಸಾಧ್ಯ ಎನ್ನುವುದು ಅವರ ಗಟ್ಟಿ ನಂಬಿಕೆ. ಅತಿ ಕಡಿಮೆ ಬಂಡವಾಳದೊಂದಿಗೆ ಹೆಚ್ಚು ಜನರಿಗೆ ಅವರಿದ್ದಲ್ಲಿಯೇ ಉದ್ಯೋಗ ಒದಗಿಸಬಹುದಾಗಿತ್ತು. ಇದರಿಂದ ಅವರ ಆದಾಯಗಳು ಹೆಚ್ಚಾಗಿ ಸೇವೆ ಮತ್ತು ಸರಕುಗಳಿಗೆ ಬೇಡಿಕೆಯೂ ಹೆಚ್ಚುತ್ತದೆ. ಹಳ್ಳಿಗಳ ಉದ್ದಿಮೆಗಳು ಲಾಭದಾಯಕವಾಗುತ್ತವೆ. ಅಲ್ಲದೆ ಹೆಚ್ಚುವರಿ ಉತ್ಪಾದನೆಗಳನ್ನು ನಗರಗಳಿಗೆ ರವಾನಿಸಬಹುದು. ಎಲ್ಲದಕ್ಕೂ ನಗರಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಆಗ ಗ್ರಾಮಗಳು ಹಿಂದಿನಂತೆ ಸ್ವಪರಿಪೂರ್ಣ ಮತ್ತು ಸ್ವಾವಲಂಬಿಗಳಾಗುತ್ತವೆ. ಹೊಸತನ ಕಲಿತ ಕೆಲಸಗಾರ ಉದ್ಯಮಿಗಳು ಹೊಸ ವಿನ್ಯಾಸಗಳನ್ನು ಹೊರತಂದು ಸ್ಪರ್ಧಾತ್ಮಕ ಬೆಲೆಗಳಲ್ಲಿ ವಿದೇಶಗಳ ಬೇಡಿಕೆಗಳನ್ನೂ ಪೂರೈಸಲು ಸಾಧ್ಯವಾಗುತ್ತದೆ. ಹೆಚ್ಚು ಹೂಡಿಕೆಗಳೂ ಅಲ್ಲಿಯ ಉಳಿತಾಯಗಳಿಂದಲೇ.

ಖಾದಿ ಗಾಂಧೀಜಿಯ ಹುಚ್ಚು ಹವ್ಯಾಸವಲ್ಲ. ಅದೊಂದು ಆರ್ಥಿಕ ಚಿಂತನೆ. ಬ್ರಿಟಿಷರು ಬರುವ ಮೊದಲು ಇದ್ದಂತೆ ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಬಟ್ಟೆಯನ್ನು ಹಳ್ಳಿಗರು ತಾವೇ ಬೆಳೆದ ಹತ್ತಿಯಿಂದ ತಾವೇ ತಯಾರಿಸಿಕೊಳ್ಳುವ ವಿವಿಧ ಹಂತಗಳಲ್ಲಿ ತಾವೇ ತೊಡಗಿಸಿಕೊಂಡು ನೂಲು ನೇಯ್ಗೆ ಮತ್ತು ಹೊಲಿಗೆಗಳ ಉದ್ಯೋಗಗಳನ್ನು ಪುನರುಜ್ಜೀವನಗೊಳಿಸಿ ವಿದೇಶಿ ಮಿಲ್ ಬಟ್ಟೆಗಳಿಂದ ಮುಕ್ತಿ ಪಡೆಯುವ ಘನ ಉದ್ದೇಶವಿತ್ತು. ತನ್ನ ಬಟ್ಟೆ ತಯಾರಿಕೆಯಲ್ಲಿ ತನ್ನ ಶ್ರಮವೂ ಇದೆ ಎನ್ನುವ ಸ್ವಾಭಿಮಾನವನ್ನು ಜನರಲ್ಲಿ ತುಂಬುವ ಗುರಿ ಇತ್ತು. ಅದಕ್ಕಾಗಿ ತಾವೇ ನೂಲು ತೆಗೆದರು. ನೆಯ್ದರು. ಬಟ್ಟೆ ಹೊಲಿದರು. ಹರಿದ ಹಳೆಯ ಬಟ್ಟೆ ಹೊಲಿದು ಕೊಂಡರು. ಅದು ಮಾದರಿಯಾಯಿತು. ಹಳ್ಳಿಯ ಸಾವಿರಾರು ಜನರು ಉದ್ಯೋಗ ಪಡೆದರು. ಇತರ ಉತ್ಪಾದನೆಗಳಲ್ಲೂ ಹೀಗೇ ಆಗಬೇಕು.

ಜೀವನ ಶಿಕ್ಷಣ ಅಥವಾ ಮೂಲೋದ್ಯೋಗ ಶಿಕ್ಷಣ ಪರಿಕಲ್ಪನೆಯಲ್ಲೂ ಸ್ವಾವಲಂಬಿ ಭಾರತದ ಉದ್ದೇಶಗಳಿದ್ದವು. ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿಯೇ ವೃತ್ತಿ ಕೌಶಲಗಳನ್ನು ಕಲಿಸುವ ಮತ್ತು ನಾವೀನ್ಯತೆಗೆ (Innovation) ಅವಕಾಶ ಕಲ್ಪಿಸುವ ಪ್ರಕ್ರಿಯೆಗಳಲ್ಲೂ ಗ್ರಾಮ ಸ್ವರಾಜ್ಯದ ಹೊಳಹುಗಳಿದ್ದವು. ಊಳಿಗಮಾನ್ಯ ಜೀವನಪದ್ಧತಿ ಯಿಂದ ಜನರನ್ನು ಮುಕ್ತಗೊಳಿಸುವ ಗುರಿ ಇತ್ತು. ಹೊಸತನಕ್ಕೆ ಸ್ವಾಗತವಿತ್ತು.

ಭಾರತೀಯರ, ವಿಶೇಷವಾಗಿ ಹಳ್ಳಿಗರ ಆರೋಗ್ಯ ರಕ್ಷಣೆಗಾಗಿ ಸ್ಥಳೀಯ ಆರೋಗ್ಯ ಜ್ಞಾನ ಆಯುರ್ವೇದ ಮತ್ತು ಗಿಡಮೂಲಿಕೆ ಔಷಧ ವಿಜ್ಞಾನ ಮುಂತಾದವುಗಳಿಗೆ

ಉತ್ತೇಜನ ಕೊಡುವುದಲ್ಲದೇ ಆಧುನಿಕ ವೈದ್ಯ ವಿಜ್ಞಾನವನ್ನೂ ಸ್ವೀಕರಿಸುವ ವಿಶಾಲ ಮನೋಭಾವನೆ ಇತ್ತು. ಒಳ್ಳೆಯದು ಯಾವ ದಿಕ್ಕಿನಿಂದ ಬಂದರೂ ಸ್ವೀಕರಿಸಿ ಅದನ್ನು ತನ್ನದಾಗಿಸಿಕೊಳ್ಳುವ ಮನೋವೈಶಾಲ್ಯ ಭಾರತೀಯ ಸಂಸ್ಕೃತಿಯಲ್ಲಿದೆ.

**ವ್ಯವಹಾರದಲ್ಲಿ 'ಟ್ರಸ್ಟೀಶಿಪ್'**

ಲಾಭಕ್ಕಾಗಿಯೇ ವ್ಯವಹಾರ ಮಾಡುವುದಾದರೂ ಅದಕ್ಕೊಂದು ನೈತಿಕ ಮಿತಿ ಇರಬೇಕೆಂಬುದು ಗಾಂಧಿ ಚಿಂತನೆ. ಅದಕ್ಕಾಗಿಯೇ ಅವರು 'ಟ್ರಸ್ಟೀಶಿಪ್' ಪರಿಕಲ್ಪನೆ ಹುಟ್ಟುಹಾಕಿದರು. ಅದರರ್ಥ ಉದ್ಯಮ, ವ್ಯವಹಾರಗಳೆಲ್ಲ ಅಂತಿಮವಾಗಿ ಸಮಾಜದ ಸೊತ್ತು. ಮಾಲೀಕರು ಕೇವಲ ಅವುಗಳ ನಿರ್ವಾಹಕರು. ಅದಕ್ಕಾಗಿ ಒಂದಿಷ್ಟು (ಅವಶ್ಯವಿರುವಷ್ಟು) ಲಾಭ ಪಡೆಯಬೇಕು. ಮಾಲೀಕರು ಅವುಗಳನ್ನು ಕಾಯ್ದು ಬೆಳೆಸುವ ನಂಬಿಕಸ್ಥ ಕಾವಲುಗಾರರು (Trustees) ಮಾತ್ರ. ಹೆಚ್ಚಿನ ಲಾಭವೆಲ್ಲ ಸಮಾಜದ್ದು. ಅಂದಿನ ಉದ್ಯಮಿಗಳೆಲ್ಲ ಇದನ್ನು ಪೂರ್ಣ ಮನಸ್ಸಿನಿಂದ ಸ್ವಾಗತಿಸಿದರು. ಅದರಂತೆ ನಡೆದರು. ಟಾಟಾರವರಿಂದ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬಿರ್ಲಾ ಮಂದಿರಗಳು, ಪಿಲಾನಿಯ ಇಂಜಿನಿಯರಿಂಗ್ ಮತ್ತು ಸಂಶೋಧನ ಸಂಸ್ಥೆ ಮುಂತಾದವುಗಳು ಬಂದದ್ದು ಇದೇ ಟ್ರಸ್ಟೀಶಿಪ್‌ನಿಂದಲೇ. ಇವು ಕೇವಲ ಕೆಲವು ಉದಾಹರಣೆಗಳು.

ಇಂದಿನ ಕಾರ್ಪೊರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ (ಕಂಪನಿಗಳ ಸಾಮಾಜಿಕ ಜವಾಬ್ದಾರಿ) ಇದರ ಮುಂದಿನ ಭಾಗ. ಇದನ್ನೇ ಕಂಪನಿಗಳ ನೈತಿಕ ಆಡಳಿತ (Corporate Governance) ಎಂದು ಕರೆದು ಚರ್ಚೆಗಳು ಮುಂದುವರಿಯುತ್ತಿದ್ದು ಸಮಾಜಮುಖಿ ಕ್ರಾಂತಿಕಾರಿ ಬೆಳವಣಿಗೆಗಳಿಗೆ ದಾರಿಮಾಡಿಕೊಟ್ಟಿವೆ. 1995ರಲ್ಲಿ ಬ್ರಿಟನ್ನಿನಲ್ಲಿ ಕ್ಯಾಡ್‌ಬರಿ ವರದಿ ಆಧಾರದಲ್ಲಿ ಪಾರ್ಲಿಮೆಂಟ್ ಸಾಮಾಜಿಕ ಹೊಣೆಗಾರಿಕೆ ಮತ್ತು ಕಾರ್ಪೊರೇಟ್ ಗವರ್ನನ್ಸ್ ಕಾಯ್ದೆಗಳನ್ನು ಅಂಗೀಕರಿಸಿತು. 1970ರ ದಶಕದಲ್ಲಿ ಪ್ರಕಟವಾದ 'ಸ್ಮಾಲ್ ಈಸ್ ಬ್ಯೂಟಿಫುಲ್' ಪುಸ್ತಕದಲ್ಲಿ ಅರ್ಥಶಾಸ್ತ್ರಜ್ಞ ಶೂಮೇಕರ್ ಅವರು ಗಾಂಧಿ ಅರ್ಥಶಾಸ್ತ್ರವನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದಾರೆ. ಅನಂತರ ಪ್ರಸಿದ್ಧ ಅರ್ಥಶಾಸ್ತ್ರಜ್ಞರಿಂದ ಹೊರ ಬಂದ 'ಲಿಮಿಟ್ಸ್ ಟು ಗ್ರೋಥ್' ವರದಿಯಲ್ಲಿ ಗಾಂಧಿ ವಿಚಾರಗಳನ್ನು ವಿಪುಲವಾಗಿ ದಾಖಲಿಸಿದ್ದಾರೆ.

ಇತ್ತೀಚೆಗೆ ಈ ಶತಮಾನದ ಆರಂಭದಲ್ಲಿ ವಿಶ್ವಸಂಸ್ಥೆ ಪ್ರಕಟಿಸಿರುವ 'ಸುಸ್ಥಿರ ಬೆಳವಣಿಗೆ (ಅಭಿವೃದ್ಧಿ) ಗುರಿಗಳಲ್ಲಿ' (Sustainable Development Goals) ಪ್ರಮುಖವಾಗಿ ಪ್ರಸ್ತಾಪಿಸಲ್ಪಟ್ಟಿರುವ ಪರಿಸರ ಸಂರಕ್ಷಣೆ ಮತ್ತು ಪರಿಸರಸ್ನೇಹಿ ಅಭಿವೃದ್ಧಿ ಹಾಗೂ ಮಾನವಾಭಿವೃದ್ಧಿಯ ವಿವಿಧ ಭಾಗಗಳು ಗಾಂಧಿಯನ್ ಅರ್ಥಶಾಸ್ತ್ರದ

ಪ್ರಸ್ತುತತೆಯನ್ನು ದಾಖಲಿಸುತ್ತವೆ. ಜಾಗತಿಕ ಮಟ್ಟದಲ್ಲಿ ಉದ್ಯಮಿಗಳಿಂದ ಈ ದಿಕ್ಕಿನಲ್ಲಿ ಹಲವು ಅಭಿಯಾನಗಳು ಆರಂಭವಾಗಿವೆ.

**ಸುಸ್ಥಿರ ಅಭಿವೃದ್ಧಿಯ ದಿಕ್ಸೂಚಿಗಳು**

ಗಾಂಧಿಯ ಸರಳ ಜೀವನ ಮತ್ತು ಸರ್ವೋದಯ ಪರಿಕಲ್ಪನೆಗಳಿಗೆ ಜಾಗತಿಕ ಮಟ್ಟದಲ್ಲಿ ನೀತಿನಿರೂಪಕರು ಮತ್ತು ಪ್ರಭಾವಿವಲಯಗಳಲ್ಲಿ ಹೆಚ್ಚಿನ ಮಹತ್ವ ಕಂಡುಬರುತ್ತಿದೆ. ವಿಶ್ವಸಂಸ್ಥೆಯು ಮುಂದಿನ ಐವತ್ತು ವರ್ಷಗಳ ಆರ್ಥಿಕ ಅಭಿವೃದ್ಧಿಯ ದಿಕ್ಸೂಚಿಗಳನ್ನು ಗುರುತಿಸಿದ್ದು 'ಸುಸ್ಥಿರ ಅಭಿವೃದ್ಧಿ ಗುರಿಗಳನ್ನು' ಪ್ರಕಟಿಸಿದೆ (Sustainable Development Goals). ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

1. ಕೈಗೆಟುಕುವ ಮತ್ತು ಹಸಿರು ಶಕ್ತಿ ಉತ್ಪಾದನೆ ಮತ್ತು ವಿತರಣೆ (ಪರಿಸರಸ್ನೇಹಿ ಮತ್ತು ನವೀಕರಿಸಬಹುದಾದ ಶಕ್ತಿಮೂಲಗಳ ಹುಡುಕುವಿಕೆ ಮತ್ತು ಅಗ್ಗದ ಶಕ್ತಿ ಉತ್ಪಾದನೆ)
2. ಹಸಿವು ಮುಕ್ತ ವಿಶ್ವ
3. ಎಲ್ಲರಿಗೂ ಉತ್ತಮ ಆರೋಗ್ಯ ಸೇವೆ ಮತ್ತು ಸ್ವಸ್ಥ ಜೀವನ
4. ಎಲ್ಲರಿಗೂ ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯ
5. ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನೆ, ನಾವಿನ್ಯತೆಗೆ ಅವಕಾಶ
6. ಲಿಂಗಸಮಾನತೆ
7. ಎಲ್ಲರಿಗೂ ಸಹ್ಯವಾದ ಸಿಸ್ಥಿರ ನಗರೀಕರಣ
8. ಎಲ್ಲರಿಗೂ ಗೌರವಯುತ ಉದ್ಯೋಗ ವಾತಾವರಣ ನಿರ್ಮಿಸುವ ಆರ್ಥಿಕ ಬೆಳವಣಿಗೆ

ದೇಶಗಳ ನಡುವಿನ ಮತ್ತು ಪ್ರಾದೇಶಿಕ ಆರ್ಥಿಕ ಅಸಮಾನತೆಗಳನ್ನು ಕಡಿಮೆ ಮಾಡುತ್ತ ಸುಸ್ಥಿರ ಅಭಿವೃದ್ಧಿ ಸಾಧಿಸುವುದು ಇವುಗಳ ಉದ್ದೇಶ. ಮುಂದಿನ ಪೀಳಿಗೆಗೆ ಸುಸ್ಥಿರ ಪರಿಸರ ಮತ್ತು ಎಲ್ಲರಿಗೂ ಸಮಾನ ಅವಕಾಶಗಳುಳ್ಳ ಸಮಾಜಗಳನ್ನು ಒದಗಿಸುವುದು ಇದರ ಮುಖ್ಯ ಉದ್ದೇಶ. ಇವೆಲ್ಲವುಗಳ ಮೇಲೆ ಗಾಂಧೀಜಿ ಚಿಂತನೆಗಳ ಮತ್ತು ಅವರು ಪ್ರತ್ಯಕ್ಷ ಆಚರಣೆಯಲ್ಲಿ ತೋರಿಸಿರುವ ವಿಚಾರಗಳ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಸಂಪತ್ತಿನ ನಿರ್ಮಾಣ ಮತ್ತು ವೃದ್ಧಿಯಷ್ಟೇ ನ್ಯಾಯಸಮ್ಮತ ವಿತರಣೆ ಮತ್ತು ಪರಿಸರ ರಕ್ಷಣೆಯೂ ಅಷ್ಟೇ ಮುಖ್ಯ ಎನ್ನುವುದು ಇಲ್ಲಿ ಮಹತ್ವ ಪಡೆಯುತ್ತದೆ. ಇದು ಗಾಂಧಿ ಮಾರ್ಗವೆನ್ನಬಹುದು.

**ಪರಿಣಾಮ ಬೀರುವ ಹೂಡಿಕೆಗಳು ಮತ್ತು ಡಿಗ್ರೊಥ**

ಹಾರ್ವರ್ಡ್ ವಿಶ್ವವಿದ್ಯಾನಿಲಯದ ಬಿಜಿನೆಸ್ ಸ್ಕೂಲ್‌ನಲ್ಲಿ ಪ್ರಾಧ್ಯಾಪಕರಾಗಿರುವ ವಿಕ್ರಮ ಗಾಂಧಿಯವರ ಅಧ್ಯಯನದಂತೆ ಹೂಡಿಕೆದಾರರ ಚಿಂತನೆಗಳಲ್ಲಿ ಮತ್ತು ನಿರ್ಧಾರಗಳಲ್ಲಿ ದೊಡ್ಡ ಬದಲಾವಣೆಗಳಾಗಿವೆ. ಲಾಭ ಗಳಿಸುವುದೊಂದೇ ಗುರಿ ಎಂದುಕೊಂಡಿದ್ದ ಹೂಡಿಕೆದಾರರು ಈಗ ಅದಕ್ಕೆ ಎರಡನೇ ಮೂರನೇ ಸ್ಥಾನ ಕೊಡುತ್ತಿರುವುದನ್ನು ಅವರು ಗಮನಿಸಿದ್ದಾರೆ. ಜನರ ಆರೋಗ್ಯಕ್ಕೆ ಹಾನಿ ಮಾಡುವ ತಂಬಾಕು ಮುಂತಾದ ಉದ್ದಿಮೆಗಳಲ್ಲಿ ಹೂಡಿಕೆ ಮಾಡುವುದನ್ನು ನಿಲ್ಲಿಸಿದ್ದಾರೆ. ಅರಣ್ಯ ನಾಶಕ್ಕೆ ಕಾರಣವಾಗುವ ಮತ್ತು ವಾತಾವರಣಕ್ಕೆ ವಿಷಾನಿಲಗಳನ್ನು ಉಗುಳುವ ಕೈಗಾರಿಕೆಗಳಲ್ಲಿ ಹೂಡಿಕೆಗಳು ಕಡಿಮೆಯಾಗುತ್ತಿವೆ. ಅದೇ ರೀತಿ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗೆ ವಲಯಗಳಲ್ಲಿಯೂ ಹೂಡಿಕೆ ಕಡಿಮೆ ಮಾಡುವ ಪ್ರವೃತ್ತಿ ಇತ್ತೀಚೆಗೆ ಕಂಡುಬರುತ್ತಿದೆ ಎಂಬುದು ವಿಕ್ರಮ ಗಾಂಧಿ ಅಧ್ಯಯನಗಳಿಂದ ತಿಳಿಯುತ್ತದೆ. ಅದಕ್ಕಾಗಿಯೇ ಸಾಮಾಜಿಕ ಉದ್ಯಮಶೀಲತೆಯಲ್ಲಿ (Social Entrprenurship) ಹೆಚ್ಚು ಜನ ಹೂಡಿಕೆ ಮಾಡುತ್ತಿದ್ದಾರೆ ಎಂದು ಗಾಂಧಿ ಅಭಿಪ್ರಾಯಪಡುತ್ತಾರೆ. ಲಾಭಕ್ಕಿಂತ ಸಾಮಾಜಿಕ ಒಳಿತಿಗೆ ಹೆಚ್ಚು ಒತ್ತುಕೊಡಲಾಗುತ್ತಿದೆ. ಇದನ್ನೇ ಪರಿಣಾಮ ಬೀರುವ ಹೂಡಿಕೆಗಳು (Impact Investments) ಎಂದು ಸಂಶೋಧಕರು ಕರೆಯುವುದು. ಗಾಂಧೀಜಿಯ ಟ್ರಸ್ಟೀಶಿಪ್ ಪರಿಕಲ್ಪನೆ ಇಲ್ಲಿ ಮಹತ್ವ ಪಡೆಯುತ್ತದೆ. ರಾಕಫೆಲರ ಫೌಂಡೇಶನ್ ಮತ್ತು ಕೆಲಗ್ ಫೌಂಡೇಶನ್‌ನಂತಹ ಟ್ರಸ್ಟ್‌ಗಳು ಮತ್ತು ಪೆನ್ಶನ್ ಫಂಡುಗಳು ಪರಿಸರ ರಕ್ಷಣೆ ಮತ್ತು ಸಾಮಾಜಿಕ ಒಳಿತಿಗೆ ಬದ್ಧವಾಗಿರುವ ಕಂಪನಿಗಳಲ್ಲಿ ಹೂಡಿಕೆಗಳನ್ನು ಹೆಚ್ಚಿಸುತ್ತಿರುವುದನ್ನು ಸಂಶೋಧಕರು ಉದಾಹರಿಸುತ್ತಾರೆ. ಹೊಸ ಪೀಳಿಗೆ ಹೂಡಿಕೆದಾರರಲ್ಲಿ ಇದು ಹೆಚ್ಚು.

ಇತ್ತೀಚೆಗೆ ಪಾಶ್ಚಿಮಾತ್ಯ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಆರ್ಥಿಕವಾಗಿ ಮುಂದುವರಿದ ಕುಟುಂಬಗಳು ಸರಳ ಜೀವನದತ್ತ ವಾಲುತ್ತಿವೆ. ಇವರು ಈಗ ತಮ್ಮ ಐಷಾರಾಮಿ ಕಾರುಗಳನ್ನು ಬಿಟ್ಟು ಸಾರ್ವಜನಿಕ ಸಾರಿಗೆ ಬಳಸುತ್ತಿದ್ದಾರೆ. ಇವರೊಂದು ಸಂಘಟನೆಯಂತೆ ಎಲ್ಲ ಕುಟುಂಬಗಳಿಗೂ ಆಹಾರಪದಾರ್ಥಗಳನ್ನು ರೈತರಿಂದಲೇ ಮಾರುಕಟ್ಟೆ ಬೆಲೆಯಲ್ಲಿ ಖರೀದಿಸಿ ಹಂಚಿಕೊಳ್ಳುತ್ತಾರೆ. ಇದೇ ರೀತಿ ಉಳಿದ ಎಲ್ಲ ಅವಶ್ಯಕತೆಗಳನ್ನೂ ಒಟ್ಟಿಗೆ ಪಡೆದು ಬಳಸುತ್ತಾರೆ. ಮಿತವಾಗಿ ಬಳಸುತ್ತಾರೆ. ಇದರಿಂದ ಉಳಿತಾಯವಾದ ಹಣವನ್ನು ಸಾಮಾಜಿಕ ಒಳಿತಿಗಾಗಿ ಮತ್ತು ನೈಸರ್ಗಿಕ ಸಮತೋಲನ ಕಾಯ್ದುಕೊಳ್ಳುವುದಕ್ಕಾಗಿ ಸರ್ಕಾರದೊಡನೆ ಸಹಕರಿಸಿ ವೆಚ್ಚ ಮಾಡುತ್ತಾರೆ. ಇಂಥವರ ಸಂಖ್ಯೆ ದಿನೇದಿನೇ ಬೆಳೆಯುತ್ತಿದೆ. ಇದೊಂದು ಪಂಥವಾಗಿ ಬೆಳೆಯುತ್ತಿದೆ.

ಹೀಗೇಕೆ ಎಂದು ಕೇಳಿದರೆ ಈ ನಡೆಯ ಪ್ರವರ್ತಕರಲ್ಲೊಬ್ಬರಾದ ಸ್ಪೇನ್ ದೇಶದ ಬಾರ್ಸಿಲೋನಾದ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಜಿಯಾರ್ಜಸ್ ಕೆಲ್ಲಿಸ್ ಹೇಳುತ್ತಾರೆ 'ಇದು ಡಿಗ್ರೊಥ (ಬೆಳವಣಿಗೆ ತಡೆ) ಸಿದ್ಧಾಂತ. ನಾವು ಈವರೆಗೆ ಅವಶ್ಯಕತೆಗಿಂತ ಹೆಚ್ಚು ನೈಸರ್ಗಿಕ ಸಂಪತ್ತನ್ನು ಬಳಸಿದ್ದೇವೆ. ಬೆಳೆದಿದ್ದೇವೆ. ಇತರರ ಪಾಲನ್ನೂ ಕಸಿದುಕೊಂಡಿದ್ದೇವೆ. ಅವರು ನಮಗಿಂತ ತೀರ ಹಿಂದೆ ಉಳಿದಿದ್ದಾರೆ. ಅವರು ನಮ್ಮೊಟ್ಟಿಗೆ ಬರುವವರೆಗೆ ನಾವು ಆರ್ಥಿಕವಾಗಿ ಬೆಳೆಯಬಾರದು. ನಿಂತಲ್ಲಿಯೇ ನಿಂತು ಕಾಯಬೇಕು ಮತ್ತು ಮುಂದಿನ ಪೀಳಿಗೆಗಾಗಿ ಈಗಿರುವ ನೈಸರ್ಗಿಕ ಸಂಪತ್ತನ್ನು ರಕ್ಷಿಸಬೇಕು. ಸಾಧ್ಯವಾದಷ್ಟು ಹಸಿರು ಬೆಳೆಸಬೇಕು. ವಾತಾವರಣದಲ್ಲಿ ವಿಷಾನಿಲಗಳು ಹೆಚ್ಚಲಿಕ್ಕೆ ನಾವು ಕಾರಣರಾಗಬಾರದು. ನಮಗೆ ಜಿಡಿಪಿ (ರಾಷ್ಟ್ರೀಯ ಒಟ್ಟಾದಾಯ) ಬೆಳವಣಿಗೆಗಿಂತ ಸಕಲರ ಅಭಿವೃದ್ಧಿ ಮತ್ತು ನಿಸರ್ಗ ಸಂರಕ್ಷಣೆ ಮುಖ್ಯ. ಮುಂದೆ ಹೋದವರು (ಮುಂದುವರಿದವರು) ಹಿಂದುಳಿದಿರುವವರು ತಮ್ಮ ಮಟ್ಟಕ್ಕೆ ಬರುವವರೆಗೆ ನಿಂತಲ್ಲಿಯೇ ನಿಂತು ಕಾಯಬೇಕು. ಇದೇ ಡಿಗ್ರೊಥ ಸಿದ್ಧಾಂತ.

ಇನ್ನೊಬ್ಬ ಡಿಗ್ರೊಥ ಪ್ರತಿಪಾದಕ ಮತ್ತು ಪ್ರಸಾರಕ, ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಸಂಘಟನಾ ಸಿದ್ಧಾಂತ (Organisation Theory) ಪ್ರಾಧ್ಯಾಪಕ ಥಾಮಸ್ ರೌಲೆಟ ರವರು ಈ ಸಿದ್ಧಾಂತ ಶ್ರೀಮಂತ ದೇಶಗಳಲ್ಲಿ ಅತಿ ವೇಗವಾಗಿ ಪ್ರಭಾವ ಬೀರುತ್ತಿದ್ದು ಕಂಪನಿಗಳು ಈ ಹೊಸ ವಿಚಾರಗಳ ತಳಹದಿಯನ್ನು ಅರಿತು ಬದಲಾಗಬೇಕು ಎನ್ನುತ್ತಾರೆ. ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್ ಮತ್ತು ಪೊಲಿಟಿಕ್ಸ್‌ನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿರುವ ಮೈತ್ರೇಶ ಘಟಕರವರೂ ಜಾಗತಿಕ ಮಟ್ಟದಲ್ಲಿ ಡಿಗ್ರೊಥ ಅಭಿಯಾನದ ಪ್ರವರ್ತಕರಾಗಿದ್ದಾರೆ. ಅವರ ಪ್ರಕಾರ ಆರ್ಥಿಕ ಬೆಳವಣಿಗೆಗೆ ಸೀಮಿತ ಗುರಿಗಳಿದ್ದು ಅಭಿವೃದ್ಧಿ ನಮಗೆ ಬೇಕಾಗಿರುವುದು. ನಿರಂತರ ಎಲ್ಲರ ಏಳಿಗೆಯೊಡನೆ ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಯೇ ಅಭಿವೃದ್ಧಿ. ಅದಕ್ಕಾಗಿ ಈಗ ಸದ್ಯಕ್ಕೆ ಶ್ರೀಮಂತರ ಡಿಗ್ರೊಥ ಅನಿವಾರ್ಯ ಎನ್ನುತ್ತಾರೆ ಇವರು.

ಇವರೆಲ್ಲರ ಮೇಲೂ ಗಾಂಧೀಜಿ ಜೀವನ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಗಾಢವಾದ ಪ್ರಭಾವ ಬೀರಿರುವುದನ್ನು ನಾವು ಮನಗಾಣಬೇಕು.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

## ಸ್ವಾತಂತ್ರ್ಯವನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವುದು ನಮ್ಮೆಲ್ಲರ ಕರ್ತವ್ಯ

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ಸಾಕಷ್ಟು ಜನರ ಬಲಿದಾನದಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಸದ್ಯಕ್ಕೆ ಭಯೋತ್ಪಾದನೆಯ ಪಿಡುಗು ದೇಶವನ್ನು ಆವರಿಸಿದೆ. ಇದನ್ನು ಹೋಗಲಾಡಿಸಿ ಈ ಸ್ವಾತಂತ್ರ್ಯವನ್ನು ಮುಂದಿನ ಪೀಳಿಗೆಯವರಿಗೆ ಕೊಂಡೊಯ್ಯುವುದು ನಮ್ಮೆಲ್ಲರ ಕರ್ತವ್ಯವೆಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಡಾ. ಎಂ. ಸೋಮಶೇಖರಯ್ಯನವರು ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಅಗಸ್ಟ್ 15 ರಂದು ನಡೆದ 75ನೇ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವ ಸಂದರ್ಭದಲ್ಲಿ ಧ್ವಜಾರೋಹಣ ನೆರವೇರಿಸಿ ಹೀಗೆ ಹೇಳಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ವೆ.ಸಿ. ರೇವಣ್ಣನವರು ಅಧ್ಯಕ್ಷತೆ ವಹಿಸಿ, ಮಹಾತ್ಮ ಗಾಂಧೀಜಿಯವರ ಕನಸು ದೇಶವನ್ನು ರಾಮರಾಜ್ಯವನ್ನಾಗಿಸುವುದಾಗಿತ್ತು. ಅದನ್ನು ನನಸಾಗಿಸಲು ನಾವೆಲ್ಲರೂ ಕೈ ಜೋಡಿಸಬೇಕು. ಸಮಾಜದಲ್ಲಿ ಎಲ್ಲರಿಗೂ ಶಾಂತಿ–ನೆಮ್ಮದಿಯ ಬಾಳ್ವೆ ಸಿಗಬೇಕು. ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅವರ ಆಶೀರ್ವಾದ ಪಡೆಯುತ್ತಿರುವುದು ನಮಗೆಲ್ಲ ಹೆಮ್ಮೆಯ ಸಂಗತಿ ಮತ್ತು ವಿಶೇಷ ದಿನವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಡಾ. ಎಂ. ಸೋಮಶೇಖರಯ್ಯ, ಶ್ರೀ ವೈ.ಸಿ. ರೇವಣ್ಣ, ಶ್ರೀ ಟಿ. ಪುಟ್ಟಣ್ಣ, ಶ್ರೀ ಬಿ. ಲಿಂಗಯ್ಯ, ಶ್ರೀ ಹೆಚ್.ಎನ್. ಅಶ್ವಥನಾರಾಯಣ ಮತ್ತು ಶ್ರೀ ಹೆಚ್.ಎನ್. ಚನ್ನಬಸಪ್ಪನವರನ್ನು ಗೌರವಿಸಿ, ಸತ್ಕರಿಸಲಾಯಿತು. ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ ಹಾಗೂ ಅಮೆರಿಕದ ಶ್ರೀ ಹೇಮಂತ್ ಸುಬ್ಬಣ್ಣ, ಗುರುಕುಲದ ಸಾಧಕರು, ಶ್ರೀಮಠದ ಸೇವಾ ಸಿಬ್ಬಂದಿ ಭಾಗವಹಿಸಿದ್ದರು. ಶ್ರೀ ಜಯರಾಜೇಂದ್ರರವರು ಸ್ವಾಗತಿಸಿದರು. ಡಾ. ಶ್ರೀ ರುದ್ರಮುನಿದೇವರು ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮವನ್ನು ಕೋವಿಡ್ ನಿಯಮವನ್ನು ಪಾಲಿಸಿ, ಸರಳ ರೀತಿಯಲ್ಲಿ ಆಚರಿಸಲಾಯಿತು.

**ವಿಶೇಷಚೇತನರ ಬಗ್ಗೆ ಉದಾಸೀನ ಸಲ್ಲದು**

ವಿಶೇಷಚೇತನರ ಬಗ್ಗೆ ಉದಾಸೀನ ಸಲ್ಲದು ಎಂದು ಪರಮಪೂಜ್ಯ ಜಗದ್ಗುರುಗಳು ಆಗಸ್ಟ್ 27ರಂದು ಚಾಮರಾಜನಗದ ಮರಿಯಾಲ ಜೆಎಸ್ಎಸ್ ಆರ್ಐಎಸ್‌ಡಿಸಿಯಲ್ಲಿ ಮಾರ್ಗದರ್ಶಿ ವಿಕಲಚೇತನರ ಸ್ವಯಂಸೇವಾ ಸಂಸ್ಥೆ, ಮೋಟಿವೇಷನ್ ಇಂಡಿಯಾ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್‌ನ ಸಹಯೋಗದಲ್ಲಿ ತೀವ್ರ ಮತ್ತು ಅತಿ ತೀವ್ರ ಪ್ರಮಾಣದ ಅಂಗವಿಕಲ ಹೆಣ್ಣುಮಕ್ಕಳು ಹಾಗೂ ಮಹಿಳೆಯರಿಗೆ ಗಾಲಿ ಕುರ್ಚಿಗಳ ವಿತರಣಾ ಕಾರ್ಯಕ್ರಮ ಉದ್ಘಾಟಿಸುತ್ತಾ ತಿಳಿಸಿದರು. ವಿಶೇಷಚೇತನರು ಸಮಾಜದಲ್ಲಿ ಮುಖ್ಯವಾಹಿನಿಗೆ ಬರಬೇಕಾದರೆ ಅವರಿಗೆ ಸರ್ಕಾರದ ಎಲ್ಲಾ ಸೌಲಭ್ಯಗಳು ದೊರಕಬೇಕು. ಈ ನಿಟ್ಟಿನಲ್ಲಿ ಸರ್ಕಾರಗಳು ಹಾಗೂ ಜನಪ್ರತಿನಿಧಿಗಳು ವಿಶೇಷ ಗಮನ ಹರಿಸುವ ಅಗತ್ಯವಿದೆ ಎಂದು ತಿಳಿಸಿದರು.

ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಸರ್ಕಾರ ವಿಶೇಷಚೇತನರಿಗಾಗಿಯೇ ಪ್ರತಿಯೊಂದು ಇಲಾಖೆಯಲ್ಲಿ ಹಾಗೂ ಅನುದಾನದಲ್ಲಿಯೂ ಮೀಸಲಾತಿ ನೀಡಲಾಗಿದೆ. ಸ್ವಯಂ ಸೇವಾಸಂಸ್ಥೆಗಳು ಸಹ ಈ ನಿಟ್ಟಿನಲ್ಲಿ ಹೆಚ್ಚು ಕಾರ್ಯ ನಿರ್ವಹಿಸುತ್ತಿವೆ ಎಂದರು.

ಶಾಸಕರುಗಳಾದ ಶ್ರೀ ಸಿ. ಪುಟ್ಟರಂಗಶೆಟ್ಟಿ, ಶ್ರೀ ಎನ್. ಮಹೇಶ್, ಶ್ರೀ ಸಿ.ಎಸ್. ನಿರಂಜನಕುಮಾರ್, ಜಿಲ್ಲಾಧಿಕಾರಿಗಳಾದ ಡಾ. ಎಂ.ಆರ್. ರವಿ, ಜಿಲ್ಲಾ ಪಂಚಾಯತ್ ಸಿಇಓ ಶ್ರೀ ಬೋಯರ್ ಹರ್ಷಲ್ ನಾರಾಯಣ್‌ರಾವ್, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರಾದ ಡಾ. ಪುಷ್ಪಾವತಿ, ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾದ ಡಾ. ಜಿ.ಎಂ. ಸಂಜೀವ್, ಮೋಟಿವೇಷನ್ ಸಂಸ್ಥೆಯ ಶ್ರೀ ಬಿಜು ಮ್ಯಾಥ್ಯೂ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮತಿ ಸುಶೀಲ ಪ್ರಾರ್ಥಿಸಿದರು. ಶ್ರೀಮತಿ ಗೀತಾಮೃತ ಸ್ವಾಗತಿಸಿದರು. ಶ್ರೀ ಕೆ.ವಿ. ರಾಜಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ನಾಗರಾಜು ವಂದಿಸಿದರು.

**ಪೂಜ್ಯ ರಾಜೇಂದ್ರ ಶ್ರೀಗಳು ವಿಶ್ವದ ಶ್ರೇಷ್ಠ ಸಾಮಾಜಿಕ ಮತ್ತು ಆಧ್ಯಾತ್ಮಿಕ ಸಂತರು**

ಪೂಜ್ಯ ರಾಜೇಂದ್ರ ಶ್ರೀಗಳ ಅಂತಃಕರಣ ಸದಾ ಸಮಾಜದ ಉದ್ಧಾರಕ್ಕಾಗಿಯೇ ಮಿಡಿಯುತ್ತಿತ್ತು. ಅವರ ದೂರದೃಷ್ಟಿಯಿಂದಲೇ ಇಂದು ಸುತ್ತೂರು ಮಠ ದೇಶ ವಿದೇಶಗಳಲ್ಲಿ ಸಾಮಾಜಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಸ್ಥೆಗಳನ್ನು ಸ್ಥಾಪಿಸಿ ಸೇವೆ ಸಲ್ಲಿಸುತ್ತಿದೆ. ಪೂಜ್ಯ ರಾಜೇಂದ್ರ ಶ್ರೀಗಳು ವಿಶ್ವದ ಶ್ರೇಷ್ಠ ಸಾಮಾಜಿಕ ಮತ್ತು ಆಧ್ಯಾತ್ಮಿಕ ಸಂತರು ಎಂದು ಕೇಂದ್ರದ ಮೀನುಗಾರಿಕೆ, ಪಶುಸಂಗೋಪನೆ, ಡೈರಿ, ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವರಾದ ಡಾ. ಎಲ್. ಮುರುಗನ್‌ರವರು ಹೇಳಿದರು.

ಆಗಸ್ಟ್ 29 ರಂದು ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೇ ಜಯಂತಿ ಮತ್ತು ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂ ಸುಮುದಾಯ ಬಾನುಲಿ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ರೇಡಿಯೋವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಾಜೇಂದ್ರ ಶ್ರೀಗಳ ದೂರದೃಷ್ಟಿಯಿಂದ ಸ್ಥಾಪನೆಯಾಗಿರುವ ಜೆಎಸ್‌ಎಸ್ ಮಹಾವಿದ್ಯಾಪೀಠವು ಎಲ್ಲರಿಗೂ ಸ್ಫೂರ್ತಿದಾಯಕವಾಗಿ ಸೇವೆ ಸಲ್ಲಿಸುತ್ತಿದೆ. ಸಮಾಜದ ಉದ್ಧಾರವೇ ಇದರ ಗುರಿಯಾಗಿದೆ. ದೇಶದ ನಾನಾ ಭಾಗಗಳಿಂದ ಬಂದಿರುವ ಸುಮಾರು ಐದು ಸಾವಿರ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡುತ್ತಿದೆ. ಈಗ ಸಮುದಾಯ ಬಾನುಲಿ ಕೇಂದ್ರವನ್ನು ಸ್ಥಾಪಿಸಿ ಸಾಮುದಾಯಿಕ ಜ್ಞಾನವನ್ನು ಸಾಮಾನ್ಯರಿಗೂ ನೀಡಲು ಮುಂದಾಗುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಪರಮಪೂಜ್ಯ ಜಗದ್ಗುರುಗಳು ಪೂಜ್ಯ ರಾಜೇಂದ್ರ ಶ್ರೀಗಳ ಜಯಂತಿಯಂದು, ಅವರು ಮೊದಲು ಸ್ಥಾಪಿಸಿದ ಕಾಲೇಜಿನಲ್ಲಿ ಜೆಎಸ್‌ಎಸ್ ರೇಡಿಯೋ ಸಮುದಾಯ ಬಾನುಲಿಕೇಂದ್ರ ಉದ್ಘಾಟನೆಯಾಗುತ್ತಿರುವುದು ಸುಯೋಗವಾಗಿದೆ. ಅದರಲ್ಲಿಯೂ ಶ್ರಾವಣ ಮಾಸ ಒಳ್ಳೆಯದನ್ನು ಕೇಳುವುದಕ್ಕಾಗಿಯೇ ಇರುವಂಥದ್ದು. ಈ ಮಾಸದಲ್ಲಿ ಜೆಎಸ್‌ಎಸ್ ರೇಡಿಯೋ ಉದ್ಘಾಟನೆಯಾಗಿರುವುದು ಅದರ ಉದ್ದೇಶವನ್ನು ಸಾರ್ಥಕಗೊಳಿಸಿದೆ. ಪೂಜ್ಯ ರಾಜೇಂದ್ರ ಶ್ರೀಗಳ ಕೊಡುಗೆ ಕೇವಲ ಶೈಕ್ಷಣಿಕ ಕ್ಷೇತ್ರಕ್ಕೆ ಸೀಮಿತವಾದುದಲ್ಲ. ಶಿಕ್ಷಣದ ಜೊತೆಗೆ ಕಲೆ, ಸಾಹಿತ್ಯ, ಸಂಗೀತ ಹೀಗೆ ನಾನಾ ಕ್ಷೇತ್ರಗಳಿಗೆ ಅವರು ನೀಡಿದ ಕೊಡುಗೆ ಅಪಾರವಾಗಿದೆ. ಅವರು ಶ್ರೇಷ್ಠ ಆಧ್ಯಾತ್ಮಿಕ ಚಿಂತಕರಾಗಿದ್ದರು. ಎಂತಹ ಕೆಲಸವಿದ್ದರೂ ಆಚಾರವಿಚಾರಗಳನ್ನು ಬಿಟ್ಟವರಲ್ಲ. ಹಿಂದಿನ ಗುರುಪರಂಪರೆಯ ಮಾರ್ಗದರ್ಶನದೊಂದಿಗೆ ಸಾಗಿದರು. ವಿದ್ವತ್‌ಪೂರ್ಣ ವಾದ ಸಮಾಜ ನಿರ್ಮಾಣವಾಗಬೇಕೆಂಬುದು ಅವರ ಅಭಿಲಾಷೆಯಾಗಿತ್ತು ಎಂದು ಹೇಳಿದರು.

ಶಾಸಕರಾದ ಶ್ರೀ ಎಸ್.ಎ. ರಾಮದಾಸ್‌ರವರು ಆಕಾಶವಾಣಿ ಮೊಟ್ಟಮೊದಲಿಗೆ ಪ್ರಾರಂಭವಾದದ್ದು ಮೈಸೂರಿನಲ್ಲಿ. ಅದಾಗಿ ನೂರು ವರ್ಷಗಳು ಸಂದ ಬಳಿಕ ಜೆಎಸ್‌ಎಸ್ ರೇಡಿಯೋ ಪ್ರಾರಂಭವಾಗುತ್ತಿರುವುದು ಮೈಸೂರಿಗೆ ಹೆಮ್ಮೆಯ ವಿಷಯವಾಗಿದೆ. ಸಮಾಜದ ಎಲ್ಲಾ ವರ್ಗಗಳಿಗೂ ಅನುಕೂಲವಾಗುವಂತೆ ಕಾರ್ಯಕ್ರಮ ಗಳನ್ನು ರೂಪಿಸಲಾಗಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಇದರ ಲಾಭವನ್ನು ಪಡೆಯಬಹುದಾಗಿದೆ. ನನ್ನ ಕುಟುಂಬದ ಎಲ್ಲರೂ ಈ ಕಾಲೇಜಿನ ವಿದ್ಯಾರ್ಥಿಗಳೇ ಆಗಿದ್ದು ಈ ಸಂಭ್ರಮದಲ್ಲಿ ನಾವು ಕೂಡ ಭಾಗಿಗಳಾಗಿದ್ದೇವೆ ಎಂದು ಹೇಳಿದರು.

ಶಾಸಕರಾದ ಶ್ರೀ ತನ್ವೀರ್ ಸೇಠ್‌ರವರು ಜೆಎಸ್‌ಎಸ್ ಮಹಾವಿದ್ಯಾಪೀಠವು ಇಂದು ಐತಿಹಾಸಿಕ ಹೆಜ್ಜೆಯನ್ನು ಇಟ್ಟಿದೆ. ಸಮುದಾಯ ಬಾನುಲಿ ಕೇಂದ್ರವು ಮೈಸೂರಿನ

ಜನತೆಗೆ ಕೊಟ್ಟ ಕೊಡುಗೆಯಾಗಿದೆ. ಮೈಸೂರು ತನ್ನದೇ ಆದ ಚಾರಿತ್ರಿಕ ಮೈಲಿಗಲ್ಲುಗಳನ್ನು ಹೊಂದಿರುವಂಥದ್ದು. ಸ್ವಾತಂತ್ರ್ಯ ಬಂದು 75 ವರ್ಷಗಳು ಸಂದಿದ್ದರೂ ಮೈಸೂರಿನಲ್ಲಿರುವ ಹಲವು ಸಂಸ್ಥೆಗಳು ಶತಮಾನವನ್ನು ಕಂಡಿವೆ. ಆಕಾಶವಾಣಿ, ಮೈಸೂರು ವಿಶ್ವವಿದ್ಯಾನಿಲಯ, ಆಸ್ಪತ್ರೆ ಮೊದಲಾದವುಗಳು ಶತಮಾನೋತ್ಸವವನ್ನು ಆಚರಿಸಿವೆ. ಅಂತೆಯೇ ಶೈಕ್ಷಣಿಕ ಕ್ರಾಂತಿಯನ್ನು ಉಂಟುಮಾಡಿದ ಪೂಜ್ಯ ರಾಜೇಂದ್ರ ಶ್ರೀಗಳು ಜನಿಸಿ ನೂರು ವರ್ಷಗಳು ಸಂದಿವೆ. ಪೂಜ್ಯರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲ ಸಾಗಿ ಉತ್ತಮ ಸಮಾಜವನ್ನು ಕಟ್ಟೋಣ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್‌ರವರು ಮಾನವಸಂಕುಲಕ್ಕೆ ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು ನೀಡಲು ಪರಮಪೂಜ್ಯ ರಾಜೇಂದ್ರ ಶ್ರೀಗಳು ತಮ್ಮ ಬದುಕನ್ನೇ ಮುಡಿಪಾಗಿಟ್ಟವರು. ಅವರಿಂದಲೇ ನಾನೂ ಕೂಡ ನನ್ನ ಮೊದಲ ನೇಮಕಾತಿ ಪತ್ರವನ್ನು ಪಡೆದು ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಉದ್ಯೋಗ ಪ್ರಾರಂಭ ಮಾಡಿದೆನು. ಇಂದು ಜೆಎಸ್‌ಎಸ್ ಸಂಸ್ಥೆ ಸಲ್ಲಿಸುತ್ತಿರುವ ಅಪಾರ ಸೇವೆಯಲ್ಲಿ ಪರಮಪೂಜ್ಯರ ಅವಿರತ ಶ್ರಮವಿದೆ. ಇಂದಿನ ಜಗದ್ಗುರುಗಳು ಅವರ ಮಾರ್ಗದಲ್ಲಿಯೇ ಸಾಗಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಜನತೆಗೆ ಮಾನಸಿಕ ಸ್ಥೈರ್ಯವನ್ನು ಮತ್ತು ಸಹಾಯವನ್ನು ನೀಡುವ ಮೂಲಕ ಜನತೆಯ ಜೊತೆಗೆ ನಿಂತವರು ಪೂಜ್ಯರು. ಗ್ರಾಮೀಣ ಜನರ ಸಬಲೀಕರಣಕ್ಕಾಗಿ ಸಮುದಾಯ ರೇಡಿಯೋವನ್ನು ಸ್ಥಾಪಿಸಲಾಗಿದೆ. ಇದು ಸಮುದಾಯದ ಜನರಿಗೆ ತುಂಬಾ ಪ್ರಯೋಜನಕಾರಿಯಾದುದು ಎಂದು ಹೇಳಿದರು.

ಮೈಸೂರು ಮಹಾನಗರ ಪಾಲಿಕೆಯ ಮಹಾಪೌರರಾದ ಶ್ರೀಮತಿ ಸುನಂದ ಪಾಲನೇತ್ರರವರು ನಾನು ಅಧಿಕಾರದ ಚುಕ್ಕಾಣಿ ಹಿಡಿದ ಸಂದರ್ಭದಲ್ಲಿ, ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ಮತ್ತು ಪರಮಪೂಜ್ಯರ ಆಶೀರ್ವಾದ ದೊರೆತಿರುವುದು ನನ್ನ ಪುಣ್ಯವಾಗಿದೆ ಎಂದರು.

ಜೆಎಸ್‌ಎಸ್ ರೇಡಿಯೋ ಆ್ಯಪ್ ಅನ್ನು ವಾರ್ತಾ ಮತ್ತು ಪ್ರಸಾರ ಇಲಾಖೆಯ ದಕ್ಷಿಣ ವಲಯದ ಮಹಾನಿರ್ದೇಶಕರಾದ ಶ್ರೀ ಎಸ್. ವೆಂಕಟೇಶ್ವರ್‌ರವರು ಬಿಡುಗಡೆ ಮಾಡಿದರು.

ಶಾಸಕರಾದ ಶ್ರೀ ಎಲ್. ನಾಗೇಂದ್ರ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಶ್ರೀ ಎಂ. ಶಿವಣ್ಣ, ಜಿಲ್ಲಾಧಿಕಾರಿಗಳಾದ ಡಾ. ಬಗಾದಿ ಗೌತಮ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಮೊದಲಾದವರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಲಲಿತ ಕಲಾ ತಂಡದವರು ಪ್ರಾರ್ಥಿಸಿದರು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಪ್ರಾಂಶುಪಾಲರಾದ ಡಾ. ಹೆಚ್.ಸಿ. ಹೊನ್ನಪ್ಪನವರು ವಂದಿಸಿದರು. ಡಾ. ಆರ್. ಸುಹಾಸ್ ನಿರೂಪಿಸಿದರು.

**ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣಮಾಸ ಪೂಜಾನುಷ್ಠಾನ ಸಮಾರೋಪ ಹಾಗೂ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೆಯ ಜಯಂತಿ**

ಸುತ್ತೂರು ಶ್ರೀಕ್ಷೇತ್ರದಲ್ಲಿ ಸೆಪ್ಟೆಂಬರ್ 7ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಶ್ರಾವಣಮಾಸ ಪೂಜಾನುಷ್ಠಾನ ಸಮಾರೋಪ ಹಾಗೂ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೆಯ ಜಯಂತಿ ಮಹೋತ್ಸವವನ್ನು ಭಕ್ತಿಗೌರವಗಳಿಂದ ನೆರವೇರಿಸಲಾಯಿತು.

ನುಡಿನಮನ ಸಲ್ಲಿಸಿದ ಮತ್ತು ಸಮಾರೋಪ ಭಾಷಣ ಮಾಡಿದ ಕರ್ನಾಟಕ ಸರ್ಕಾರದ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ರಾಜೇಂದ್ರ ಮಹಾಸ್ವಾಮಿಗಳವರು ತ್ರಿವಿಧ ದಾಸೋಹಿಗಳಾಗಿ ದಣಿವರಿಯದ ಕಾಯಕಯೋಗಿಗಳಾಗಿ ಶಾಂತಿ, ಸಾಮರಸ್ಯ, ದಯೆ, ನಿಸ್ವಾರ್ಥತೆ ಇವುಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಶ್ರೀಮಠವು ಇಂದಿಗೂ ಇವುಗಳನ್ನು ಅನೂಚಾನವಾಗಿ ನಡೆಸಿಕೊಂಡು ಬರುತ್ತಿದೆ. ಮಾತೃಹೃದಯಿಗಳಾದ ಶ್ರೀಗಳವರು ಕಿರಿಯ ವಯಸ್ಸಿನಲ್ಲಿಯೇ ಮಠದ ಜವಾಬ್ದಾರಿಯನ್ನು ಹೊರುವುದರೊಂದಿಗೆ ಅಂದಿನ ಕಾಲದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣಕ್ಕಾಗಿ ಪರದಾಡುತ್ತಿದ್ದ ವಿದ್ಯಾರ್ಥಿಗಳನ್ನು ಕಂಡು ಮರುಕಪಟ್ಟು, ಗ್ರಾಮೀಣ ಭಾಗದಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. ಆರ್ಥಿಕ ಸಂಕಷ್ಟದ ಸಂದರ್ಭದಲ್ಲಿ ಚಿನ್ನದ ಕರಡಿಗೆ ಅಡವಿಟ್ಟು ವಿದ್ಯಾರ್ಥಿನಿಲಯಗಳನ್ನು ನಡೆಸಿದುದು ಅವರ ತ್ಯಾಗಮನೋಭಾವಕ್ಕೆ ಸಾಕ್ಷಿಯಾಗಿದೆ ಎಂದರು.

ಮೈಸೂರಿನ ಶ್ರೀ ರಾಜೇಂದ್ರ ಪ್ರಿಂಟರ್ಸ್ ಮಾಲೀಕರು ಹಾಗೂ ಸಂವಹನ ಪ್ರಕಾಶಕರಾದ ಶ್ರೀ ಡಿ.ಎನ್. ಲೋಕಪ್ಪನವರು, ಶ್ರೀ ಸುತ್ತೂರು ಮಠ ಮತ್ತು ರಾಜೇಂದ್ರ ಶ್ರೀಗಳು ಇಲ್ಲದಿದ್ದರೆ, ಇಂದು ನಾಡಿನಲ್ಲಿ ಲಕ್ಷಾಂತರ ಜನರು ಅವಿದ್ಯಾವಂತರು ಹಾಗೂ ನಿರುದ್ಯೋಗಿಗಳಾಗಿರುತ್ತಿದ್ದರು ಎಂದರು.

ಕನಕಪುರ ಶ್ರೀ ದೇಗುಲ ಮಠದ ನಿ.ಪ್ರ.ಸ್ವ ಡಾ. ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು, ರಾಜೇಂದ್ರ ಶ್ರೀಗಳು ಬಡ ವಿದ್ಯಾರ್ಥಿಗಳ ಬಗ್ಗೆ ಅಪಾರ ಪ್ರೀತಿಯನ್ನು ಹೊಂದಿದ್ದರು. ಲೋಕಕಲ್ಯಾಣಕ್ಕಾಗಿ ತಮ್ಮನ್ನು ತಾವು ಅರ್ಪಿಸಿ ಕೊಂಡಿದ್ದರು. ಎಂತಹ ಕಷ್ಟ ಬಂದರೂ ಕೂಡ ಬಂದ ಭಕ್ತರನ್ನು ಪ್ರೀತಿ ವಿಶ್ವಾಸದಿಂದ

ಪ್ರಸಾದ ಮಾಡಿಸಿಯೇ ಕಳುಹಿಸುತ್ತಿದ್ದರು ಎಂದು ಶ್ರೀಗಳವರ ಸಾರ್ಥಕ ಜೀವನವನ್ನು ಉದಾಹರಣೆಗಳ ಮೂಲಕ ತಿಳಿಸಿದರು.

ಚಿಕ್ಕತುಪ್ಪೂರಿನ ಶ್ರೀ ಶಿವಪೂಜಾ ಮಠದ ಶ್ರೀ ಚನ್ನವೀರ ಸ್ವಾಮಿಗಳು ವಚನಗಾಯನ ಮಾಡಿದರು. ಪರಿಣಾಮಿಪುರ ಶ್ರೀ ಬಿದರಚೌಕಿ ಮಠದ ಷ.ಬ್ರ. ಶ್ರೀ ವಿದ್ವಾನ್ ಗುರುಸಿದ್ಧ ಸ್ವಾಮಿಗಳು ಹಾಗೂ ಶಿರಮಳ್ಳಿ ಶ್ರೀ ವಿರಕ್ತಮಠದ ನಿ.ಪ್ರ.ಸ್ವ. ಶ್ರೀ ಇಮ್ಮಡಿ ಮುರುಗೀ ಸ್ವಾಮಿಗಳು ಶ್ರಾವಣಮಾಸ ಪೂಜಾನುಷ್ಠಾನದ ಅನುಭವ ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ನೀಲಕಂಠಸ್ವಾಮಿ ಮಠ, ಹುಲಿಯೂರುದುರ್ಗ, ಚುಂಚನಹಳ್ಳಿ ಹಾಗೂ ನವಿಲೂರು, ರಾಮೇಗೌಡನಪುರ, ಹೆಬ್ಬಣಿ, ಮುಕುಂದೂರು ಮೊದಲಾದ ಮಠಗಳ ಶ್ರೀಗಳು, ಮೊದಲಾದವರು ಉಪಸ್ಥಿತರಿದ್ದರು.

ಸುತ್ತೂರು ವಸತಿ ಶಾಲೆಯ ಸಂಗೀತ ಶಿಕ್ಷಕರು ಪ್ರಾರ್ಥಿಸಿದರು. ಶ್ರೀ ಜಿ.ಎಲ್. ತ್ರಿಪುರಾಂತಕ ಸ್ವಾಗತಿಸಿದರು. ಶ್ರೀ ಬಿ.ಆರ್. ಪಂಚಾಕ್ಷರಿ ವಂದಿಸಿದರು. ಶ್ರೀ ಎಂ. ರಾಜಶೇಖರಮೂರ್ತಿ ಕಾರ್ಯಕ್ರಮವನ್ನು ನಿರೂಪಿಸಿದರು.

**ಪಂಚದಾಸೋಹಗಳ ಮೂಲಕ ರಾಷ್ಟ್ರನಿರ್ಮಾಣಕ್ಕೆ ಕೊಡುಗೆ ನೀಡಿದ ರಾಜೇಂದ್ರ ಶ್ರೀಗಳು**

ರಾಜೇಂದ್ರ ಶ್ರೀಗಳು ಪಂಚದಾಸೋಹಗಳ ಮೂಲಕ ರಾಷ್ಟ್ರನಿರ್ಮಾಣಕ್ಕೆ ಕೊಡುಗೆ ನೀಡಿದವರು ಎಂದು ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮು ರವರು ಸೆಪ್ಟೆಂಬರ್ 7ರಂದು ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೆಯ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು.

ಧರ್ಮ, ಜ್ಞಾನ, ವಿದ್ಯೆ, ಆರೋಗ್ಯ ಹಾಗೂ ಅನ್ನದಾಸೋಹವೆಂಬ ಪಂಚ ದಾಸೋಹ ವನ್ನು ಹೃತ್ಪೂರ್ವಕವಾಗಿ ತಮ್ಮ ಜೀವನಪರ್ಯಂತ ನಡೆಸಿಕೊಂಡು ಬಂದ ರಾಜೇಂದ್ರ ಶ್ರೀಗಳ ಮಹಿಮೆ ಅಪಾರವಾದುದು. ಅವರು ಜ್ಞಾನದ ಬೆಳಕು, ಸಚ್ಚಿದಾನಂದ ಸ್ವರೂಪರು. ಮಠ ಪರಂಪರೆಗೆ ಭದ್ರಬುನಾದಿ ಹಾಕಿದವರು. ದೂರದರ್ಶಿತ್ವವನ್ನು ಹೊಂದಿದ್ದರು. ಯುಗಪುರುಷರು. ಆಧ್ಯಾತ್ಮಿಕ ಧ್ರುವನಕ್ಷತ್ರವಾಗಿ ಕಂಗೊಳಿಸುತ್ತಿದ್ದಾರೆ. ಬದುಕು ಮಂಗಳಮಯವಾಗಬೇಕಾದರೆ ಇಂತಹ ಮಹಾತ್ಮರ ಸ್ಮರಣೆ ಮಾಡಬೇಕು, ಆಗಮಾತ್ರ ಲೌಕಿಕ ಮತ್ತು ಆಧ್ಯಾತ್ಮಿಕ ಜೀವನದಲ್ಲಿ ಯಶಸ್ಸು ದೊರೆಯುತ್ತದೆ ಎಂದು ತಿಳಿಸಿದರು.

ವಿಶ್ರಾಂತ ಪ್ರಾಂಶುಪಾಲರಾದ ಡಾ. ಎಂ. ಕೃಷ್ಣೇಗೌಡರವರು ನಮ್ಮೊಳಗಿರುವ ಪ್ರಪಂಚ ಈ ಹೊರಜಗತ್ತಿಗಿಂತ ದೊಡ್ಡದು. ಮಹಾತ್ಮರಾದವರೆಲ್ಲರೂ ತಮ್ಮೊಳಗಿನ

ಪ್ರಪಂಚವನ್ನು ಕಂಡರು. ಅಂತಹ ಮಹಾತ್ಮರಲ್ಲಿ ಸುತ್ತೂರು ಶ್ರೀಮಠದ ಮಂತ್ರಮಹರ್ಷಿಗಳು ಹಾಗೂ ರಾಜೇಂದ್ರ ಶ್ರೀಗಳು ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. ಮಂತ್ರಮಹರ್ಷಿಗಳು ಮನಸ್ಸು ಮತ್ತು ದೇಹವನ್ನು ಏಕೀಭವಿಸಿದ ಮಹಾನ್‌ತಪಸ್ವಿಗಳು. ತಮ್ಮ ಕಾಯಕದ ಮೂಲಕ ಸಮಾಜೋದ್ಧಾರವನ್ನು ಮಾಡಿದ ಮಹಾನ್‌ಮಹಿಮರು ರಾಜೇಂದ್ರ ಶ್ರೀಗಳು. ಅವರ ಸಂಕಲ್ಪ, ಸಾಧನೆ ಮತ್ತು ಸಿದ್ಧಿ ಅಮೋಘವಾದುದು. ಅವರು ಅಂದು ಬಿತ್ತಿದ ಬೀಜ ಇಂದು ಹೆಮ್ಮರವಾಗಿ ಬೆಳೆದಿದೆ ಎಂದು ಹೇಳಿದರು.

ನಿವೃತ್ತ ಸಹ ಪ್ರಾಧ್ಯಾಪಕರಾದ ಡಾ. ಸಿ.ಜಿ. ಉಷಾದೇವಿಯವರು ರಾಜೇಂದ್ರ ಶ್ರೀಗಳು ದೈವದತ್ತ ಮಾನವೀಯತೆಯನ್ನು ಹೊಂದಿದ್ದರು. ನಿರ್ಲಿಪ್ತತೆ, ಔದಾರ್ಯ, ಪರಹಿತಕ್ಕಾಗಿ ಸದಾ ದುಡಿಯುವ ಗುಣಗಳನ್ನು ಹೊಂದಿದ್ದರು. ಅಸಾಮಾನ್ಯರಾದವ ರೊಬ್ಬರು ಹೇಗೆ ಬದುಕಬಲ್ಲರು ಎಂಬುದಕ್ಕೆ ರಾಜೇಂದ್ರ ಶ್ರೀಗಳು ಶ್ರೇಷ್ಠ ನಿದರ್ಶನ. ಮಾಡುವಂತಿರಬೇಕು ಮಾಡದಂತಿರಬೇಕು ಎಂಬ ಬಸವಣ್ಣನವರ ವಚನದಂತೆ ಪೂಜ್ಯರು ಸರಳವಾಗಿ ಬದುಕಿ ಸಾಧನೆಯ ಶಿಖರವೇರಿದರು ಎಂದು ತಿಳಿಸಿದರು.

ಹುಲಿಯೂರುದುರ್ಗ ಮಠದ ಡಾ. ಶ್ರೀ ಸಿದ್ಧಲಿಂಗ ಶಿವಾನಂದ ಸ್ವಾಮಿಗಳು ಈ ಶ್ರಾವಣ ಮಾಸದಲ್ಲಿ ಕಬ್ಬಿನೊಂದಿಗೆ ಜೇನಿನಂತೆ ರಾಜೇಂದ್ರ ಶ್ರೀಗಳ ಜಯಂತಿಯು ಕೂಡಿಕೊಂಡಿದೆ. ಅವರು ಅಂದು ನಮಗೆ ಗುರುಕುಲದಲ್ಲಿ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಟ್ಟರು. ಆದ್ದರಿಂದಲೇ ಇಂದು ನಮ್ಮ ಅನುಭವಗಳನ್ನು ಹಂಚಿಕೊಳ್ಳಲು ಸಾಧ್ಯವಾಗಿದೆ. ಪೂಜ್ಯರು ಬಹಳ ಪರಿಶ್ರಮದಿಂದ ಜೆಎಸ್‌ಎಸ್ ಸಂಸ್ಥೆಯನ್ನು ಕಟ್ಟಿದ್ದಾರೆ ಎಂದರು.

ಶ್ರೀಮತಿ ಕೆ.ಜಿ. ವಿನುತಾ ಹಾಗೂ ಶ್ರೀಮತಿ ರೂಪಾ ಗುರುಪ್ರಸಾದ್ ಪ್ರಾರ್ಥಿಸಿದರು. ಚಿಕ್ಕತುಪ್ಪೂರು ಶ್ರೀ ಶಿವಪೂಜಾ ಮಠದ ಶ್ರೀ ಚನ್ನವೀರ ಸ್ವಾಮಿಗಳು ವಚನ ಗಾಯನ ಮಾಡಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರು. ಶ್ರೀ ರುದ್ರಮುನಿದೇವರು ವಂದಿಸಿದರು. ಶ್ರೀ ಅಮರೇಶ್ವರದೇವರು ಕಾರ್ಯಕ್ರಮ ನಿರೂಪಿಸಿದರು.

**ಭಗವತ್ಕೃಪೆಗೆ ಭಕ್ತಿಯೇ ಮಾರ್ಗ**

ಭಗವತ್ಕೃಪೆಗೆ ಭಕ್ತಿಯೇ ಮಾರ್ಗ ಎಂದು ವಿಶ್ರಾಂತ ಪ್ರಾಂಶುಪಾಲರಾದ ಡಾ. ಎಂ. ಕೃಷ್ಣೇಗೌಡರು ಸೆಪ್ಟೆಂಬರ್ 7ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನದ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು.

ಭಕ್ತಿ ಒಂದು ಅನುಭವ. ಗುರು ಎಂದರೆ ಜ್ಞಾನ. ಆದರೆ ಇಂದು ಜ್ಞಾನದ ಪ್ರಮಾಣವನ್ನೂ ಅಳೆಯಲಾಗುತ್ತಿದೆ. ಶ್ರಾವಣ ಮಾಸ ಭಾರತೀಯ ಸಂಸ್ಕೃತಿಯಲ್ಲಿ

ಮಹತ್ತರವಾದುದು ಮತ್ತು ಪ್ರಕೃತಿದತ್ತವಾದುದು. ಶ್ರಾವಣ ಮಾಸದ ಬಗ್ಗೆ ಸಾಕಷ್ಟು ಪೌರಾಣಿಕ ಉಲ್ಲೇಖಗಳಿವೆ. ಈ ಮಾಸದಲ್ಲಿ ಶ್ರವಣ, ಮನನ ಮತ್ತು ನಿಧಿಧ್ಯಾಸನದ ಮೂಲಕ ಕಲುಷಿತಗೊಂಡಿರುವ ಶ್ರವಣೇಂದ್ರಿಯಗಳನ್ನು ಶುದ್ಧಗೊಳಿಸಿಕೊಳ್ಳಲು ಉತ್ತಮ ಸಮಯ. ಕೇವಲ ಕಣ್ಣು ತೆರೆದರೆ ಸಾಲದು, ನೋಡಬೇಕು. ಕಿವಿಯಿಂದ ಕೇಳಿಸಿಕೊಂಡರೆ ಸಾಲದು, ಬೇಕಾದುದೆಲ್ಲವನ್ನು ಸ್ವೀಕರಿಸಬೇಕು ಮತ್ತು ಅನುಷ್ಠಾನಕ್ಕೆ ತರಬೇಕು ಎಂದು ಹೇಳಿದರು.

ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಸ್ವಾಮಿ ವಿವೇಕಾನಂದರು ಸೋದರಿ ನಿವೇದಿತಾರ ಆತ್ಮಕ್ಷಾತ್ಕಾರಕ್ಕೆ ಅಗತ್ಯ ಮಾರ್ಗದರ್ಶನ ಮಾಡಿದರು. ಸ್ತ್ರೀಯರಿಗೆ ಸಮಾನತೆ ಮತ್ತು ಶಿಕ್ಷಣ ನೀಡಬೇಕು. ದೀನದುರ್ಬಲರ ಕಣ್ಣೀರು ಒರೆಸುವ ಪ್ರಯತ್ನ ಮಾಡಬೇಕು. ರಾಷ್ಟ್ರ ನಿರ್ಮಾಣಕ್ಕೆ ಬದ್ಧರಾಗಬೇಕು. ಜೀವನ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು ಎಂದು ನಿವೇದಿತಾ ಪ್ರತಿಪಾದಿಸಿದರು. ಶ್ರಾವಣ ಮಾಸದಲ್ಲಿ ಇಂತಹ ಅನೇಕ ಮಹಾತ್ಮರ ಜೀವನ ಚರಿತ್ರೆಗಳನ್ನು ಅರಿಯಲು ಪೂಜ್ಯ ಜಗದ್ಗುರುಗಳವರು ಅವಕಾಶ ಮಾಡಿಕೊಟ್ಟಿದ್ದು ನಮ್ಮೆಲ್ಲರ ಸೌಭಾಗ್ಯ ಎಂದು ಹೇಳಿದರು.

ವಿಶ್ರಾಂತ ಸಹ ಪ್ರಾಧ್ಯಾಪಕರಾದ ಡಾ. ಸಿ.ಜಿ. ಉಷಾದೇವಿಯವರು ಜೀವನದಲ್ಲಿ ನೆಮ್ಮದಿ ಮತ್ತು ಸಂತೋಷ ದೊರೆಯಬೇಕಾದರೆ ಭಕ್ತಿಮಾರ್ಗದಲ್ಲಿ ಸಾಗಬೇಕು. ಜ್ಞಾನಸಂಪಾದನೆ ಕೇವಲ ಓದು-ಬರಹದಿಂದ ಅಷ್ಟೇ ದೊರಕುವುದಿಲ್ಲ. ಶ್ರಾವಣ ಮಾಸದ ಇಂತಹ ಕಾರ್ಯಕ್ರಮಗಳಿಂದ ನಮಗೆ ಜ್ಞಾನ ದೊರೆಯುತ್ತದೆ. ಅದಕ್ಕೆ ಸುತ್ತೂರು ಶ್ರೀಮಠ ಅವಕಾಶ ಮಾಡಿಕೊಟ್ಟಿದೆ. ಬಹಿರಂಗ ಜೀವನದಲ್ಲಿ ಮಗ್ನರಾಗಿರುವವರೆಲ್ಲರನ್ನು ಅಂತರಂಗದ ಶುದ್ಧಿಗೆ ಕೊಂಡೊಯ್ಯಲು ಶ್ರೀಮಠದ ಗುರುಶಕ್ತಿ ಕಾರಣವಾಗಿದೆ ಎಂದು ತಿಳಿಸಿದರು.

ಹುಲಿಯೂರುದುರ್ಗ ಮಠದ ಡಾ. ಶ್ರೀ ಸಿದ್ಧಲಿಂಗ ಶಿವಾನಂದ ಸ್ವಾಮಿಗಳು ಶ್ರಾವಣ ಮಾಸದ ಪೂಜಾನುಷ್ಠಾನ ಕುರಿತು ಮಾತನಾಡುತ್ತಾ ಪರಂಪರೆಯಿಂದ ಬಂದ ಆಚರಣೆಗಳನ್ನು ಅನುಸರಿಸಿಕೊಂಡು ಹೋಗುವುದೆ ಪೂಜಾನುಷ್ಠಾನ. ಮಾಸ ಪರ್ಯಂತ ನಸುಕಿನ ಜಾವ ಇಷ್ಟಲಿಂಗ ಪೂಜೆಯಲ್ಲಿ ತೊಡಗಿದ್ದುದು ಅತ್ಯಂತ ಆನಂದ ಮತ್ತು ಹೊಸ ಚೈತನ್ಯವನ್ನು ನೀಡಿತು. ಪೂಜ್ಯ ರಾಜೇಂದ್ರ ಶ್ರೀಗಳ ಕಾಲದಿಂದಲೂ ಶ್ರೀಮಠದಲ್ಲಿ ಪೂಜಾನುಷ್ಠಾನ ಮತ್ತು ಪ್ರವಚನಗಳು ನಿರಂತರವಾಗಿ ನಡೆದುಕೊಂಡು ಬಂದಿವೆ. ಅಂತಹ ಮಹಾತ್ಮರನ್ನು ನಾವೆಲ್ಲರು ನೋಡಿದ್ದೆವು ಎನ್ನುವುದೇ ನಮ್ಮ ಪುಣ್ಯ ಎಂದರು.

ಕು. ಎಸ್. ಮಾನಸ, ಶ್ರೀಮತಿ ಉಮಾ ನಾಗೇಶ್ ಹಾಗೂ ಶ್ರೀ ಸಿದ್ಧೇಶ್‌ದೇವರು ಅನಿಸಿಕೆಗಳನ್ನು ಹಂಚಿಕೊಂಡು ಒಂದು ತಿಂಗಳ ಕಾಲ ನಡೆದ ಈ ಪ್ರವಚನ ಮತ್ತು

ಉಪನ್ಯಾಸಗಳು ಕಣ್ಣಿಗೆ ಕಟ್ಟುವಂತೆ ಮೂಡಿಬಂದಿವೆ. ಅನೇಕ ಸಂತರು, ಶರಣರು, ಮಹಾತ್ಮರ ಬಗ್ಗೆ ಸಾಕಷ್ಟು ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ಇವುಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಕರೋನಾ ಕಾರಣದಿಂದಾಗಿ ಕಾರ್ಯಕ್ರಮದಲ್ಲಿ ನೇರವಾಗಿ ಭಾಗವಹಿಸಲು ಸಾಧ್ಯವಾಗದ್ದರಿಂದ ಆನ್‌ಲೈನ್ ಮೂಲಕ ಪ್ರವಚನ ಕೇಳಲು ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ಕೃತಜ್ಞತೆ ಸಲ್ಲಿಸಿದರು.

ಒಂದು ತಿಂಗಳ ಕಾಲ ಪ್ರವಚನವನ್ನು ಆಲಿಸಿ ಪ್ರಬಂಧವನ್ನು ಬರೆದು ವಿಜೇತರಾದವರಿಗೆ ಬಹುಮಾನವನ್ನು ವಿತರಿಸಲಾಯಿತು. ಶ್ರೀಮತಿ ಕೆ.ಜಿ. ವಿನುತಾ ಹಾಗೂ ಶ್ರೀಮತಿ ರೂಪಾ ಗುರುಪ್ರಸಾದ್ ಪ್ರಾರ್ಥಿಸಿದರು. ಚಿಕ್ಕತುಪ್ಪೂರು ಶ್ರೀ ಶಿವಪೂಜಾಮಠದ ಶ್ರೀ ಚನ್ನವೀರ ಸ್ವಾಮಿಗಳು ವಚನ ಗಾಯನ ಮಾಡಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರು. ಶ್ರೀ ರುದ್ರಮುನಿದೇವರು ವಂದಿಸಿದರು. ಶ್ರೀ ಅಮರೇಶ್ವರದೇವರು ಕಾರ್ಯಕ್ರಮ ನಿರೂಪಿಸಿದರು.

### ವ್ಯಸನಮುಕ್ತ ಸಮಾಜದಿಂದ ಸುಭದ್ರ ದೇಶ ನಿರ್ಮಾಣ ಸಾಧ್ಯ

ವ್ಯಸನಮುಕ್ತ ಸಮಾಜದಿಂದ ಸುಭದ್ರ ದೇಶ ನಿರ್ಮಾಣ ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಸೆಪ್ಟೆಂಬರ್ 13ರಂದು ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ಆವರಣದಲ್ಲಿ ಕುಡಿತದ ಸಮಸ್ಯೆಯಿಂದ ಮುಕ್ತರಾಗಬಯಸುವವರಿಗೆ ಆರಂಭಿಸಲಾದ ಆಪ್ತ ಸಮಾಲೋಚನಾ ಕೇಂದ್ರದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ, ಕುಡಿತವನ್ನು ಬಿಡಿಸುವುದು ಕಷ್ಟದ ಕೆಲಸ. ಮದ್ಯವ್ಯಸನಕ್ಕೆ ತುತ್ತಾದವರು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದು, ಮಾನಸಿಕವಾಗಿ ಹಲವಾರು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಮದ್ಯವ್ಯಸನದಿಂದ ಮುಕ್ತರಾಗುವ ಇಚ್ಛೆಯಿದ್ದರೂ ಅದು ಸಾಧ್ಯವಾಗದೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಂಥವರಿಗೆ ಆಪ್ತ ಸಮಾಲೋಚನೆಯನ್ನು ನಡೆಸಿ ಸಂಪೂರ್ಣ ವ್ಯಸನಮುಕ್ತರಾಗುವಂತೆ ಮಾಡುವುದು ಜೆಎಸ್‌ಎಸ್ ಆಪ್ತಸಮಾಲೋಚನಾ ಕೇಂದ್ರದ ಉದ್ದೇಶ. ಈಗಾಗಲೇ ಸಾಕಷ್ಟು ಮಂದಿ ಸಂಸ್ಥೆಯಿಂದ ಏರ್ಪಡಿಸಿದ್ದ ಶಿಬಿರಗಳ ಪ್ರಯೋಜನ ಪಡೆದು ವ್ಯಸನಮುಕ್ತರಾಗಿದ್ದಾರೆ ಎಂದು ತಿಳಿಸಿದರು.

ವಾಟಾಳು ಮಠದ ಡಾ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಹಳ್ಳಿಗಳಲ್ಲಿ ಮದ್ಯಪಾನ ಮಾಡುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಸಾಕಷ್ಟು ಕುಟುಂಬಗಳು ಇದರಿಂದ ಕಣ್ಣೀರಿನಲ್ಲಿ ಕೈತೊಳೆಯುತ್ತಿವೆ. ಇದು ಮನುಷ್ಯನನ್ನು ದುರಂತಕ್ಕೆ ತಳ್ಳುತ್ತದೆ. ಗ್ರಾಮೀಣ

ಪ್ರದೇಶದ ಯುವಕರಲ್ಲಿ ಇದರ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು ಎಂದು ಹೇಳಿದರು.

ಪರಂಪರೆ ಸಂಸ್ಥೆಯ ಶ್ರೀ ಕೃಷ್ಣಕುಮಾರ್‌ರವರು ನಗರ ಭಾಗದಲ್ಲಿ ಸಮಾಲೋಚನ ಕೇಂದ್ರ ಆರಂಭವಾಗಿರುವುದು ಸಾಕಷ್ಟು ಜನರಿಗೆ ಅನುಕೂಲಕರವಾಗುತ್ತದೆ. ಮದ್ಯವ್ಯಸನ ಎಂಬ ಸಾಮಾಜಿಕ ಸಮಸ್ಯೆಯ ವಿವಿಧ ಮುಖಗಳನ್ನು ಪರಿಚಯಿಸುವುದು, ಮದ್ಯವ್ಯಸನಿಗಳಿಗೆ ಉಪಚಾರ ಮತ್ತು ಆಪ್ತಸಮಾಲೋಚನೆ ಮಾಡುವುದು ಇದರ ಉದ್ದೇಶವಾಗಿದೆ. ಕುಡಿತ ಬಿಟ್ಟು ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸುವಲ್ಲಿ ಮೊದಲ ಮೆಟ್ಟಿಲಾಗುವಂತೆ ಈ ಸಮಾಲೋಚನ ಕೇಂದ್ರ ಕಾರ್ಯ ನಿರ್ವಹಿಸುತ್ತದೆ ಎಂದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಕುಡಿತದಿಂದ ಸಮಾಜ ಇಂದು ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದೆ. ದೌರ್ಜನ್ಯ, ಕ್ರೌರ್ಯ, ದುರ್ನಡತೆ, ಅಶಿಸ್ತು ಮುಂತಾದ ಗುಣಗಳು ಕುಡಿತದಿಂದ ಉಂಟಾಗುತ್ತಿವೆ. ಯುವಕರಿಂದ ವೃದ್ಧರವರೆಗೂ ಕುಡಿತದ ಪರಿಣಾಮಗಳು ಬೇರೆ ಬೇರೆ ಸ್ವರೂಪಗಳಲ್ಲಿ ಕಾಣಿಸಿಕೊಳ್ಳುತ್ತವೆ. ಈ ಕಾರಣಕ್ಕಾಗಿಯೇ ಆಪ್ತಸಮಾಲೋಚನ ಕೇಂದ್ರ ತುಂಬಾ ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಮದ್ಯವ್ಯಸನದಿಂದ ಮುಕ್ತರಾದ ಶ್ರೀ ಗಣೇಶ್, ಶ್ರೀ ಕಾಂತರಾಜು ಮತ್ತು ಶ್ರೀ ವೀರರಾಜುರವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಶ್ರೀ ಜಯರಾಜೇಂದ್ರರು, ಹುಲಿಯೂರುದುರ್ಗ, ಮಾದಳ್ಳಿ, ಚುಂಚನಹಳ್ಳಿ ಮಠಗಳ ಶ್ರೀಗಳು ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಮಠಗಳ ಪಾತ್ರ ಅನನ್ಯ

ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಮಠಗಳ ಪಾತ್ರ ಅನನ್ಯವಾದದ್ದು ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಸೆಪ್ಟೆಂಬರ್ 12ರಂದು ಚನ್ನಪಟ್ಟಣದ ಶ್ರೀ ವಿರಕ್ತಮಠದ ಚರಮೂರ್ತಿ ಶ್ರೀ ಶಿವರುದ್ರ ಸ್ವಾಮಿಗಳವರ ಚರಪಟ್ಟಾಧಿಕಾರದ ರಜತ ಮಹೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಸಮಾಜಕ್ಕೆ ಉತ್ತಮ ದಾರಿ ತೋರಿಸುವ ಕೆಲಸವನ್ನು ಮಠಮಾನ್ಯಗಳು ಮಾಡುತ್ತಿವೆ. ವರ್ತಮಾನದಲ್ಲಿ ಮಠಗಳನ್ನು ನಡೆಸುವುದು ಅಷ್ಟು ಸುಲಭದ ಕೆಲಸವಲ್ಲ. ಸರ್ವರನ್ನೂ ಜೊತೆಯಾಗಿ ಉತ್ತಮ ಮಾರ್ಗದಲ್ಲಿ ನಡೆಸುವ ಮಹತ್ತರ ಜವಾಬ್ದಾರಿ ಮಠಗಳ ಮೇಲಿದೆ. ಭಕ್ತರು ಸಹ ಮಠಗಳನ್ನು ಮನೆಗಳಂತೆ ನೋಡಿಕೊಳ್ಳಬೇಕು. ಸಮಾಜದಲ್ಲಿ ಸೇವೆಯ ಮುಂದೆ

ಯಾವುದೂ ದೊಡ್ಡದಲ್ಲ. ಸೇವಾ ಮನೋಭಾವ ಹಾಗೂ ಸ್ಮರಣೆಯ ಗುಣಗಳನ್ನು ಬೆಳೆಸಿಕೊಂಡು  ಭಕ್ತಿಯ ಮಾರ್ಗದಲ್ಲಿ ಬದುಕು ಸಾಗಿಸಬೇಕು ಎಂದು ತಿಳಿಸಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, 19ನೇ ವಯಸ್ಸಿಗೆ ಗುರುದೀಕ್ಷೆ ಪಡೆದು ಮಠವನ್ನು ಯಶಸ್ವಿಯಾಗಿ ನಡೆಸುತ್ತಿರುವ ಶ್ರೀ ಶಿವರುದ್ರಸ್ವಾಮಿಗಳ ಸೇವೆ ಅಪಾರ. ತಮ್ಮ ಗುರುಗಳ ಆಶಯದಂತೆ ಮಠದ ಗೌರವವನ್ನು ಎತ್ತಿಹಿಡಿದಿರುವ ಅವರ ಕಾರ್ಯ ನಿರಂತರವಾಗಿರಲಿ ಎಂದು ಆಶಿಸಿದರು.

ಕನಕಪುರ ಶ್ರೀ ದೇಗುಲಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಮರಳೇಗವಿಮಠದ ಶ್ರೀ ಶಿವರುದ್ರ ಸ್ವಾಮಿಗಳು ಕಾರ್ಯಕ್ರಮ ಉದ್ಘಾಟಿಸಿದರು. ಬೇವೂರು ಮತ್ತು ಬೆಟ್ಟಹಳ್ಳಿ ಮಠಗಳ ಶ್ರೀಗಳು, ಮಾಜಿ ಸಚಿವರಾದ ಶ್ರೀ ಸಿ.ಪಿ. ಯೋಗೇಶ್ವರ್, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷರಾದ ಶ್ರೀ ಪಿ. ಗುರುಮಾದಯ್ಯ ಮೊದಲಾದವರು ಉಪಸ್ಥಿತರಿದ್ದರು.

**ವೈದ್ಯರುಗಳೆ ದೇವರಾದರು**

ಕೋವಿಡ್–19 ಸಾಂಕ್ರಾಮಿಕ ಸಂದರ್ಭದಲ್ಲಿ ರೋಗಿಗಳ ಸೇವೆ ಮತ್ತು ಆರೈಕೆ ಮಾಡಿದ ಮುಂಚೂಣಿ ವೈದ್ಯರುಗಳಿಗೆ ನೀಡುವ ಪ್ರಶಂಸಾ ಪತ್ರ ಮತ್ತು ಪ್ರಶಸ್ತಿ ಚಿಕ್ಕದು. ಆದರೆ, ವೈದ್ಯರುಗಳು ನೀಡಿದ ಸೇವೆ ಹಾಗೂ ಚಿಕಿತ್ಸೆಯಿಂದ ರೋಗಿಗಳು ಗುಣಮುಖರಾಗಿ ಮನೆಗೆ ಹೋಗುವಾಗ ಅವರನ್ನು ದೇವರು ಎಂದು ಕರೆಯುತ್ತಾರೆ ಅದೇ ನಿಜವಾದ ಪ್ರಶಸ್ತಿ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಸೆಪ್ಟೆಂಬರ್ 18ರಂದು ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಂಭಾಗಣದಲ್ಲಿ ಕೋವಿಡ್–19 ಸಾಂಕ್ರಾಮಿಕ ಸಂದರ್ಭದಲ್ಲಿ ರೋಗಿಗಳ ಸೇವೆ ಮತ್ತು ಆರೈಕೆ ಮಾಡಿದ ಜೆಎಸ್‌ಎಸ್ ಆಸ್ಪತ್ರೆಯ ವೈದ್ಯರುಗಳು ಮತ್ತು ವಿಭಾಗದ ಮುಖ್ಯಸ್ಥರುಗಳು, ಆಡಳಿತವರ್ಗದವರು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಜೆಎಸ್‌ಎಸ್ ಆಸ್ಪತ್ರೆ ಹಾಗೂ ಎನ್‌ಜೆಎಸ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಗೌರವ ಸಮರ್ಪಣಾ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಪೂಜ್ಯ ಜಗದ್ಗುರುಗಳವರು ಕೋವಿಡ್‌ನಿಂದಾಗಿ ಅಮೆರಿಕದಂತಹ ಮುಂದುವರೆದ ರಾಷ್ಟ್ರಗಳು ಇಂದಿಗೂ ಕೂಡ ಭಯದ ವಾತಾವರಣದಲ್ಲಿ ಇವೆ. ಆದರೆ ಭಾರತದಲ್ಲಿ ಕೋವಿಡ್ ಲಸಿಕೆ ಮತ್ತು ಸಾರ್ವಜನಿಕರ ಸ್ಪಂದನೆ ಹಾಗೂ ವೈದ್ಯರು ನೀಡಿದ ಚಿಕಿತ್ಸೆಯಿಂದ ಕಾಯಿಲೆ ಇಳಿಮುಖ ವಾಗುತ್ತಿದೆ. ಈ ಕಾಯಿಲೆ ಬೇರೆ ಕಾಯಿಲೆಯಂತೆಯೇ ಇರುತ್ತದೆ, ಹೋಗುವುದಲ್ಲ. ಅದಕ್ಕೆ ಜನರೇ ಹೊಂದಾಣಿಕೆ ಮಾಡಿಕೊಂಡು ಹೋಗಬೇಕು ಎಂದು ತಜ್ಞರು ತಿಳಿಸುತ್ತಿದ್ದಾರೆ, ಹಾಗಾಗಿ ಯಾರೂ ಧೈರ್ಯಗುಂದದೆ ಮುನ್ನಡೆಯಬೇಕು ಎಂದರು.

ಸಾಮಾನ್ಯ ಔಷಧ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಜೆ. ಸುಭಾಷ್ ಚಂದ್ರರವರು ಕೋವಿಡ್–19ರ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಫ್ಲೂ ಕ್ಲಿನಿಕ್, ಪ್ರತ್ಯೇಕ ವಾರ್ಡ್‌ಗಳನ್ನು ತ್ವರಿತವಾಗಿ ಸಿದ್ಧಪಡಿಸಿ ಚಿಕಿತ್ಸೆ ನೀಡಿದ ಅನುಭವಗಳು, ಎದುರಿಸಿದ ಸವಾಲುಗಳು, ಮೈಸೂರಿನಲ್ಲೇ ಮೊದಲ ಖಾಸಗಿ ಕೋವಿಡ್ ಆರ್‌ಟಿಪಿಸಿಆರ್ ಪರೀಕ್ಷೆ ಲ್ಯಾಬ್ ಸ್ಥಾಪನೆ, ಕೋವಿಡ್ ಲಸಿಕೆಯನ್ನು ಸಾರ್ವಜನಿಕರಿಗೆ ನೀಡಲು ಕಲ್ಪಿಸಿದ ವ್ಯವಸ್ಥೆ, ಕೋವಿಡ್ 1ನೇ ಮತ್ತು 2ನೇ ಅಲೆಯನ್ನು ಎದುರಿಸಲು ಆಸ್ಪತ್ರೆಯು ತೆಗೆದುಕೊಂಡ ಕ್ರಮಗಳು ಮತ್ತು 3ನೇ ಅಲೆಯನ್ನು ಎದುರಿಸಲು ಆಸ್ಪತ್ರೆ ಸಜ್ಜಾಗಿರುವ ಬಗ್ಗೆ ವಿವರಿಸಿದರು.

ಲಯನ್ ಎಂ.ಎನ್. ಜೈಪ್ರಕಾಶ್‌ರವರು ಕೋವಿಡ್ ಸಂಧರ್ಭದಲ್ಲಿ ಆಸ್ಪತ್ರೆಯ ವೈದ್ಯರುಗಳು ಮತ್ತು ಸಿಬ್ಬಂದಿಗಳು ನೀಡಿರುವ ಸೇವೆ ಅತ್ಯಂತ ಅನುಪವಾದುದು. ಕೋವಿಡ್ ಸಾಂಕ್ರಾಮಿಕ ಹೋರಾಟದಲ್ಲಿ ಆಸ್ಪತ್ರೆಗೆ ಹಲವಾರು ಸಂಘಸಂಸ್ಥೆಗಳು ಸಾಕಷ್ಟು ಸಹಾಯಹಸ್ತವನ್ನು ಚಾಚಿವೆ. ಮುಂದೆಯೂ ಇದೇರೀತಿ ಆಸ್ಪತ್ರೆಗೆ ಸಹಾಯ ಮಾಡುವ ಕಾರ್ಯಗಳು ನಡೆಯಲಿವೆ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ಕುಲಪತಿಗಳಾದ ಡಾ. ಸುರೀಂದರ್ ಸಿಂಗ್, ಭ್ರಮರಾ ಟ್ರಸ್ಟ್‌ನ ಶ್ರೀಮತಿ ಮಾಧುರಿ ತಾತಾಚಾರಿ ಹಾಗೂ ಆಸ್ಪತ್ರೆಯ ವೈದ್ಯರುಗಳು, ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಕರ್ನಲ್ ಎಂ. ದಯಾನಂದರವರು ಸ್ವಾಗತಿಸಿದರು. ಆಡಳಿತಾಧಿಕಾರಿಗಳಾದ ಶ್ರೀ ಎನ್. ಲೋಕೇಶ್ ಲಯನ್ ಎಂ.ಎನ್. ಜೈಪ್ರಕಾಶ್‌ರವರನ್ನು ಪರಿಚಯಿಸಿದರು. ವೈದ್ಯಕೀಯ ಅಧೀಕ್ಷಕರಾದ ಡಾ. ಎಂ. ಗುರುಸ್ವಾಮಿಯವರು ವಂದಿಸಿದರು. ಡಾ. ಎನ್. ರಶ್ಮಿಯವರು ಪ್ರಾರ್ಥಿಸಿದರು. ಡಾ. ಪಿ. ಶಾಸ್ತಾರರವರು ಕಾರ್ಯಕ್ರಮ ನಿರೂಪಿಸಿದರು.

### ಮಕ್ಕಳಲ್ಲಿನ ಪ್ರತಿಭೆಗೆ ಪೋಷಕರು ನೀರೆರೆಯಬೇಕು

ಮಕ್ಕಳಲ್ಲಿನ ಪ್ರತಿಭೆಯನ್ನು ಗುರುತಿಸಿ ಅದರ ವಿಕಸನಕ್ಕೆ ಪೋಷಕರು ನೀರೆರೆಯಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಸೆಪ್ಟೆಂಬರ್ 19ರಂದು ಮೈಸೂರಿನ ಮುಕ್ತಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಶೌರ್ಯ ಪ್ರಶಸ್ತಿಗೆ ಭಾಜನರಾದ ಮೂವರು ಮಕ್ಕಳ ನೈಜ ಜೀವನ

ಆಧಾರಿತ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿ ವಿಜೇತ ಮಕ್ಕಳ ಚಲನಚಿತ್ರ 'ಪದಕ' ಸಿನಿಮಾದ ಟ್ರೈಲರ್‌ನ್ನು ಬಿಡುಗಡೆಗೊಳಿಸಿ ಎಲ್ಲ ಮಕ್ಕಳಲ್ಲೂ ಒಂದಲ್ಲಾ ಒಂದು ಪ್ರತಿಭೆ ಇದ್ದೇ ಇರುತ್ತದೆ, ಅದನ್ನು ಗುರುತಿಸಿ ಸೂಕ್ತ ಪ್ರೋತ್ಸಾಹ ನೀಡಬೇಕು. ಈ ಸಿನಿಮಾದಲ್ಲಿ ಮಕ್ಕಳಲ್ಲಿರುವ ಸಾಹಸ ಪ್ರವೃತ್ತಿಯನ್ನು ಅನಾವರಣ ಮಾಡಲಾಗಿದೆ. ಬಹಳಷ್ಟು ಸಿನಿಮಾಗಳು ಆಕರ್ಷಣೆಯ ಕಾರಣದಿಂದ ನೂರಾರು ದಿನಗಳು ತೆರೆಯ ಮೇಲೆ ಇರುತ್ತವೆ. ಆದರೆ ಅರ್ಥಪೂರ್ಣತೆಯಿಂದ ಸಮಾಜಕ್ಕೆ ಸಂದೇಶ ನೀಡುವ ಚಿತ್ರಗಳು ನೂರಾರು ದಿನಗಳ ಕಾಲ ತೆರೆ ಕಾಣದಿದ್ದರೂ ಸಮಾಜದಲ್ಲಿ ಉನ್ನತ ಬದಲಾವಣೆಗಳನ್ನು ತರುತ್ತವೆ. ಅಂತಹ ಸಿನಿಮಾಗಳ ಸಾಲಿಗೆ 'ಪದಕ' ಸಿನಿಮಾ ಸೇರಲಿದೆ ಎಂದು ತಿಳಿಸಿದರು.

ಜಿಲ್ಲಾ ಲೋಕಾಯುಕ್ತ ಪೋಲಿಸ್ ವರಿಷ್ಠಾಧಿಕಾರಿಗಳಾದ ಶ್ರೀ ಸಿ. ಮಲ್ಲಿಕ್‌ರವರು ದೃಶ್ಯ ಮಾಧ್ಯಮ ಜನರ ಮೇಲೆ ಹೆಚ್ಚು ಪರಿಣಾಮವನ್ನುಂಟು ಮಾಡಲಿದ್ದು, ಅದರ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡುವುದು ಅಗತ್ಯ. ಗಲಾಟೆ ಮತ್ತು ಭರಾಟೆ ಸಿನಿಮಾಗಳ ಮಧ್ಯೆ ಶಾಂತ ವಾತಾವರಣ, ಕೌಟುಂಬಿಕ ಮೌಲ್ಯಗಳನ್ನು ಅನಾವರಣಗೊಳಿಸುವ ಸಿನಿಮಾಗಳು ಅಪರೂಪವಾಗಿವೆ ಎಂದು ಹೇಳಿದರು.

ಸಿನಿಮಾ ನಿರ್ದೇಶಕರಾದ ಶ್ರೀ ಆದಿತ್ಯ ಚಿರಂಜೀವಿಯವರು 80ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ 30ಕ್ಕೂ ಹೆಚ್ಚು ಪ್ರಶಸ್ತಿಗಳು ಪದಕ ಸಿನಿಮಾಕ್ಕೆ ಲಭಿಸಿವೆ. ಮಕ್ಕಳ ಸಾಹಸಕ್ಕೆ ಶೌರ್ಯ ಪ್ರಶಸ್ತಿ ಸಂದಿರುವ ಮೂರು ನೈಜಕಥೆಗಳನ್ನು ಆಧರಿಸಿ ಸಿನಿಮಾವನ್ನು ಮಾಡಲಾಗಿದೆ ಎಂದರು.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಸಮಿತಿ ಉಪಾಧ್ಯಕ್ಷರಾದ ಶ್ರೀ ಉಮೇಶ್, ಚಾಮರಾಜನಗರ ಜಿಲ್ಲಾ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್, ಮಂಡ್ಯ ಸಕ್ಕರೆ ಕಾರ್ಖಾನೆ ಅಧ್ಯಕ್ಷರಾದ ಶ್ರೀ ಶಿವಲಿಂಗೇಗೌಡ, ಚಾಮರಾಜನಗರ ಜಿಲ್ಲಾ ಪಂಚಾಯತ್ ಮುಖ್ಯ ಹಣಕಾಸು ಅಧಿಕಾರಿಗಳಾದ ಶ್ರೀಮತಿ ಮಿಲನಾ ಮುರಗೋಡು ಮತ್ತು ಶ್ರೀ ಬಿ.ಕೆ. ರಮೇಶ್ ಮೊದಲಾದವರು ಉಪಸ್ಥಿತರಿದ್ದರು.

**ಸಂತರ ಸಂಗದಿಂದ ದುಃಖ ದುಮ್ಮಾನಗಳು ದೂರವಾಗುತ್ತವೆ**

ಸಂತರ ಸಂಗದಿಂದ ದುಃಖ ದುಮ್ಮಾನಗಳು ದೂರವಾಗುತ್ತವೆ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಸೆಪ್ಟೆಂಬರ್ 25ರಂದು ಬೆಂಗಳೂರಿನ ವಿಜಯನಗರದ ಶ್ರೀ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಅಥಣಿ ಶ್ರೀ ಮೋಟಗಿಮಠ ಶ್ರೀ ಪ್ರಭುಚನ್ನಬಸವ ಸ್ವಾಮಿಗಳು ರಚಿಸಿದ

'ಮಹಾತ್ಮರ ಚರಿತಾಮೃತ' ಗ್ರಂಥ ಲೋಕಾರ್ಪಣೆಯ ದಿವ್ಯ ಸಾನ್ನಿಧ್ಯವನ್ನು ವಹಿಸಿ ಯಾರ ಸಮೀಪಕ್ಕೆ ಹೋದರೆ ಮನುಷ್ಯನ ಕಷ್ಟಗಳು ಪರಿಹಾರವಾಗಿ ಸುಖ, ಸಂತೋಷ, ಶಾಂತಿ, ನೆಮ್ಮದಿಗಳು ನೆಲೆಸುತ್ತವೆಯೋ ಅಂಥವರು ಮಹಾತ್ಮರಾಗಿ ಜಗತ್ತಿನಲ್ಲಿ ಶಾಶ್ವತವಾಗಿ ನೆಲೆಸಿರುತ್ತಾರೆ. ಅಂತಹ ಮಹಾತ್ಮರ ಕುರಿತ ಪರಿಚಯವನ್ನು ಈ ಗ್ರಂಥದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ವಿವರಿಸಲಾಗಿದೆ. ಸಂತ–ಶರಣರ ಸಂಪರ್ಕ ಮನುಷ್ಯನ ಇಡೀ ಬದುಕನ್ನೇ ಬದಲಿಸಬಲ್ಲದು. ಮಹಾತ್ಮರನ್ನು ನೆನೆದರೆ ಜೀವನ ಪವಿತ್ರವಾಗುವುದು. ಮನಸ್ಸಿಗೆ ಬೇಸರವಾದಾಗ ಶರಣರ ಜೀವನ ಸಂದೇಶಗಳನ್ನು ಓದಿದರೆ ಕಷ್ಟಗಳಿಗೆ ಪರಿಹಾರ ದೊರಕುತ್ತದೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಸಮಾಜದಲ್ಲಿ ಕ್ರಿಯಾಶೀಲ ಚಿಂತಕರಿದ್ದಾರೆ. ಆದರೆ ಚಿಂತನೆ ಮಾಡಿ ಸುಮ್ಮನಿರುವವರ ಸಾಲಿಗೆ ಸೇರದೆ ಶ್ರೀ ಪ್ರಭುಚನ್ನಬಸವ ಸ್ವಾಮಿಗಳು ಮಹಾತ್ಮರ ಚರಿತಾಮೃತ ಕೃತಿಯನ್ನು ರಚಿಸಿದ್ದಾರೆ. ಸಾಮಾನ್ಯರೂ ಮಹಾತ್ಮರಾಗುವ ದಾರಿಯನ್ನು ತೋರಿಸಿದ್ದಾರೆ. ಶ್ರೀಮಂತಿಕೆ ಎಂದರೆ ಕೇವಲ ಧನಕನಕಾದಿಗಳಲ್ಲ. ಸಾಧಕರು ಬಿಟ್ಟು ಹೋಗಿರುವ ಭಾವ ಮತ್ತು ಸಂಬಂಧಗಳೆ ನಿಜವಾದ ಶ್ರೀಮಂತಿಕೆ ಎಂದು ತಿಳಿಸಿದರು.

ಗದಗಿನ ಜಗದ್ಗುರು ಶ್ರೀ ತೋಂಟದಾರ್ಯ ಸಂಸ್ಥಾನ ಮಠದ ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಕೃತಿಗಳು ಜಗತ್ತನ್ನೇ ಆಳಬಲ್ಲವು. ಅನೇಕ ಗ್ರಂಥಗಳು ಬಹುತೇಕ ಜನರ ಮೇಲೆ ಪ್ರಭಾವ ಬೀರಿವೆ. ಮಹಾತ್ಮರ ಸಂದೇಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆದಾಗ ಬದುಕು ಸಾರ್ಥಕವಾಗುತ್ತದೆ ಎಂದರು.

ಚಿತ್ರದುರ್ಗ ಶ್ರೀ ಮುರುಘಾಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರು ಮಹಾತ್ಮರ ಚರಿತಾಮೃತ ಕೃತಿಯಲ್ಲಿ ಶರಣರ, ಸಂತರ ಇತಿಹಾಸವಿದೆ. ಇತಿಹಾಸವನ್ನು ನಾವು ಓದಬೇಕು, ಅಧ್ಯಯನದಲ್ಲಿ ತೊಡಗಬೇಕು, ಇತರರು ಬರೆದ ಗ್ರಂಥಗಳನ್ನು ಓದಬೇಕು. ಆಗ ಇಂತಹ ನೂರಾರು ಗ್ರಂಥಗಳನ್ನು ರಚಿಸಲು ಸಾಧ್ಯ ಎಂದು ಹೇಳಿದರು.

ಸರ್ವೋಚ್ಚ ನ್ಯಾಯಾಲಯದ ಗೌ. ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಶಿವರಾಜ ವಿ. ಪಾಟೀಲ್‌ರವರು ಬುದ್ಧ, ಬಸವ, ಗಾಂಧಿಯವರಂತಹ 200ಕ್ಕೂ ಅಧಿಕ ಮಹಾತ್ಮರ ಚರಿತ್ರೆಯನ್ನು ಒಳಗೊಂಡಿರುವ ಈ ಗ್ರಂಥ ಸಾರ್ಥಕ ಜೀವನಕ್ಕೆ ಸಾರಥಿಯಾಗಲಿದೆ ಎಂದರು.

ಸಚಿವರಾದ ಶ್ರೀ ವಿ. ಸೋಮಣ್ಣ ಅಧ್ಯಕ್ಷತೆ ವಹಿಸಿದ್ದರು. ವಿಶ್ರಾಂತ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರು ಗ್ರಂಥ ಪರಿಚಯಿಸಿದರು. ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಆಶಯ ನುಡಿಗಳನ್ನಾಡಿದರು. ನಾಡಿನ ವಿವಿಧ ಮಠಗಳ ಶ್ರೀಗಳು, ಶಾಸಕರಾದ ಶ್ರೀ ಮಹೇಶ ಕಮತಳ್ಳಿ, ಕರವೇ ರಾಜ್ಯಾಧ್ಯಕ್ಷರಾದ ಶ್ರೀ ಟಿ.ಎ. ನಾರಾಯಣಗೌಡ, ಖ್ಯಾತ ಸಂಗೀತ ನಿರ್ದೇಶಕರಾದ ಡಾ. ಹಂಸಲೇಖ, ವಿಮೋಚನಾ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಎಲ್. ಪಾಟೀಲ್, ಮಾಜಿ ಶಾಸಕರಾದ ಶ್ರೀ ಚಂದ್ರಕಾಂತ ಬೆಲ್ಲದ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಾದ ಡಾ. ಸಂತೋಷ ಹಾನಗಲ್ಲ, ಗ್ರಂಥಾಲಯ ನಿರ್ದೇಶಕರಾದ ಶ್ರೀ ಸತೀಶಕುಮಾರ ಹೊಸಮನಿ, ಖ್ಯಾತ ಮಾನವ ಕಂಪ್ಯೂಟರ್ ಶ್ರೀ ಬಸವರಾಜ ಉಮ್ರಾಣಿಯವರು ಉಪಸ್ಥಿತರಿದ್ದರು. ಶ್ರೀಮತಿ ಅಪರ್ಣಾ ಮತ್ತು ಶ್ರೀ ಕಲಾದೇಗುಲ ಶ್ರೀನಿವಾಸ್‌ರವರು ಕಾರ್ಯಕ್ರಮ ನಿರೂಪಿಸಿದರು.

**ಪ್ರಶ್ನಿಸುವ ಮನೋಭಾವ ಜ್ಞಾನದ ಕ್ಷಿತಿಜದೆಡೆಗೆ ಕರೆದೊಯುತ್ತದೆ**

ಪ್ರಶ್ನಿಸುವ ಮನೋಭಾವ ಮನುಷ್ಯನನ್ನು ಜ್ಞಾನದ ಕ್ಷಿತಿಜದೆಡೆಗೆ ಕರೆದೊಯ್ಯುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಸೆಪ್ಟಂಬರ್ 26ರಂದು ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆಗಳ ಸಹಯೋಗದಲ್ಲಿ ನಡೆದ ಅಕ್ಕಮಹಾದೇವಿ ಜಯಂತಿ ಮತ್ತು ಕೃತಿಗಳ ಲೋಕಾರ್ಪಣೆಯ ದಿವ್ಯ ಸಾನ್ನಿಧ್ಯ ವಹಿಸಿ ಮನುಷ್ಯನಲ್ಲಿ ಪ್ರಶ್ನೆ ಕೇಳುವ ಭಾವನೆ ವಿಕಸನವಾಗಬೇಕು. ಅದರಿಂದ ಜ್ಞಾನವನ್ನು ಸಂಪಾದಿಸಬಹುದು. ತನ್ಮೂಲಕ ಜ್ಞಾನದ ವಿಸ್ತರಣೆಯೂ ಆಗುತ್ತದೆ. ಸತ್ಯನಿಷ್ಠರಾಗಿ, ಸಹಿಷ್ಣುಗಳಾಗಿ ನಡೆದುಕೊಂಡು, ನಮ್ಮ ಭಾಗದ ಕರ್ತವ್ಯವನ್ನು ಪಾಲಿಸುವುದೇ ನಿಜವಾದ ಧರ್ಮ ಎಂದು ತಿಳಿಸಿದರು.

ಶ್ರೀಮತಿ ಮುಕ್ತಾ ಬಿ. ಕಾಗಲಿಯವರ **'ಶರಣ ಸಂಸ್ಕೃತಿ'** ಮತ್ತು ಶರಣೆ ಎಂ.ಎ. ನೀಲಾಂಬಿಕಾರವರ **'ಬೆಳಗು ಬಾ'** ಕೃತಿಗಳನ್ನು ಬಿಡುಗಡೆಗೊಳಿಸಿದ ಸಚಿವರಾದ ಶ್ರೀಮತಿ ಶಶಿಕಲಾ ಜೊಲ್ಲೆಯವರು ಅಕ್ಕಮಹಾದೇವಿಯ ಆದರ್ಶಗಳನ್ನು ಅರಿತು ನಡೆಯಬೇಕು. ಶರಣರ ಹಾದಿಯಲ್ಲಿ ಸಮಾಜದ ಉನ್ನತಿಗೆ ಶ್ರಮಿಸಬೇಕು. ಉತ್ತಮವಾದ ಜೀವನ ನಡೆಸಲು ಅವರ ವಚನಗಳು ಮಾಗದರ್ಶಿಯಾದವುಗಳು ಎಂದರು.

ಜಗದ್ಗುರು ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಬಸವಾದಿ ಶರಣರ ವಚನಗಳು ಜಾತ್ಯತೀತ ಸಾಹಿತ್ಯವಾಗಿದ್ದು, ಜನರಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸುವಲ್ಲಿ

ಸಹಕಾರಿಯಾಗಿವೆ. ವಿಜ್ಞಾನ–ತಂತ್ರಜ್ಞಾನ ಇಷ್ಟೊಂದು ಮುಂದುವರೆದಿದ್ದರೂ ಜನರು ಈಗಲೂ ಅಂಧಶ್ರದ್ಧೆ ಮತ್ತು ಮೂಢನಂಬಿಕೆಗಳನ್ನು ಉಳಿಸಿಕೊಂಡಿದ್ದಾರೆ. ಆದರೆ ಬಸವಾದಿ ಶರಣರು ಒಂಬತ್ತು ಶತಮಾನಗಳ ಹಿಂದೆಯೇ ಜನರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸಿದರು ಎಂದು ಹೇಳಿದರು.

ಡಾ. ಗೊ.ರು. ಚನ್ನಬಸಪ್ಪನವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಡಾ. ವೀಣಾ ಬನ್ನಂಜೆ ಉಪನ್ಯಾಸ ನೀಡಿದರು. ಪ್ರೊ. ಮಲೆಯೂರು ಗುರುಸ್ವಾಮಿಯವರು ಕೃತಿಗಳನ್ನು ಪರಿಚಯಿಸಿದರು. ನೂತನ ಮೇಯರ್‌ರಾದ ಶ್ರೀಮತಿ ಸುನಂದ ಪಾಲನೇತ್ರರವರನ್ನು ಅಭಿನಂದಿಸಲಾಯಿತು. ಶ್ರೀಮತಿ ಶೈಲಾ ಸಿದ್ಧರಾಮಪ್ಪ ಮತ್ತು ತಂಡದವರು ಶರಣಗೀತೆ ಹಾಡಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿಯವರು ಸ್ವಾಗತಿಸಿದರು. ಶ್ರೀ ಮ.ಗು. ಸದಾನಂದಯ್ಯನವರು ಪ್ರಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ವಿಮಲಾ ಮೂರ್ತಿರವರು ವಂದಿಸಿದರು. ಶ್ರೀಮತಿ ಸುಧಾ ಮೃತ್ಯುಂಜಯಪ್ಪರವರು ಕಾರ್ಯಕ್ರಮ ನಿರೂಪಿಸಿದರು. ಶ್ರೀ ಹೆಳವರ ಹುಂಡಿ ಸಿದ್ದಪ್ಪ, ಶ್ರೀ ಕೆ.ವಿ. ನಾಗರಾಜಮೂರ್ತಿ ಹಾಗೂ ಕದಳಿ ಮಹಿಳಾ ವೇದಿಕೆಯ ಬಳಗಗಳ ಸದಸ್ಯರುಗಳು ಉಪಸ್ಥಿತರಿದ್ದರು.

**ರಾಜೇಂದ್ರ ಶ್ರೀಗಳು ಮತ್ತು ಸಿದ್ಧಗಂಗಾ ಶ್ರೀಗಳು ಸಮಾಜದ ಎರಡು ಕಣ್ಣುಗಳು**

ರಾಜೇಂದ್ರ ಶ್ರೀಗಳು ಮತ್ತು ಸಿದ್ಧಗಂಗಾ ಶ್ರೀಗಳು ಸಮಾಜದ ಎರಡು ಕಣ್ಣುಗಳಿದ್ದಂತೆ ಇದ್ದರು ಎಂದು ಪರಮಪೂಜ್ಯ ಜಗದ್ಗುರುಗಳು ಅಕ್ಟೋಬರ್ 3ರಂದು ಚಾಮರಾಜನಗರ ತಾಲ್ಲೂಕಿನ ಸಂತೇಮರಹಳ್ಳಿಯಲ್ಲಿ ರಾಜೇಂದ್ರ ಶ್ರೀಗಳವರ 106ನೇ ಜಯಂತಿ ಮತ್ತು ಎನ್‌ರಿಚ್ ಟ್ರೇಡರ್ಸ್ ಉದ್ಘಾಟನಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು.

ರಾಜೇಂದ್ರ ಶ್ರೀಗಳು ಸದಾ ಸಾಮಾಜಿಕ ಪರಿವರ್ತನೆ ಹಾಗೂ ಅಭಿವೃದ್ಧಿಪರವಾದ ಚಿಂತನೆ ಮಾಡುತ್ತಿದ್ದರು. ಶ್ರೀಮಠವನ್ನು ಮುನ್ನಡೆಸಿ, ಪುರೋಭಿವೃದ್ಧಿಗೆ ಭದ್ರ ಬುನಾದಿ ಹಾಕಿದರು. ಸಮಾಜದ ಅಭಿವೃದ್ಧಿಗೆ ತಮ್ಮನ್ನು ಸಮರ್ಪಣೆ ಮಾಡಿಕೊಂಡರು. ರಾಜೇಂದ್ರ ಶ್ರೀಗಳು ಚಾಮರಾಜನಗರದ ಸುತ್ತಮುತ್ತಲಿನ ಊರುಗಳಿಗೆ ದಾಸೋಹಕ್ಕಾಗಿ ಧಾನ್ಯ ಸಂಗ್ರಹಿಸಲು ಬಂದರೆ, ಭಕ್ತರು ಗ್ರಾಮಗಳಲ್ಲಿ ಧಾನ್ಯ ಸಂಗ್ರಹಿಸಿ ಎತ್ತಿನಗಾಡಿಗಳಲ್ಲಿ ಮೆರವಣಿಗೆ ಮೂಲಕ ವಿದ್ಯಾರ್ಥಿನಿಲಯಗಳಿಗೆ ತಲುಪಿಸುತ್ತಿದ್ದರು. ಹೀಗಾಗಿ ಶ್ರೀಗಳು ಅನೇಕ ಕಡೆ ಶಾಲೆ ಹಾಗೂ ವಿದ್ಯಾರ್ಥಿನಿಲಯಗಳನ್ನು ಆರಂಭಿಸಿದರು. ಹಳ್ಳಿಗಾಡಿನ ರೈತರ ಮಕ್ಕಳು ಸಹ ಶೈಕ್ಷಣಿಕವಾಗಿ ಹೆಚ್ಚಿನ ಪ್ರಗತಿ ಸಾಧಿಸಬೇಕು ಎಂಬ ಅಭಿಲಾಷೆ ಶ್ರೀಗಳವರದ್ದಾಗಿತ್ತು ಎಂದು ತಿಳಿಸಿದರು.

ಶ್ರೀ ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ರಾಜೇಂದ್ರ ಶ್ರೀಗಳು ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಹಲವಾರು ಸಾಧನೆಗಳನ್ನು ಮಾಡಿದ್ದಾರೆ. ಸಮಾಜ ಸೇವೆಯಲ್ಲಿ ಸ್ವಸೇವೆ ಇರಬಾರದು. ರಾಜೇಂದ್ರ ಶ್ರೀಗಳು ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸಿದರು. ಹಾಗಾಗಿ ಅವರು ಮಹಾನ್ ಸಂತರೆನಿಸಿದರು ಎಂದು ಹೇಳಿದರು.

ಕಾರ್ಯಕಮದಲ್ಲಿ ಹಲವು ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು. ಸಾಲೂರು ಮಠದ ಶ್ರೀಗಳು, ಶಾಸಕರಾದ ಶ್ರೀ ಎನ್. ಮಹೇಶ್, ಮಾಜಿ ಶಾಸಕರುಗಳಾದ ಶ್ರೀ ನಂಜುಂಡಸ್ವಾಮಿ, ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಎಸ್. ಬಾಲರಾಜ್ ಹಾಗೂ ಶ್ರೀಮತಿ ಪರಿಮಳಾ ನಾಗಪ್ಪನವರುಗಳು ಮಾತನಾಡಿದರು.

ಸಾಲೂರು ಮಠ, ಹರವೆ ಮಠ ಮತ್ತು ಮುಡುಕನಪುರ ಮಠಗಳ ಶ್ರೀಗಳು, ಶ್ರೀಮತಿ ನಾಗಶ್ರೀ ಪ್ರತಾಪ್, ಶ್ರೀ ಕೋಡಸೋಗೆ ಶಿವಬಸಪ್ಪ ಮೊದಲಾದವರು ಉಪಸ್ಥಿತರಿದ್ದರು. ಎನ್‌ರಿಚ್ ಶ್ರೀ ಹೆಚ್.ಎಸ್. ಮಹಾದೇವಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಶ್ರೀ ಮಹಾದೇವಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

**ದೃಢಸಂಕಲ್ಪ ಮಾಡಿದರೆ ಯಾವುದೂ ಅಸಾಧ್ಯವಲ್ಲ**

ದೃಢಸಂಕಲ್ಪ ಮಾಡಿದರೆ ಮನುಷ್ಯನಿಗೆ ಯಾವುದೂ ಅಸಾಧ್ಯವಲ್ಲ ಎಂದು ಪರಮಪೂಜ್ಯ ಜಗದ್ಗುರುಗಳು ಚಾಮರಾಜನಗರದ ಶ್ರೀ ಶಿವಕುಮಾರಸ್ವಾಮಿ ಭವನದಲ್ಲಿ ಅಕ್ಟೋಬರ್ 2ರಂದು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಚಾಮರಾಜನಗರದ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ನಡೆದ ಕುಡಿತ ಬಿಡಿಸುವ ಹತ್ತನೆಯ ಶಿಬಿರದ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವದಿಸುತ್ತ ತಿಳಿಸಿದರು.

ಕುಡಿತದ ಅಮಲಿಗೆ ಒಳಗಾದವರನ್ನು ಅದರಿಂದ ಬಿಡುಗಡೆಗೊಳಿಸಲು ಯಾವುದೇ ಔಷಧಿ ಇಲ್ಲ. ಕೆಟ್ಟ ಅಭ್ಯಾಸ ರೂಢಿಸಿಕೊಳ್ಳುವುದು ಸುಲಭ. ಆದರೆ ಅದನ್ನು ತ್ಯಜಿಸುವುದು ಕಷ್ಟದ ಕೆಲಸ. ಕುಡಿತದ ಚಟದಿಂದ ಪ್ರತಿನಿತ್ಯ ಮನೆಗಳಲ್ಲಿ ಉಂಟಾಗುವ ಕಲಹವು ಆ ಕುಟುಂಬದ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಹಾಗಾಗಿ ಈ ಚಟಕ್ಕೆ ಒಳಗಾದವರು ದೃಢ ಸಂಕಲ್ಪ ಮಾಡಿ ಮದ್ಯಪಾನವನ್ನು ಬಿಡಬೇಕು ಎಂದು ತಿಳಿಸಿದರು.

ಸಂಸದರಾದ ಶ್ರೀ ವಿ. ಶ್ರೀನಿನಿವಾಸ ಪ್ರಸಾದ್‌ರವರು ಕುಡಿತವು ಇಂದು ಸರ್ವವ್ಯಾಪಿಯಾಗಿದೆ. ಕುಡಿತ ಉಂಟು ಮಾಡುವ ಸಮಸ್ಯೆಯನ್ನು ವರ್ಣನೆ ಮಾಡಲು ಸಾಧ್ಯವಿಲ್ಲ. ಕುಡಿತಕ್ಕೆ ಒಳಗಾದವರು ಕುಟುಂಬಕ್ಕೆ ಕಷ್ಟ ಕೊಡುತ್ತಾರೆ. ಇದರಿಂದ

ಅವರ ಮಕ್ಕಳಿಗೆ ಸರಿಯಾದ ಶಿಕ್ಷಣ ಸಿಗುವುದಿಲ್ಲ. ಹಾಗಾಗಿ ಇಲ್ಲಿನ ಶಿಬಿರಾರ್ಥಿಗಳು ಕುಡಿತ ಬಿಟ್ಟು ಒಳ್ಳೆಯವರಾಗಿ ಬದುಕಬೇಕು ಎಂದು ಸಲಹೆ ನೀಡಿದರು.

ಹರವೆ ಶ್ರೀಗಳು, ಶಾಸಕರುಗಳಾದ ಶ್ರೀ ಸಿ. ಪುಟ್ಟರಂಗಶೆಟ್ಟಿ ಮತ್ತು ಶ್ರೀ ಎನ್. ಮಹೇಶ್ ಮಾತನಾಡಿದರು. ಶ್ರೀ ಕೃಷ್ಣಕುಮಾರ್ ಮತ್ತು ಶ್ರೀ ಶಾಂತರಾಜ್ ಅನಿಸಿಕೆ ಹಂಚಿಕೊಂಡರು. ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಕಾತ್ಯಾಯಿನಿದೇವಿ ಉಪಸ್ಥಿತರಿದ್ದರು. ಶ್ರೀ ಚಂದ್ರಶೇಖರ್ ಪ್ರಾರ್ಥಿಸಿದರು. ಶ್ರೀ ಆರ್.ಎಂ. ಸ್ವಾಮಿ ಸ್ವಾಗತಿಸಿದರು. ಡಾ. ಎಂ.ಪಿ. ಸೋಮಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಪ್ರಭುಸ್ವಾಮಿ ವಂದಿಸಿದರು. ಶ್ರೀ ಬಿ.ಕೆ. ರವಿಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ಲೌಕಿಕ ಜೀವನದಲ್ಲೂ ಪಾರಮಾರ್ಥಿಕ ಸಾಧನೆ ಸಾಧ್ಯ**

ಲೌಕಿಕ ಜೀವನದಲ್ಲೂ ಪಾರಮಾರ್ಥಿಕ ಸಾಧನೆ ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳು ಅಕ್ಟೋಬರ್ 8ರಂದು ಟಿ. ನರಸೀಪುರದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ 'ಶಿವಜ್ಞಾನ ದರ್ಶನ ಭವನ'ದ ಉದ್ಘಾಟನೆಯ ದಿವ್ಯ ಸಾನ್ನಿಧ್ಯವನ್ನು ವಹಿಸಿ ಮಾತನಾಡುತ್ತಾ ತಿಳಿಸಿದರು.

ಲೌಕಿಕ ಕಾರ್ಯ ವ್ಯವಹಾರವನ್ನು ಮಾಡುತ್ತಿದ್ದರೂ ಅಲೌಕಿಕ ಪಾರಮಾರ್ಥಿಕತೆಯನ್ನು ಸಾಧಿಸಬಹುದು ಎಂಬ ಸಂದೇಶದಡಿ ಬ್ರಹ್ಮಬಾಬಾರವರು ಹಾಕಿಕೊಟ್ಟ ಬುನಾದಿ ಇಂದು ವಿಶ್ವದಾದ್ಯಂತ ಹೆಮ್ಮರವಾಗಿ ಬೆಳೆದಿದೆ. ಅವರು ಶ್ರೀಮಂತರಾಗಿದ್ದರೂ ಆಧ್ಯಾತ್ಮಿಕ ಮತ್ತು ಶಿವಜ್ಞಾನ ದರ್ಶನವನ್ನು ಜಗತ್ತಿನ ಮೂಲೆಮೂಲೆಗಳಿಗೆ ತಲುಪಿಸುವ ಹಂಬಲ ಹೊಂದಿದ್ದರು. ಬ್ರಹ್ಮಕುಮಾರಿ ವಿಶ್ವವಿದ್ಯಾಲಯಕ್ಕೆ ಬರುವವರೆಲ್ಲರೂ ಆಧ್ಯಾತ್ಮ ಸಾಧನೆ ಮಾಡುತ್ತಾ ಆತ್ಮತೃಪ್ತಿ, ಪ್ರೀತಿ–ವಿಶ್ವಾಸಗಳಿಂದ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ ಎಂದರು ಹೇಳಿದರು.

ಅಬುಪರ್ವತದ ಬ್ರಹ್ಮಕುಮಾರೀಸ್ ಮೀಡಿಯಾ ವಿಭಾಗದ ಮುಖ್ಯಸ್ಥರಾದ ರಾಜಯೋಗಿ ಬ್ರಹ್ಮಕುಮಾರ ಕರುಣಾಜಿ ನೂತನ ಕಟ್ಟಡವನ್ನು ಉದ್ಘಾಟಿಸಿದರು. ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ ಅಧ್ಯಕ್ಷತೆ ವಹಿಸಿದ್ದರು. ರಾಜಯೋಗಿ ಬಿ.ಕೆ. ಲಲಿತ್‌ಜಿ ಇನಾನಿ ಉಪಸ್ಥಿತರಿದ್ದರು. ಲಾಸ್ಯ ತಂಡದವರು ದಿವ್ಯಗೀತೆ ಹಾಡಿದರು. ಶ್ರೀ ಬಿ.ಕೆ. ರಾಮಚಂದ್ರರಾವ್ ಸ್ವಾಗತಿಸಿದರು. ಶ್ರೀ ಬಿ.ಕೆ. ರಂಗನಾಥ್ ಕಾರ್ಯಕ್ರಮ ನಿರೂಪಿಸಿದರು.

□

# ಪ್ರಸಾದ



## ಕೃತಿ-ಸ್ವೀಕೃತಿ

**ಬಸವಣ್ಣ: ಶರಣಗಣ ಸಂಘಟನೆ**
ಲೇ: ಡಾ. ವೀರಣ್ಣದಂಡೆ
ಪ್ರ.: ನ್ಯಾಯಮೂರ್ತಿ ಚನ್ನಮಲ್ಲಪ್ಪ ರುದ್ರಪ್ಪ, ಬೆನಕನಹಳ್ಳಿ ಪ್ರತಿಷ್ಠಾನ ಕಲಬುರಗಿ
ಪು. 80, ಬೆಲೆ: 40/-

**ಕೃಷಿ ಚೇತನ**
ಸಂ: ಪ್ರೊ. ವಿಜಯಕುಮಾರ ಗಿಡ್ನವರ
ಪ್ರ.: ನಿಜಲಿಂಗೇಶ್ವರ ಗ್ರಂಥಮಾಲೆ ಜಗದ್ಗುರು ಶ್ರೀ ದುರದುಂಡೀಶ್ವರ ಸಿದ್ಧಸಂಸ್ಥಾನ ಮಠ, ನಿಡಸೋಸಿ ಬೆಳಗಾವಿ ಜಿಲ್ಲೆ.
ಪು. 210, ಬೆಲೆ: 200/-

**ಶರಣೆ ಆಯ್ದಕ್ಕಿ ಲಕ್ಕಮ್ಮ**
ಲೇ: ಪ್ರೊ. ಶಂಕರಗೌಡ ಮ. ಬಿರಾದಾರ (ಗುಂಡಕನಾಳ)
ಪ್ರ.: ಬೆನಕ ಗ್ರಾಫಿಕ್ಸ್, ತುಮಕೂರು
ಪು. 36, ಬೆಲೆ: 10/-

**ವೈಷ್ಣವದಿಂದ ಶ್ರೀವೈಷ್ಣವಕ್ಕೆ ಪೂರ್ವ–ರಾಮಾನುಜ ಯುಗದಲ್ಲಿ ಕರ್ನಾಟಕದ ಶ್ರೀವೈಷ್ಣವ ಅಗ್ರಹಾರಗಳು**
ಲೇ: ಡಾ. ಷ. ಶೆಟ್ಟರ್
ಪ್ರ.: ಅಭಿನವ, ವಿಜಯನಗರ ಬೆಂಗಳೂರು
ಪು. 80, ಬೆಲೆ: 100/-

**ಮಣ್ಣಿನ ಮಗ ರಾಜಕಾರಣಕ್ಕೆ ಮತ್ತೊಂದು ಹೆಸರು**
ಲೇ: ನೇ.ಭ. ರಾಮಲಿಂಗಶೆಟ್ಟಿ
ಪ್ರ.: ಸ್ನೇಹ ಬುಕ್ ಹೌಸ್ ಶ್ರೀನಗರ, ಬೆಂಗಳೂರು

**ಜಲಗಣಮನ ಗ್ರಾಮಾಭ್ಯುದಯದ ಹಸಿರು ಅರ್ಥಶಾಸ್ತ್ರ**
ಶಿವಾನಂದ ಕಳವೆ
ಪ್ರ.: The President Golden Jubilee Celebration Committee of Dharmadhikari Dr. D. Veerendra Heggade Swearing in as Pattadhikari of Srikshetra Dharmasthala
ಪು. 200. ಬೆಲೆ: 150/-

**ಧರ್ಮಸ್ಥಳ ಬಹುಮುಖ**
ಪ್ರೊ. ಎಂ. ರಾಮಚಂದ್ರ, ಕಾರ್ಕಳ
ಪ್ರ.: The President Golden Jubilee Celebration Committee of Dharmadhikari Dr. D. Veerendra Heggade Swearing in as Pattadhikari of Srikshetra Dharmasthala
ಪು. 256. ಬೆಲೆ: 150/-

**ಜ್ಞಾನಯಜ್ಞ**
ಡಾ. ಚಂದ್ರಶೇಖರ ದಾಮ್ಲೆ
ಡಾ. ಆರ್.ಟಿ. ಜಂತಲಿ
ಪ್ರ.: The President Golden Jubilee Celebration Committee of Dharmadhikari Dr. D. Veerendra Heggade Swearing in as Pattadhikari of Srikshetra Dharmasthala
ಪು. 268. ಬೆಲೆ: 150/-

**ಕದಂಬ–75**
ಸಂ.: ಡಾ. ವೈ.ಡಿ. ರಾಜಣ್ಣ
ಪ್ರ.: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
ವಿಜಯನಗರ
ಮೈಸೂರು
ಪು. 68. ಬೆಲೆ: 150/-

**ಶರಣರ ಸಾಮಾಜಿಕ ಸಿದ್ಧಾಂತಗಳು**
ಡಾ. ಬಸವರಾಜ ಸಬರದ
ಪ್ರ.: ಬಸವ ಧರ್ಮ ಪ್ರಸಾರ ಸಂಸ್ಥೆ
ಹಿರೇಮಠ ಸಂಸ್ಥಾನ, ಭಾಲ್ಕಿ
ಪು. 140. ಬೆಲೆ: 100/-

**ನೀಲ ಆಕಾಶ ಈ ತನಕದ ಕವಿತೆಗಳು**
ಡಾ. ನಾ. ಮೊಗಸಾಲೆ, ಕಾಂತಾವರ
ಪ್ರ.: ಸ್ನೇಹ ಎಂಟರ್ ಪ್ರೈಸಸ್
ಹಂಪಿನಗರ, ಬೆಂಗಳೂರು
ಪು. 960. ಬೆಲೆ: 750/-

**ಶ್ರೀ ಸುತ್ತೂರೇಶ್ವರ ಶತಕಗಳು**
ಎಸ್.ಎಸ್. ಸಿಂಪಿಗೇರ
ಪ್ರ.: ಶ್ರೀ ರಾಮ ಪ್ರಕಾಶನ, ವಿಜಯಪುರ
¥Â180. ಬೆಲೆ: 100/-

**ನಾರಾಯಣಗುರುಗಳ ಆಪ್ತ ಡಾ. ಪದ್ಮನಾಭನ್ ಪಲ್ಪು**
ಲಕ್ಷ್ಮಣ ಕೊಡಸೆ
ಪ್ರ.: ವಿಕ್ರಂ ಪ್ರಕಾಶನ
ಭುವನೇಶ್ವರಿ ನಗರ, ಬೆಂಗಳೂರು
ಪು. 108. ಬೆಲೆ: 115/-

**ಕರ್ನಾಟಕ–ಮಹಾರಾಷ್ಟ್ರ ಸಾಂಸ್ಕೃತಿಕ ಅಧ್ಯಯನಗಳ ತಾತ್ತ್ವಿಕತೆ**
ಡಾ. ಎ.ಬಿ. ಘಾಟಗೆ, ಬೆಳಗಾವಿ
ಪ್ರ.: ಕನ್ನಡ ಜಾಗೃತಿ ಪುಸ್ತಕಮಾಲೆ
ಅಲ್ಲಮಪ್ರಭು ಸಿದ್ಧಸಂಸ್ಥಾನ ಮಠ
ಚಿಂಚಣಿ, ಚಿಕ್ಕೋಡಿ ತಾ.
ಪು. 400. ಬೆಲೆ: 300/-

---

## ಲೇಖಕರ ವಿಳಾಸ

**ಡಾ. ಬಸವರಾಜ ಸಾದರ**
ನಂ. 5, 4 ನೆಯ ಕ್ರಾಸ್
ಬಾಲಾಜಿ ಪ್ಯಾರಡೈಜ್ ಎಫ್–4
ಭುವನೇಶ್ವರಿ ನಗರ
ಹೆಬ್ಬಾಳ–ಕೆಂಪಾಪುರ
ಬೆಂಗಳೂರು 560024
ಮೊ.: 9886985847

**ರಂಜಾನ್ ದರ್ಗಾ**
'ವಚನ', ಸಿದ್ಧಾರೂಢ ಕಾಲನಿ
ಮದಿಹಾಳ
ಧಾರವಾಡ 580006
ಮೊ.: 8660173149

**ಡಾ. ಸಿ. ನಾಗಣ್ಣ**
ನಂ. 3195, 21/ಸಿ ಮುಖ್ಯ ರಸ್ತೆ
ವಿಜಯನಗರ 2ನೇ ಹಂತ
ಮೈಸೂರು 570 017
ಮೊ.: 9980781602

**ನಗರ್ಲೆ ಶಿವಕುಮಾರ**
ಬಿನ್ ಎನ್.ಎಸ್. ರಾಜಶೇಖರ
ನಗರ್ಲೆ–571129
ನಂಜನಗೂಡು ತಾ.
ಮೊ: 9845609652


**ಪ್ರೊ. ಆರ್.ಎಂ. ಚಿಂತಾಮಣಿ**
ನಿವೃತ್ತ ಪ್ರಾಧ್ಯಾಪಕರು
ನಂ. 363, 'ಗೂಡಿ'
13ನೇ ಕ್ರಾಸ್, 9ನೇ ಮೇನ್
'ಬಿ' ಬ್ಲಾಕ್, ಜೆ.ಪಿ.ನಗರ
ಮೈಸೂರು
ದೂ: 0821–2372525



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಕೇಂದ್ರದ ನೂತನ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವರಾದ ಕು. ಶೋಭಾ ಕರಂದ್ಲಾಜೆಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಸಂಸದರಾದ ಶ್ರೀ ಪ್ರತಾಪ ಸಿಂಹ, ಶ್ರೀ ಸಿದ್ಧರಾಜು, ಮಾಜಿ ಸಚಿವರಾದ ಶ್ರೀ ಸಿ.ಹೆಚ್. ವಿಜಯಶಂಕರ್, ಶಾಸಕರಾದ ಶ್ರೀ ಎಲ್. ನಾಗೇಂದ್ರ, ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್ ಮೂಡಾ ಅಧ್ಯಕ್ಷರಾದ ಶ್ರೀ ಎಚ್.ವಿ. ರಾಜೀವ್ ಮೊದಲಾದವರುಗಳಿದ್ದಾರೆ (17.8.2021)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ನೂತನ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ವಿ. ಸುನೀಲ್ ಕುಮಾರ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು (25.8.2021)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ನೂತನ ಗೃಹ ಸಚಿವರಾದ ಶ್ರೀ ಅರಗ ಜ್ಞಾನೇಂದ್ರರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು (27.8.2021)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ನೂತನ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರಾದ ಶ್ರೀ ಹಾಲಪ್ಪ ಆಚಾರ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಸಂಸದರಾದ ಶ್ರೀ ಪ್ರತಾಪ ಸಿಂಹ, ಶ್ರೀ ಎನ್.ವಿ. ಫಣೀಶ್ ಮೊದಲಾದವರುಗಳಿದ್ದಾರೆ (27.8.2021)




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರೋಪ ಹಾಗೂ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೆಯ ಜಯಂತಿ ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಂಶುಪಾಲರಾದ ಡಾ. ಎಂ. ಕೃಷ್ಣೇಗೌಡ ಮಾತನಾಡುತ್ತಿರುವುದು. ಡಾ. ಸಿ.ಜಿ. ಉಷಾದೇವಿ, ಡಾ. ಕೆ. ಅನಂತರಾಮು ರವರುಗಳಿದ್ದಾರೆ (7.9.2021)



ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ಆವರಣದಲ್ಲಿ ಕುಡಿತದ ಸಮಸ್ಯೆಯಿಂದ ಮುಕ್ತರಾಗ ಬಯಸುವವರಿಗೆ ಆಪ್ತ ಸಮಾಲೋಚನಾ ಕೇಂದ್ರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಪ್ರಾರಂಭಿಸಲಾಯಿತು. ಶ್ರೀ ಜಯರಾಜೇಂದ್ರರು, ಹುಲಿಯೂರು ದುರ್ಗ, ಮಾದಳ್ಳಿ, ವಾಟಾಳು ಮತ್ತು ಚುಂಚನಹಳ್ಳಿ ಮಠಗಳ ಶ್ರೀಗಳು, ಪರಂಪರೆಯ ಶ್ರೀ ಕೃಷ್ಣಕುಮಾರವರುಗಳಿದ್ದಾರೆ (13.9.2021)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರು ಭೇಟಿನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ವಿಶ್ರಾಂತ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪ, ಶ್ರೀ ಕೆ.ವಿ. ಮಲ್ಲೇಶ್, ಶಾಸಕರುಗಳಾದ ಶ್ರೀ ಕೆ. ಮಹದೇವ್, ಶ್ರೀ ಸಾ.ರಾ. ಮಹೇಶ್, ಶ್ರೀ ಸಿ.ಎಸ್. ಪುಟ್ಟರಾಜು ಹಾಗೂ ಶ್ರೀ ಎನ್. ಅಶ್ವಿನ್‌ಕುಮಾರ್ ಮೊದಲಾದವರುಗಳಿದ್ದಾರೆ (9.9.2021)




ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳ 34ನೇ ಚಾತುರ್ಮಾಸ್ಯ ಮಹೋತ್ಸವ ಸಂದರ್ಭದಲ್ಲಿ ಏರ್ಪಾಡಾಗಿದ್ದ ಪ್ರಾತ್ಯಕ್ಷಿಕ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳು ಪಾಲ್ಗೊಂಡಿದ್ದರು (14.9.2021)



ಮೈಸೂರಿನ ಜಿಲ್ಲಾ ಸಾಹಿತ್ಯ ಭವನದಲ್ಲಿ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ಸಂಯುಕ್ತಾಶ್ರಯದಲ್ಲಿ ನಾಡೋಜ ಡಾ. ಮನು ಬಳಿಗಾರರವರ 'ಮೈ ಫಾದರ್' ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರು ಲೋಕಾರ್ಪಣೆಗೊಳಿಸಿದರು. ಶ್ರೀ ಎಂ. ಚಂದ್ರಶೇಖರ್, ಡಾ. ವೈ.ಡಿ. ರಾಜಣ್ಣ, ಪ್ರೊ. ಬಸವರಾಜ ಡೋಣೂರ, ಡಾ. ಎ.ವಿ. ನರಸಿಂಹಮೂರ್ತಿ ಪ್ರೊ. ನೀಲಗಿರಿ ತಳವಾರ್ ಹಾಗೂ ಶ್ರೀ ಟಿ.ಎಸ್. ಛಾಯಾಪತಿರವರುಗಳಿದ್ದಾರೆ (17.9.2021)




ಮೈಸೂರಿನ ಮುಕ್ತಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಪ್ರಶಸ್ತಿ ವಿಜೇತ ಮಕ್ಕಳ ಚಲನಚಿತ್ರ 'ಪದಕ' ಸಿನಿಮಾದ ಟ್ರೈಲರ್ ಮತ್ತು ಪೋಸ್ಟರ್‌ನ್ನು ಪರಮಪೂಜ್ಯ ಜಗದ್ಗುರುಗಳು ಬಿಡುಗಡೆಗೊಳಿಸಿದರು. ಶ್ರೀ ಸಿ. ಮಲ್ಲಿಕ್, ಶ್ರೀ ಉಮೇಶ್, ಶ್ರೀ ಚಂದ್ರಶೇಖರ್, ಶ್ರೀ ಆದಿತ್ಯ ಆರ್. ಚಿರಂಜೀವಿ ಹಾಗೂ ಶ್ರೀಮತಿ ಮಿಲನಾ ಮುರಗೋಡು ಮೊದಲಾದವರುಗಳಿದ್ದಾರೆ (19.9.2021)



ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ವೀರ ವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಘ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಮತ್ತು ಜಿಲ್ಲಾ ಯುವ ಘಟಕಗಳ ಸಹಯೋಗದೊಂದಿಗೆ ಹಾನಗಲ್ಲ ಶ್ರೀ ಕುಮಾರ ಮಹಾಸ್ವಾಮಿಗಳವರ 154ನೇ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮಹಾಸಭಾದ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಬಿ.ವೈ. ಅರುಣಾದೇವಿಯವರು ಉದ್ಘಾಟಿಸಿದರು. ಮೇಯರ್ ಶ್ರೀಮತಿ ಸುನಂದಾ ಪಾಲನೇತ್ರ, ಕುಂದೂರು ಮಠದ ಶ್ರೀಗಳು, ಶ್ರೀ ಬಿ.ಎಸ್. ಪರಮಶಿವಯ್ಯ, ಶ್ರೀ ಮನೋಹರ್ ಅಬ್ಬಿಗೆರೆ, ಶ್ರೀ ಲೋಕೇಶ್‌ಕುಮಾರ್, ಶ್ರೀ ವರುಣಾ ಮಹೇಶ್ ಮೊದಲಾದವರುಗಳಿದ್ದಾರೆ (26.9.2021)




ಮಂಡ್ಯದ ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ಹಾಗೂ ಅಭಿನವ ಭಾರತಿ ಶಿಕ್ಷಣ ಟ್ರಸ್ಟ್ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶ್ರೀ ಅನಂತಕುಮಾರಸ್ವಾಮಿಗಳವರ ಪ್ರಥಮ ಪುಣ್ಯಸ್ಮರಣೆ ಹಾಗೂ ಅನಂತ ಧ್ಯಾನ ಮಂದಿರ ಉದ್ಘಾಟನೆ ಕಾರ್ಯಕ್ರಮ. ಮಾಜಿ ಸಚಿವರಾದ ಶ್ರೀ ಚೆಲುವರಾಯಸ್ವಾಮಿ, ಅವಧೂತ ಶ್ರೀ ವಿನಯ್ ಗುರೂಜಿ, ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ಗೋ. ಮಧುಸೂಧನ್, ಶ್ರೀ ಹೆಚ್.ಎಸ್. ಮಂಜು, ಶ್ರೀ ಶಿವಮೂರ್ತಿ ಕಿಲಾರರವರುಗಳಿದ್ದಾರೆ (27.9.2021)




ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಒಂದು ದಿನದ ವಿಚಾರ ಸಂಕಿರಣವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ಡಾ. ಬಿ. ಸದಾಶಿವೆಗೌಡ, ಶ್ರೀ ಪಿ. ವಿಶ್ವನಾಥ್, ಶ್ರೀ ಗುಂಡಪ್ಪಗೌಡ, ಮೈಸೂರು ಆದಿಚುಂಚನಗಿರಿ ಶಾಖಾಮಠದ ಶ್ರೀ ಸೋಮನಾಥಾನಂದ ಸ್ವಾಮಿಗಳು, ವಿಟಿಯು ಕುಲಪತಿಗಳಾದ ಪ್ರೊ. ಕರಿಸಿದ್ದಪ್ಪ, ಶಾಸಕರಾದ ಶ್ರೀ ಎಲ್. ನಾಗೇಂದ್ರ, ಶ್ರೀ ಶ್ರೀಶೈಲ ರಾಮಣ್ಣವರ ಹಾಗೂ ಶ್ರೀ ಟಿ. ತಮಣ್ಣರವರುಗಳಿದ್ದಾರೆ (27.9.2021)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಕೇಂದ್ರದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಹಾಗೂ ರಸಗೊಬ್ಬರ ಮತ್ತು ರಾಸಾಯನಿಕ ಖಾತೆ ರಾಜ್ಯ ಸಚಿವರಾದ ಶ್ರೀ ಭಗವಂತ ಖೂಬಾರವರು ಭೇಟಿನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಶ್ರೀ ಅಪ್ಪಣ್ಣ, ಸಂಸದರಾದ ಶ್ರೀ ಪ್ರತಾಪ ಸಿಂಹ, ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ ಮೊದಲಾದವರುಗಳಿದ್ದಾರೆ (1.10.2021)



ಸುತ್ತೂರು ಶ್ರೀಕ್ಷೇತ್ರಕ್ಕೆ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಾದ ಶ್ರೀ ಬಿ.ಸಿ. ನಾಗೇಶ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರಿಗೆ ರಾಷ್ಟ್ರೀಯ ಶಿಕ್ಷಣ ನೀತಿಯ ಕನ್ನಡ ಅವತರಣಿಕೆಯನ್ನು ಸಲ್ಲಿಸಿ, ಚರ್ಚಿಸಿದರು. ಚಿತ್ರದಲ್ಲಿ ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ಗೋ.ಮಧುಸೂದನ್ ಮೊದಲಾದವರಿದ್ದಾರೆ (2.10.2021)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವರಾದ ಶ್ರೀ ಎ. ನಾರಾಯಣಸ್ವಾಮಿಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಶ್ರೀ ಎಂ. ಶಿವಣ್ಣ, ಶ್ರೀ ಎನ್.ವಿ. ಫಣೀಶ್ ಮೊದಲಾದವರುಗಳಿದ್ದಾರೆ (3.10.2021)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. (3.10.2021)



ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಶ್ರೀಮಠಕ್ಕೆ ಆಗಮಿಸಿ ಪೂಜ್ಯರನ್ನು ಭೇಟಿ ಮಾಡಿ "ಕರ್ನಾಟಕ ವಿಧಾನಸಭೆ–ಎರಡು ವರ್ಷದ ಸಾಧನೆಗಳು" ಹಾಗೂ ಸೆಪ್ಟಂಬರ್ 24ರಂದು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ "ಪ್ರಜಾಪ್ರಭುತ್ವ–ಸಂಸದೀಯ ಮೌಲ್ಯಗಳ ರಕ್ಷಣೆ" ಕುರಿತು ಮಾಡಿದ ಭಾಷಣದ ಪ್ರತಿಗಳನ್ನು ಪೂಜ್ಯರಿಗೆ ನೀಡಿ ಸಮಾಲೋಚಿಸುತ್ತಿರುವುದು. ಶ್ರೀ ಮಾರುತಿರಾವ್ ಪವಾರ್, ಶ್ರೀ ಎನ್.ವಿ. ಫಣೀಶ್, ಮೊದಲಾದವರಿದ್ದಾರೆ (7.10.2021)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಸಂತೋಷ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಶ್ರೀ ಪ್ರತಾಪ ಸಿಂಹ, ಡಾ. ಬಿ. ಸುರೇಶ್, ಶ್ರೀ ಬಿ.ಪಿ. ಅರುಣ್‌ಕುಮಾರ್ ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಶ್ರೀವತ್ಸ, ಮೊದಲಾದವರಿದ್ದಾರೆ (14.10.2021)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ದಸರಾ ಉದ್ಘಾಟನೆಗೆ ಆಗಮಿಸಿದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಂ. ಕೃಷ್ಣರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಮೇಯರ್ ಶ್ರೀಮತಿ ಸುನಂದಾ ಪಾಲನೇತ್ರ, ಶ್ರೀ ರಾಘವೇಂದ್ರ ಶಾಸ್ತ್ರೀ, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ, ಡಾ. ಸಿ.ಜಿ. ಬೆಟಸೂರ ಮಠ, ಸಚಿವರಾದ ಶ್ರೀಮತಿ ಶಶಿಕಲಾ ಜೊಲ್ಲೆ, ಸಂಸದರಾದ ಶ್ರೀ ಅಣ್ಣಾಸಾಹೇಬ್ ಜೊಲ್ಲೆ, ಡಾ. ಸುಶ್ರುತ್ ಹಾಗೂ ಡಾ. ಸಂತೃಪ್ತ್ ಮೊದಲಾದವರಿದ್ದಾರೆ (7.10.2021)



ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆಗಳ ಪರಮಪೂಜ್ಯ ಜಗದ್ಗುರುಗಳು ಹಾಗೂ ಗದಗಿನ ಶ್ರೀ ತೋಂಟದಾರ್ಯ ಮಠದ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನಡೆದ ಅಕ್ಕಮಹಾದೇವಿ ಜಯಂತಿಯಲ್ಲಿ 'ಶರಣ ಸಂಸ್ಕೃತಿ' ಮತ್ತು 'ಬೆಳಗು ಬಾ' ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು. ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಶ್ರೀಮತಿ ಎಂ.ಎ. ನೀಲಾಂಬಿಕಾ, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಡಾ, ವೀಣಾ ಬನ್ನಂಜೆ, ಶ್ರೀಮತಿ ಸುನಂದಾ ಪಾಲನೇತ್ರ, ಸಚಿವರಾದ ಶ್ರೀಮತಿ ಶಶಿಕಲಾ ಜೊಲ್ಲೆ, ಡಾ. ಗೊರುಚ, ಪ್ರೊ. ಮಲೆಯೂರು ಗುರುಸ್ವಾಮಿ, ಶ್ರೀ ಮ.ಗು. ಸದಾನಂದಯ್ಯ ಹಾಗೂ ಶ್ರೀ ಹೆಳವರಹುಂಡಿ ಸಿದ್ಧಪ್ಪರವರುಗಳಿದ್ದಾರೆ (26.9.2021)

Registered with the Registrar of Newspapers in India Under No. 50622/86
'Prasada' Bi-Monthly, Vol. 36 Issue No. 5, September-October 2021




ಬೆಂಗಳೂರಿನ ವಿಜಯನಗರದ ಶ್ರೀ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಅಥಣಿ ಶ್ರೀ ಮೋಟಗಿಮಠ ಶ್ರೀ ಪ್ರಭುಚನ್ನಬಸವ ಸ್ವಾಮಿಗಳು ರಚಿಸಿರುವ 'ಮಹಾತ್ಮರ ಚರಿತಾಮೃತ' ಗ್ರಂಥವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಲೋಕಾರ್ಪಣೆಗೊಳಿಸಿದರು. ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಟಿ.ಎ. ನಾರಾಯಣಗೌಡ, ಶ್ರೀ ವಿ. ಸೋಮಣ್ಣ, ಪರಮಪೂಜ್ಯ ಜಗದ್ಗುರುಗಳು, ಡಾ. ಸಿ. ಸೋಮಶೇಖರ್, ಗದಗಿನ ಶ್ರೀ ತೋಂಟದಾರ್ಯ ಮಠದ ಜಗದ್ಗುರುಗಳು, ಶ್ರೀ ಪ್ರಭುಚನ್ನಬಸವ ಸ್ವಾಮಿಗಳು, ಭಾಲ್ಕಿ ಶ್ರೀ ಪಟ್ಟದ್ದೇವರುಗಳವರಿದ್ದಾರೆ (25.9.2021)

ಬಿಡಿ ಪ್ರತಿ: ರೂ. 10

e-mail: prasadamagazine@gmail.com * www.jssonline.org